# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜುಲೈ, ೨೦೧೫

ಸಂಪುಟ: ೪ ಸಂಚಿಕೆ: ೧೨

ಸಂಪಾದಕ : ಡಿ.ಎಸ್.ನಾಗಭೂಷಣ

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/- ಪುಟ: ೨೪

**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೮೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಮೋದಿ ಸರ್ಕಾರ ಬಹುದೊಡ್ಡ ಸಂಕಟಕ್ಕೆ ಸಿಕ್ಕಿಕೊಂಡಂತಿದೆ. ಅದು ಪಕ್ಷ ಮತ್ತು ಸರ್ಕಾರಗಳೆರಡರ ಮೂಲ ಪ್ರಾಮಾಣಿಕತೆಯನ್ನೇ ಜನ ಅನುಮಾನಿಸುವಂತಾಗಿರುವ ಸಂಕಟ. ಈ ಸಂಚಿಕೆ ನಿಮ್ಮ ಕೈಸೇರುವ ಹೊತ್ತಿಗೆ ಈ ಸಂಕಟ ಯಾವ ರೂಪ ತಾಳಿರುವುದೋ ಹೇಳಲಾಗದಿದ್ದರೂ, ಅದು ಮೋದಿಯವರು ಪಕ್ಷ ಮತ್ತು ಸರ್ಕಾರಗಳೆರಡರ ಮೇಲೂ ನಿಯಂತ್ರಣ ಸಾಧಿಸಿ ಅವು ಹಾದಿ ತಪ್ಪದಂತೆ ನಿಗಾ ಇಟ್ಟಿದ್ದಾರೆ ಎಂಬ ಜನರ ನಂಬಿಕೆಯನ್ನಂತೂ ಹುಸಿಗೊಳಿಸಿದೆ. ಅವರ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಆರ್ಥಿಕ ಅಪರಾಧಗಳನ್ನು ಗೈದು ವಿಚಾರಣೆಯನ್ನು ತಪ್ಪಿಸಿಕೊಳ್ಳಲು ದೇಶ ಬಿಟ್ಟು ಪಲಾಯನ ಮಾಡಿ ಲಂಡನ್‌ನಲ್ಲಿ ನೆಲೆಯೂರಿರುವ ಲಲಿತ್ ಮೋದಿ ಎಂಬ ಕೇಡಿಯೊಂದಿಗೆ ಕೌಟುಂಬಿಕ ಮತ್ತು ಆತ್ಮೀಯ ವಾಣಿಜ್ಯ ಸಂಬಂಧವಿರಿಸಿಕೊಂಡಿರುವುದಲ್ಲದೆ, ತನ್ನ ಅಧಿಕಾರದ ದುರ್ಬಳಕೆ ಮಾಡಿ ಆತ ಈಗ ನಿರ್ಬಂಧದಲ್ಲಿರುವ ಇಂಗ್ಲೆಂಡ್‌ನಿಂದ ಹೊರಹೋಗಲು ಸಹಾಯ ಮಾಡಿದ್ದಾರೆ ಎಂಬುದು ಬಯಲಾಗಿದೆ. ಇನ್ನು ಈ ಪಕ್ಷದ ಹಿರಿಯ ನಾಯಕಿಯೂ ಮತ್ತು ರಾಜಸ್ತಾನದ ಮುಖ್ಯ ಮಂತ್ರಿಯೂ ಆದ ವಸುಂಧರಾರಾಜೇ ಸಿಂಧ್ಯಾ ಇದೇ ಅಪರಾಧಿ ಲಂಡನ್‌ನಲ್ಲಿ ಸುರಕ್ಷಿತವಾಗಿರಲು ಅನುಕೂಲವಾಗುವಂತೆ ಬ್ರಿಟಿಷ್ ವಲಸೆ ಅಧಿಕಾರಿಗಳಿಗೆ ಆತನ ಪರವಾಗಿ ಶಿಫಾರ್ಸು ಪತ್ರ ನೀಡಿರುವುದೂ ಈಗ ಬೆಳಕಿಗೆ ಬಂದಿದೆ. ಈ ಮಧ್ಯೆ ಮೋದಿ ಸಂಪುಟದ ಇನ್ನೋರ್ವ ಸಚಿವೆ ಸ್ಮೃತಿ ಇರಾನಿ ತಮ್ಮ ಶೈಕ್ಷಣಿಕ ಅರ್ಹತೆಗಳ ಬಗ್ಗೆ ಚುನಾವಣಾ ದಾಖಲೆಗಳಲ್ಲಿ ಸುಳ್ಳು ಹೇಳಿದ್ದಾರೆಂಬ ಸಂಗತಿ ವಿಚಾರಣೆಗೆ ಅರ್ಹವೆಂದು ದೆಹಲಿ ನ್ಯಾಯಾಲಯವೊಂದು ತೀರ್ಪು ನೀಡಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದಂತಾಗಿದೆ!

ಈ ಹಗರಣಗಳು ಸಾಮಾನ್ಯ ಜನರ ಕಣ್ಣಿಗೆ ಮೇಲ್ನೋಟಕ್ಕೇ ಸಾಬೀತಾಗಿರುವಂತಿದ್ದು, ಹಲವು ದೊಡ್ಡ ನೈತಿಕ ಪ್ರಶ್ನೆಗಳನ್ನೆತ್ತುತ್ತವೆ ಮತ್ತು ಈ ಮೂವರ ರಾಜೀನಾಮೆಗಳನ್ನೂ ಬೇಡುತ್ತವೆ. ಆದರೆ ಈ ಸಾಲುಗಳನ್ನು ಬರೆಯುವ ಹೊತ್ತಿನವರೆಗೂ ಅವರುಗಳು ರಾಜೀನಾಮೆ ನೀಡುವುದಿರಲಿ, ಜವಾಬ್ದಾರಿ ಸ್ಥಾನಗಳಲ್ಲಿರುವವರಾಗಿ ಈ ಪ್ರಕರಣಗಳ ಬಗ್ಗೆ ಒಂದು ಸ್ಪಷ್ಟೀಕರಣದ ಮಾತನ್ನೂ ಆಡಿಲ್ಲದಿರುವುದು ಈ ಪಕ್ಷ ಮತ್ತು ಸರ್ಕಾರ ನೈತಿಕವಾಗಿ ಎಷ್ಟು ದಿವಾಳಿಯೆದ್ದಿದೆ ಎಂಬುದನ್ನು ತೋರುವಂತಿದೆ. ಅದಕ್ಕಿಂದ ಆತಂಕದ ಸಂಗತಿ ಎಂದರೆ, ರಾಷ್ಟ್ರಭಕ್ತಿ, ರಾಜಕೀಯ ಸರಿತನ ಮತ್ತು ನೈತಿಕತೆಗಳೇ ಮೂರ್ತಿವೆತ್ತಂತೆ ಮಾತನಾಡುವ ಪ್ರಧಾನಿ ಮೋದಿಯವರು ಕೂಡ ತಮ್ಮ ಸಚಿವರುಗಳ ರಾಜೀನಾಮೆಗಳಿಗೆ ಸೂಚಿಸುವುದಿರಲಿ, ಆ ಬಗ್ಗೆ ಈವರೆಗೆ ಬಾಯಿಯೇ ಬಿಚ್ಚಿಲ್ಲದಿರುವುದು. ಇನ್ನು ಪಕ್ಷದ ಅಧ್ಯಕ್ಷ ಅಮಿತ್ ಶಾ ಎಲ್ಲೋ ತಲೆ ತಪ್ಪಿಸಿಕೊಂಡಿರುವಂತಿದೆ! ಬಹುಶಃ ಈ ಎಲ್ಲರೂ ಸೇರಿ ಕಾಂಗ್ರೆಸ್ ಸರ್ಕಾರ ಮತ್ತು ಅದರ ಸಚಿವರುಗಳ ಇಂತಹುದೇ ಘೋರ ಅಪರಾಧಗಳಿಗಾಗಿ ದಾಖಲೆಗಳ ತಪಾಸಣೆಯಲ್ಲಿದ್ದಾರೆಂದು ಕಾಣುತ್ತದೆ.

ಆದರೆ ಈ ಸರ್ಕಾರ ಇಂತಹ ತಂತ್ರಗಳ ಮೂಲಕ ಕಾಂಗ್ರೆಸ್ ನಾಯಕರ ಬಾಯಿ ಮುಚ್ಚಿಸಬಹುದು. ಆದರೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ದುರಾಚಾರಗಳನ್ನು ಸಹಿಸಲಾರದೆ ಈ ಪಕ್ಷವನ್ನು ಆಡಳಿತಕ್ಕೆ ತಂದ ಜನರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ. ಏಕೆಂದರೆ, ಇಬ್ಬರು ಕೇಂದ್ರ ಸಚಿವರಿಗೆ ಸಂಬಂಧಿಸಿದ ಹಗರಣದ ಕೇಂದ್ರದಲ್ಲಿರುವಾತ ವರಮಾನ ತೆರಿಗೆ ಮೋಸ, ಹಣದ ಕಳ್ಳಸಾಗಣೆಯಂತಹ ಗುರುತರ ಆಪಾದನೆಗಳಿಗೆ ಗುರಿಯಾಗಿ ದೇಶಭ್ರಷ್ಟನಾಗಿರುವ ಭ್ರಷ್ಟ ಉದ್ಯಮಿ. ಆತನನ್ನು ದೇಶಕ್ಕೆ ಎಳೆತಂದು ವಿಚಾರಣೆಗೆ ಒಳಪಡಿಸುವ ಸಾಂವಿಧಾನಿಕ ಕರ್ತವ್ಯ ನಿರ್ವಹಿಸಬೇಕಾದ ಸರ್ಕಾರಗಳ ಸದಸ್ಯರು ಗುಪ್ತವಾಗಿ ಅವನ ಹಿತ ರಕ್ಷಣೆಗೆ ಧಾವಿಸಿರುವರೆಂದರೆ, ಈ ಸರ್ಕಾರ ದೇಶದ ಹಿತ ರಕ್ಷಣೆ ಮಾಡಬಲ್ಲುದೆಂದು ಹೇಗೆ ನಂಬುವುದು? ಪಕ್ಷ ಮತ್ತು ಸರ್ಕಾರಗಳ ದೇಶನಿಷ್ಠೆ, ಕಾನೂನು ನಿಷ್ಠೆ ಮತ್ತು ಪ್ರಾಮಾಣಿಕತೆಗಳೇ ಈಗ ಪ್ರಶ್ನಾರ್ಹವಾಗಿವೆ. ಹಾಗೇ, ಈ ಅಪರಾಧಿಯ ಪಾಸ್‌ಪೋರ್ಟನ್ನು ರದ್ದುಗೊಳಿಸಬೇಕೆಂಬ ಈ ಹಿಂದಿನ ಸರ್ಕಾರದ ಮನವಿಯನ್ನು ತಾಂತ್ರಿಕ ಕಾರಣಗಳ ಮೇಲೆ ತಿರಸ್ಕರಿಸಿದ್ದ ನ್ಯಾಯಾಲಯವೊಂದರ ತೀರ್ಪಿನ ವಿರುದ್ಧ ಒಂದು ವರ್ಷವಾದರೂ ಈ ಸರ್ಕಾರ ಮೇಲ್ಮನವಿ ಸಲ್ಲಿಸದೇ ಇರುವ ಮರ್ಮವಾದರೂ ಏನು ಎಂಬ ಮುಖ್ಯ ಪ್ರಶ್ನೆಯೂ ಇದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಒಂದು ರಾಜಕೀಯ ಪಕ್ಷವಾಗಿ ಒಂದು ಆಂತರಿಕ ತಳಮಳಕ್ಕೆ ಸಿಕ್ಕಿದ್ದು, ಅದರ ಹಿರಿಯ ನಾಯಕ ಅಡ್ವಾಣಿಯವರು ೪೦ ವರ್ಷಗಳ ಹಿಂದಿನ ತುರ್ತುಪರಿಸ್ಥಿತಿಯನ್ನು ನೆನೆಯುವ ನೆಪದಲ್ಲಿ ಅಂತಹ ಸರ್ವಾಧಿಕಾರದ ಕಾಲ ಮುಗಿಯಿತು ಎಂದು ಭಾವಿಸಬೇಕಿಲ್ಲ ಎಂದಿರುವುದು ಧ್ವನಿಪೂರ್ಣವಾಗಿದೆ.

ಈ ಲಲಿತ್ ಮೋದಿ ದೇಶಬಿಟ್ಟು ಪಲಾಯನ ಮಾಡಿ ಆರು ವರ್ಷಗಳಾಗುತ್ತಾ ಬಂದಿದ್ದರೂ, ಆತನನ್ನು ಇಲ್ಲಿಗೆ ಕರೆತರಲಾಗಿಲ್ಲ ಎಂಬ ಸಂಗತಿ ನಮ್ಮ ಇಡೀ ರಾಜಕಾರಣ ಪಕ್ಷಾತೀತವಾಗಿ ಹೇಗೆ ಭ್ರಷ್ಟ ವಾಣಿಜ್ಯೋದ್ಯಮಿಗಳ ಹಿಡಿತದಲ್ಲಿ ಸಿಕ್ಕಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ಈ ಹಿಂದಿನ ಯುಪಿಎ ಸರ್ಕಾರದ ಸಚಿವರಾಗಿದ್ದ ಶರದ್ ಪವಾರ್, ಪ್ರಫುಲ್ಲ ಪಟೇಲ್, ರಾಜೀವ್ ಶುಕ್ಲಾ ಸೇರಿದಂತೆ ಹೆಚ್ಚೂ ಕಡಿಮೆ ಸರ್ವ ಪಕ್ಷಗಳ ಅನೇಕ ನಾಯಕರು ಲಲಿತ್ ಮೋದಿಯ ಗೆಣೆಕಾರರಾಗಿದ್ದು ಆತನಿಂದ ಹಲವು ರೀತಿಯ ಅನುಕೂಲಗಳನ್ನು ಪಡೆದಿದ್ದರು ಮತ್ತು ಪಡೆಯುತ್ತಿದ್ದಾರೆಂಬುದು ಜನಜನಿತ ಸಂಗತಿಯಾಗಿದೆ. ಹಾಗೆ ನೋಡಿದರೆ ಲಲಿತ್ ಮೋದಿ ಕಂಡುಹಿಡಿದು ನಡೆಸಿದ ಐ.ಪಿ.ಎಲ್ ಎಂಬ ಕ್ರಿಕೆಟ್ ವ್ಯೂಹವು ರಾಜಕಾರಣಿಗಳೂ ಸೇರಿದಂತೆ ಹಲವು ಭಾರಿ ಕುಳಗಳ ಕಪ್ಪುಹಣದ ದುರ್ವ್ಯವಹಾರಗಳು ಮತ್ತು ಸಂಬಂಧಿತ ಲಫಡಾಗಳ ವಿಷವ್ಯೂಹವೇ ಆಗಿದೆ. ವಿವಿಧ ರಾಜ್ಯಗಳ ಕ್ರಿಕೆಟ್ ಸಂಸ್ಥೆಗಳ ಪದಾಧಿಕಾರಿಗಳಾಗಿರುವ ರಾಜಕಾರಣಿಗಳು ಪಕ್ಷಾತೀತವಾಗಿ ಅದರ ಈವರೆಗಿನ ವ್ಯವಹಾರಗಳ ರಕ್ಷಣೆಗೆ ನಿಂತಿರುವುದರಿಂದಾಗಿಯೇ ಲಲಿತ್ ಮೋದಿ ವಿಶ್ವವಿಹಾರ ನಡೆಸಿಕೊಂಡು ಆರಾಮವಾಗಿದ್ದಾನೆ. ಹಾಗಾಗಿ ಮೊದಲು, ಹಲವು ದುರಾಚಾರಗಳ ಮೂಲವಾದ ಈ ಐಪಿಎಲ್ ಎಂಬ ವಿಷವ್ಯೂಹವನ್ನು ಒಡೆದು ನಮ್ಮ ಕ್ರಿಕೆಟ್ ಸಂಸ್ಥೆಗಳನ್ನು ಶುದ್ಧಗೊಳಿಸಿ ವೃತ್ತಿಪರ ಮಾಡಿದರೆ, ಮುಕ್ತ ಮಾರುಕಟ್ಟೆ ನೀತಿ ಹುಟ್ಟುಹಾಕಿರುವ ಐಪಿಎಲ್‌ನಂತಹ ಹಲವು ಪಾಪದ ಕೂಸುಗಳು ಕಣ್ಮುಚ್ಚುವಂತಾಗಿ ಸಾರ್ವಜನಿಕ ಜೀವನ ಒಂದಿಷ್ಟು ಸ್ವಚ್ಛವಾದಂತಾಗುತ್ತದೆ. ಮೋದಿ ಅದನ್ನು ಬಿಟ್ಟು ಎಂತಹುದೇ ತರಾವರಿ ಯೋಗಾಸನಗಳನ್ನು ಮಾಡಿದರೂ ಅವರ, ಅವರ ಪಕ್ಷದ ಮತ್ತು ಸರ್ಕಾರದ ಬಿಂಬ ರಿಪೇರಿಯಾಗದು.

ಇತ್ತ ನಮ್ಮ ರಾಜ್ಯದಲ್ಲಿ ರೈತರು ಸಾಲಬಾಧೆಯಿಂದ ಒಬ್ಬರಾದಮೇಲೊಬ್ಬರಂತೆ ವಿಷ ಕುಡಿದೋ, ಬೆಂಕಿ ಹಚ್ಚಿಕೊಂಡೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ ನಮ್ಮ ಮುಖ್ಯಮಂತ್ರಿಗಳು ಅದಕ್ಕೆ ಕಾರಣರಾದ ಮಹನೀಯರು ತಮ್ಮ ಮಂತ್ರಿಮಂಡಲದಲ್ಲೇ ಇದ್ದರೂ ಅವರ ಮೇಲೆ ಚಾಟಿ ಬೀಸದೆ ಸುಮ್ಮನೆ ಹುಸಿಬೆದರಿಕೆಯ ಮಾತುಗಳನ್ನಾಡುತ್ತಿರುವುದು ಸೋಜಿಗವೆನ್ನಿಸುತ್ತಿದೆ.

**-ಸಂಪಾದಕ.**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಗೇಣಿ ರದ್ದತಿ ಕಾಯ್ದೆಯ 'ಉಳುವವನೇ ಭೂಮಿಯ ಒಡೆಯ' ಸಿದ್ಧಾಂತ, ಕೇವಲ ಅಧಿಕಾರಿಗಳಿಂದ ಮಾತ್ರವಲ್ಲದೆ, ಹೃದಯವಂತ ಕೃಷಿಕರಿಂದಲೂ ಅನುಷ್ಠಾನವಾಗಿರುವುದಕ್ಕೆ ಜೂನ್ ಸಂಚಿಕೆಯಲ್ಲಿನ ನಮ್ಮ ಸಮಾಜವಾದಿಗಳು ಅಂಕಣದಲ್ಲಿ ಪರಿಚಯವಾಗಿರುವ ಹೆಚ್.ಡಿ. ಸುರೇಂದ್ರರವರೇ ಬಹುದೊಡ್ಡ ನಿದರ್ಶನವಾಗಿದ್ದಾರೆ. ಸಮಾಜವಾದಿ ಸುರೇಂದ್ರರವರ ಸರಳ ಸ್ವಚ್ಛ ನಡೆ-ನುಡಿ ಎಲ್ಲರಿಗೂ ಆದರ್ಶವಾಗಿದೆ.

ಜೂನ್ ಸಂಚಿಕೆಯಲ್ಲಿ ಕೊನೆಗೊಂಡ "ಜಾತಿ" ಕುರಿತಾದ ಸಂವಾದ, ಒಂದು ಉತ್ತಮ ಚರ್ಚೆಯಾಗಿದೆ. ಮುಗುಮ್ಮಾಗಿದ್ದ ಜಾತಿ-ಜಾತ್ಯಾತೀತ ನಿಲುವುಗಳ ಬಗ್ಗೆ ಹಲವಾರು ಪ್ರಶ್ನೆಗಳು ಚರ್ಚೆಯಾಗಿದೆ. ಮತ್ತು ನಿಮ್ಮ ೯ ಅಂಶಗಳ ಕೊನೆಯ ಮಾತುಗಳು ವಿಚಾರಕ್ಕೆ ಹಚ್ಚುತ್ತವೆ.

ಅಂತರ್‌ಧರ್ಮೀಯ ವಿವಾಹಿತರಾದ ಅಪೂರ್ವ ಡಿಸಿಲ್ವ ಮತ್ತು ಆರ್. ಮಂಜುಳಾರಿಗೆ ನಮ್ಮ ಹಾರ್ದಿಕ ಶುಭಾಶಯಗಳು.

ಪೋಖ್ರಾನ್ ದುರಂತದ ಬಗೆಗಿನ ಲೇಖನ ಹೃದಯವನ್ನು ತಲ್ಲಣಗೊಳಿಸುತ್ತದೆ. ೫೦೦ ಭೀಗಾ ಜಮೀನಿನ ಬೆಲೆ ಪರಿಹಾರ ಕೇವಲ ರೂ. ೨೦೦೦/- ಗಳಾದರೆ, ಬಡವರ ದರೋಡೆಯಲ್ಲದೆ ಮತ್ತಿನ್ನೇನು? ಜಮೀನು - ಆರೋಗ್ಯ - ಮಕ್ಕಳನ್ನು ಒಟ್ಟಿಗೆ ಕಳೆದುಕೊಳ್ಳುವ ರೈತನ ಬದುಕಿನಲ್ಲೇನು ಉಳಿದೀತು?

**-ಇಂದಿರಾ ಕೃಷ್ಣಪ್ಪ,** ಬೆಂಗಳೂರು

ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆಯಲ್ಲಿ ಇಂದಿರಾ ಕೃಷ್ಣಪ್ಪ ಅವರು ಕಳೆದ ೮೦ರ ದಶಕದಲ್ಲಿ ಚಂದ್ರಗುತ್ತಿಯಲ್ಲಿ ಬೆತ್ತಲೆ ಸೇವೆ ವಿರುದ್ಧ ನಡೆದ ಹೋರಾಟದ ನೆನಪು ಕಣ್ಣಿಗೆ ಕಟ್ಟಿದಂತೆ ದಾಖಲಾಗಿದೆ. ಆ ಹೋರಾಟದ ಭಾಗವಾಗಿ ನಡೆದ 'ಬೆತ್ತಲೆಸೇವೆ' ಬೀದಿ ನಾಟಕದ ನಿರ್ದೇಶನದಲ್ಲಿ ನನಗೆ ಜೊತೆಯಾಗಿದ್ದವರು ಅವರು ಬರೆದಂತೆ, ಓ.ಎಲ್. ನಾಗಭೂಷಣಸ್ವಾಮಿ ಅಲ್ಲ, ಆಗ ದಸಂಸದ ಸಕ್ರಿಯ ಕಾರ್ಯಕರ್ತರಾಗಿದ್ದ ಎಂ.ಎಲ್. ನಾಗಭೂಷಣ.

**-ಎಂ. ಚಂದ್ರ ಶೇಖರಯ್ಯ,** ಭದ್ರಾವತಿ

ಪಾಟೀಲ ಪುಟ್ಟಪ್ಪನವರ ಪುಸ್ತಕದಲ್ಲಿನ ಶಿವರಾಮ ಕಾರಂತರನ್ನು ಕುರಿತ ಅವಹೇಳನಕಾರಿ ಮಾತುಗಳಿಗೆ ಸಂಬಂಧಿಸಿದಂತೆ ಆ ಪುಸ್ತಕದ ಪ್ರಕಾಶಕ ಸಿ. ಚೆನ್ನಬಸವಣ್ಣ ಅವರು ಕಳೆದ ಸಂಚಿಕೆಯಲ್ಲಿ ನೀಡಿದ ಸ್ಪಷ್ಟೀಕರಣ ಹಲವು ಕಾರಣಗಳಿಂದ ಅನುಮಾನಾಸ್ಪದವೆನ್ನಿಸುತ್ತದೆ. ಮೊದಲಾಗಿ ಪುಸ್ತಕದಲ್ಲಿರುವುದಕ್ಕೂ ಪ್ರಕಾಶಕರಿಗೂ ಸಂಬಂಧವಿಲ್ಲ ಎನ್ನುವುದು ಪ್ರಕಾಶಕನ ನೈತಿಕ ಮತ್ತು ಕಾನೂನಾತ್ಮಕ ಹೊಣೆಗಾರಿಕೆಯ ಅರಿವಿನ ಗೈರುಹಾಜರಿಯನ್ನು ಸೂಚಿಸುತ್ತದೆ. ಎರಡನೆಯದಾಗಿ, ಯಾರಾದರೂ, ಏನಾದರೂ ಬರೆಯಬಹುದು, ಅದು ಸರಿಯೋ ತಪ್ಪೋ ಎಂಬುದನ್ನು ಪ್ರಾಜ್ಞ ಓದುಗರು ನಿರ್ಧರಿಸುತ್ತಾರೆ ಎಂಬ ಮಾತು ಬೇಜವಾಬ್ದಾರಿ ಬರವಣಿಗೆಗೆ ಮತ್ತಷ್ಟು ಕುಮ್ಮಕ್ಕು ನೀಡುವಂತಿದೆ.

ಲೋಹಿಯಾ ಹೆಸರಿನ ಪ್ರಕಾಶನದಿಂದ ಇಂತಹ ಮಾತುಗಳನ್ನು ನಿರೀಕ್ಷಿಸಿರಲಿಲ್ಲ.

**-ಎಂ. ಎನ್. ರಾಮಚಂದ್ರ,** ಬೆಂಗಳೂರು

ಪತ್ರಿಕೆ ಈಗ ಪ್ರತಿ ತಿಂಗಳ ೨ ಅಥವಾ ೩ನೇ ತಾರೀಖಿಗೆ ಸಕಾಲದಲ್ಲಿ ತಲುಪುತ್ತಿದೆ. ಸಮಕಾಲೀನ ವಿದ್ಯಮಾನಗಳ ಬಗ್ಗೆ ಮತ್ತು ಇನ್ನಿತರ ವಿಷಯಗಳ ಬಗ್ಗೆ ಉಪಯುಕ್ತವಾದ ಲೇಖನಗಳನ್ನು ಮತ್ತು ಚರ್ಚೆಗಳನ್ನು ಪ್ರಕಟಿಸುತ್ತಿರುವುದಕ್ಕಾಗಿ ಧನ್ಯವಾದಗಳು.

**-ಗಿರೀಶ್ ವಿ. ವಾಘ್,** ಬೆಂಗಳೂರು

### ಗಮನಿಸಿ, ನಿಮ್ಮ ಚಂದಾ ಮುಗಿದಿದೆ...

ಪ್ರಿಯ ಓದುಗರೇ,

ಈ ಸಂಚಿಕೆಯೊಂದಿಗೆ ಪತ್ರಿಕೆ ನಾಲ್ಕು ವರ್ಷಗಳನ್ನು ಪೂರೈಸುತ್ತಿದ್ದು, ಬಹುಪಾಲು ಓದುಗರ ಚಂದಾ ಮುಗಿದಿದೆ. ಮೂರು/ನಾಲ್ಕು ವರ್ಷಗಳ ಹಿಂದೆ ರೂ. 500/- ಚಂದಾ ನೀಡಿದವರೂ ಸೇರಿದಂತೆ ಮುಂದಿನ ಸಂಚಿಕೆಯಿಂದಲೇ ಚಂದಾ ನವೀಕರಿಸಬೇಕಾಗಿದೆ. ಹಾಗೆ ಚಂದಾ ನವೀಕರಿಸಬೇಕಾದವರಿಗೆ ಸೂಚನೆಯಾಗಿ, ಅಂತಹವರ ಸಂಚಿಕೆಯ ಮುಖಪುಟದ ಮೇಲ್ಭಾಗದಲ್ಲಿ 'ನಿಮ್ಮ ಚಂದಾ ಮುಗಿದಿದೆ ಎಂಬ ಮುದ್ರೆ ಹಾಕಲಾಗಿದೆ. ಅಂತಹವರು ದಯವಿಟ್ಟು ಕೂಡಲೇ 2005ರ ಆಗಸ್ಟ್ ವಿಶೇಷ ಸಂಚಿಕೆಯಿಂದ 2016ರ ಆಗಸ್ಟ್ ವಿಶೇಷ ಸಂಚಿಕೆಯವರೆಗಿನ 13 ಸಂಚಿಕೆಗಳಿಗೆ ಒಟ್ಟು ಚಂದಾ ರೂ.200/- ನ್ನು ಕಳಿಸಬೇಕಾಗಿ ಕೋರುತ್ತೇವೆ.

ಚಂದಾ ಮೊತ್ತವನ್ನು ಸಂಪಾದಕರು, 'ಹೊಸ ಮನುಷ್ಯ' ಹೆಸರಿಗೆ ಬರೆದ ಚೆಕ್/ಡಿಡಿ ಮೂಲಕ ಕಳಿಸಬಹುದು ಅಥವಾ ಎಸ್.ಬಿ.ಎಂ.ನ ಶಿವಮೊಗ್ಗದ ವಿನೋಬನಗರ ಶಾಖೆಯಲ್ಲಿ ತೆರೆಯಲಾಗಿರುವ ಪತ್ರಿಕೆಯ ಚಾಲ್ತಿ ಖಾತೆ ಸಂ: **64110358330** ಇಲ್ಲಿಗೆ **(IFSC code: SBMY0040444)** ಹಣ ಜಮಾ/ ವರ್ಗಾವಣೆ ಮಾಡಬಹುದು.

ಯಾರೂ ಯಾವುದೇ ಕಾರಣಕ್ಕೂ ರೂ. 200/-ಕ್ಕಿಂತ ಹೆಚ್ಚಿನ ಮೊತ್ತವನ್ನು ಕಳಿಸಬಾರದು. ಅನುಕೂಲಸ್ಥ ಓದುಗರು ಇಚ್ಛೆಯಿದ್ದಲ್ಲಿ ಪತ್ರಿಕೆಯ ಸಾಮಾನ್ಯ ಸಂಚಿಕೆಗಳಿಗೆ *ಶುಭಾಶಯ ಜಾಹೀರಾತಿಗಾಗಿ* ರೂ. 500/-(ಒಳ ಅರ್ಧ ಪುಟ) ಅಥವಾ ರೂ. 750/-(ಹೊರ ಅರ್ಧ ಪುಟ) ಸೇರಿಸಿ ಕಳಿಸಬಹುದು.

**ಇದೇ ಜುಲೈ ೨೦ರೊಳಗೆ ನಿಮ್ಮ ಚಂದಾ ತಲುಪದಿದ್ದಲ್ಲಿ, ಮುಂದಿನ(ವಿಶೇಷ) ಸಂಚಿಕೆಯನ್ನು ಕಳಿಸಲಾಗುವುದಿಲ್ಲ, ಕ್ಷಮೆ ಇರಲಿ- *ಸಂಪಾದಕ***


**ಹೊಸ_ಮನುಷ್ಯ** ಐದನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ
ವಿಶೇಷ ವಾರ್ಷಿಕ ಸಂಚಿಕೆ-ಆಗಸ್ಟ್, 2015

**ಬಿಡುಗಡೆ: ಆಗಸ್ಟ್ ಎರಡನೇ ವಾರದಲ್ಲಿ**

ಎಂದಿನ ಸ್ಥಿರ ಶೀರ್ಷಿಕೆಗಳ **ಜೊತೆಗೆ**

**ಪೂರ್ವ *ವರ್ಸಸ್* ಪಶ್ಚಿಮ:** ಪಂಕಜ್ ರಾಯ್‌ರೊಡನೆಯ ವಿಶೇಷ ಸಂದರ್ಶನದ ಕನ್ನಡಾನುವಾದ **ಜೊತೆಗೆ**

**ಗಾಂಧಿ-ಅಂಬೇಡ್ಕರ್-ಲೋಹಿಯಾ:** ವಿಶೇಷ ತ್ರಿವಳಿ ಲೇಖನಗಳು

**ಈ ಸಂಚಿಕೆಯ ನಮ್ಮ ಹೆಮ್ಮೆಯ ಲೇಖಕರು:**

**ವೈದೇಹಿ, ಡಾ. ಸಿದ್ಧಲಿಂಗಯ್ಯ, ಹನೂರು ಕೃಷ್ಣಮೂರ್ತಿ, ಜಯಂತ್ ಕಾಯ್ಕಿಣಿ, ಕೆ.ಸತ್ಯನಾರಾಯಣ, ಸತೀಶ ಕುಲಕರ್ಣಿ, ಎಸ್. ಮಂಜುನಾಥ್, ಸುರಕೋಡ್ , ಜಿ.ವಿ. ಆನಂದಮೂರ್ತಿ, ಬಾ.ಹ.ರಮಾಕುಮಾರಿ, ಅಬ್ಬಾಸ್ ಮೇಲಿನಮನಿ, ಸ್ನೇಹಾ ಓಂಕಾರ್, ಚರಿತಾ** ಮುಂತಾದವರು **ಜೊತೆಗೆ**

**೮. ಕರ್ನಾಟಕ: ಪ್ರತ್ಯೇಕ ರಾಜ್ಯ: ಎಷ್ಟು ಸಾಧು, ಸಾಧ್ಯ?** ಹಾಗೂ **ಸಮಕಾಲೀನ ಕನ್ನಡ ಸಾಹಿತ್ಯ ಕಳಾಹೀನವಾಗುತ್ತಿದೆಯೇ?**

ಎರಡು ವಿಚಾರ ಸಂಕಿರಣಗಳು

ನಮ್ಮ ಈ ಮಹತ್ವಾಕಾಂಕ್ಷೆಯ ಸಂಚಿಕೆಗೆ ಜಾಹೀರಾತಿನ ಬೆಂಬಲ ಬೇಕು. ಓದುಗರು ತಮ್ಮ ಸಂಪರ್ಕ ಬಳಸಿ ನಮಗೆ ಜಾಹೀರಾತುಗಳನ್ನು ಒದಗಿಸಬೇಕಾಗಿ ಕೋರುತ್ತೇನೆ. ನಮ್ಮ ಕಪ್ಪು-ಬಿಳುಪು ಪುಟಗಳ ಜಾಹೀರಾತು ದರಗಳು ಹೀಗಿವೆ:

**ಪೂರ್ಣ ಪುಟ: ಮೂರು ಸಾವಿರ, ಅರ್ಧ ಪುಟ: ಒಂದೂವರೆ ಸಾವಿರ, ಕಾಲು ಪುಟ: ಏಳುನೂರಾ ಐವತ್ತು ರೂಪಾಯಿಗಳು**

**ನಿಮ್ಮ ಸಹಕಾರ ಕೋರುತ್ತಾ,,** - ಸಂಪಾದಕ

# ನಮ್ಮ ಸಮಾಜವಾದಿಗಳು: ಶ್ರಮ ಸಂಸ್ಕೃತಿಯಿಂದ ಮೂಡಿದ ನಾಯಕ ಆರ್.ವೆಂಕಟಸ್ವಾಮಿ



**ಬಾ**ಲ್ಟಿಮೋರ್‌ನ ಸೇಂಟ್ ಪಾಲ್ಸ್ ಚರ್ಚಿನಲ್ಲಿ ೧೬೯೨ರಲ್ಲಿ ದೊರೆತ 'ಆಶಯ'ದ ಕೆಲವು ವಾಕ್ಯಗಳು ಹೀಗಿವೆ: 'ಸದ್ದು ಅವಾಂತರಗಳ ನಡುವೆ ಸದ್ದಿಲ್ಲದೆ ಮುಂದುವರೆ. ಮೌನದಲ್ಲಿ ಅದೆಂತಹ ಶಾಂತಿ ಇದೆ ಎಂಬುದನ್ನು ನೆನಪಿಡು. ಸಾಧ್ಯವಾದಷ್ಟೂ ಶರಣಾಗದೆ ಎಲ್ಲರೊಡನೆ ಒಳ್ಳೆಯವನಾಗಿರು. ನಿನ್ನ ಸತ್ಯವನ್ನು ಸ್ಪಷ್ಟವಾಗಿ ಹಾಗೂ ಸೌಜನ್ಯದಿಂದ ನುಡಿ; ಅಜ್ಞಾನಿಗಳು ಮತ್ತು ನೀರಸವಾಗಿದ್ದವರೂ ಸೇರಿದಂತೆ ಇತರರನ್ನು ಆಲಿಸು. ಕಾರಣ ಅವರದೂ ಕಥೆ ಇರುತ್ತದೆ.'

ಶ್ರಮಜೀವಿ, ಮಾನವ ಪ್ರೀತಿಯ ಆರ್.ವೆಂಕಟಸ್ವಾಮಿ ಈ ಮಾತುಗಳಿಗೆ ಅನುರೂಪ ಬದುಕು ಕಟ್ಟಿಕೊಂಡವರು. ಮೈ ಮನಸ್ಸುಗಳಲ್ಲಿ ಮಾಗಿದ ಜೀವ. ಬಿಳಿಜುಬ್ಬ, ಪೈಜಾಮ. ಇಸ್ತ್ರಿ ಇಲ್ಲ. ಜತೆಗೆ ವಯೋಮಾನದಿಂದ ಬೆಳ್ಳಗಾದ ತಲೆಗೂದಲು. ಮಾತು ಬಿಳಿ, ತಿಳಿ. ಮಗುವಿನ ಮುಗ್ಧತೆ. ಬಹಳಷ್ಟು ನಿಜ ಸಮಾಜವಾದಿಗಳ ಗುಣಲಕ್ಷಣದಂತೆ. ವಿಷಯ ವಿದ್ಯಮಾನಗಳ ಬಗ್ಗೆ ಸಂದೇಹ ಬಂದಾಗ ಕೇಳಿ ತಿಳಿದುಕೊಳ್ಳುವ ಕೌತುಕ. 'ನಾನು ಅಷ್ಟಾಗಿ ಇಂಗ್ಲೀಷ್ ಬಲ್ಲವನಲ್ಲ. ನೀವೇ ಅದರರ್ಥ ಹೇಳಿಬಿಡಿ' ಎಂದು ಫೋನಿನ ಆ ಬದಿಯಿಂದ ನಿಸ್ಸಂಕೋಚವಾಗಿ ಹೇಳಿದಾಗ ವಯೋ ವೃದ್ಧರಾದರೂ ಅದೆಂತಹ ನಿಗರ್ವಿ ಸಜ್ಜನ ಎಂಬ ಮೆಚ್ಚುಗೆ ಮನಸಾರೆ ಮೂಡುವುದರಲ್ಲಿ ಅಚ್ಚರಿ ಇಲ್ಲ. ಆರ್.ವೆಂಕಟಸ್ವಾಮಿ ಅಪ್ಪಟ ಸೋಷಿಯಲ್ ಡೆಮಕ್ರಾಟ್, ಬದುಕು ವಿಚಾರಗಳೆರಡರಲ್ಲೂ.

ವೆಂಕಟಸ್ವಾಮಿಯವರಿಗೆ ಡಾ. ರಾಮಮನೋಹರ ಲೋಹಿಯಾ ಬಗ್ಗೆ ಅತುಳ ಗೌರವಾದರ, ಪ್ರಖರ ವೈಚಾರಿಕ ನಿಷ್ಠೆ. ಹಾಗಾಗಿಯೇ ಅವರು ೨೦೧೦ರಲ್ಲಿ ಲೋಹಿಯಾ ಜನ್ಮಶತಮಾನೋತ್ಸವವನ್ನು ತಮ್ಮ ಗೆಳೆಯರೊಂದಿಗೆ ಒಂದು ವಾಹನದಲ್ಲಿ ಲೋಹಿಯಾ ಚಿತ್ರವಿಟ್ಟುಕೊಂಡು ಕರ್ನಾಟಕದ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಸಮಾರಂಭಗಳನ್ನು ನಡೆಸುವ ಮೂಲಕ ತಮ್ಮದೇ ರೀತಿಯಲ್ಲಿ ಆಚರಿಸಿದರು. ಬೆಂಗಳೂರಿನ ಕೆಲವು ಸಮಾಜವಾದಿಗಳಿಗೆ ಲೋಹಿಯಾ ಕಂಡರೆ ಅಷ್ಟಕ್ಕಷ್ಟೇ ಎಂದು ತಿಳಿದರೂ ಅವರ ಮೇಲೆ ಅವರದು ತಿಳಿಯಾದ ಮುನಿಸಷ್ಟೆ. ಹೊಸ ಸಮಾಜವಾದಿ ವಿಚಾರಗಳ ಬಗ್ಗೆ, ದೇಶದ ಆಗುಹೋಗುಗಳನ್ನು ಕುರಿತು ಎಳೆಯರನ್ನು ನಾಚಿಸುವಂತಹ ಕಾಳಜಿ. ಎಲ್ಲಿಯೇ ಯಾರೇ ಸಮಾಜವಾದಿ ಚಟುವಟಿಕೆ ನಡೆಸುವುದು ಗೊತ್ತಾದರೂ ಅವರಿಗೆ ವೆಂಕಟಸ್ವಾಮಿಯವರ ಸಹಾಯ ಹಸ್ತ ಖಚಿತ. ಕರ್ನಾಟಕದಲ್ಲಿ ಆರಂಭದ ದಿನಗಳಿಂದ ಈವರೆಗೆ ಸಮಾಜವಾದಿ ಚಳವಳಿಯ ಏಳುಬೀಳುಗಳ ಸಾಕ್ಷಿಕಲ್ಲಾಗಿದ್ದ ಅವರು ಇಡೀ ಲೋಹಿಯಾ ಸಾಹಿತ್ಯವನ್ನು ಕನ್ನಡದಲ್ಲಿ ಓದುವ ಹಂಬಲವಿಟ್ಟುಕೊಂಡು, ಅದು ಕೈಗೂಡದೆ ನಿರಾಶರಾಗಿ ಅಸುನೀಗಿದರು.

೧೯೪೫–೪೭ರ ಸಮಯ. ಬೆಂಗಳೂರಿನಲ್ಲಿ ಸೋಷಲಿಸ್ಟರು ಹಾಗೂ ಕಮ್ಯುನಿಸ್ಟರು ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ಸೋಷಲಿಸ್ಟ್ ಸೋಗಾಲ ನಾಗಭೂಷಣ ಮಿನರ್ವ ಮಿಲ್‌ನಲ್ಲಿ ಕಾರ್ಮಿಕ ಸಂಘಟನೆ ಕೈಗೊಂಡರೆ ರಾಜಾಮಿಲ್‌ನಲ್ಲಿ ಕಮ್ಯುನಿಸ್ಟ್ ಎಂ.ಎಸ್ ಕೃಷ್ಣನ್ ಕಾರ್ಮಿಕರನ್ನು ಒಗ್ಗೂಡಿಸುವ ಕೆಲಸದಲ್ಲಿ ನಿರತರಾಗಿದ್ದರು. ಆ ಕಾಲದಲ್ಲಿ ವೆಂಕಟಸ್ವಾಮಿಯವರು, ಯಾವುದೋ ಕೌಟುಂಬಿಕ ವೈಮನಸ್ಯದಿಂದಾಗಿ ಅಕ್ಕನೊಡನೆ ತಮ್ಮ ಮೂಲ ಸ್ಥಳವಾದ ಡಂಕಣಿಕೋಟೆಯಿಂದ ಬೆಂಗಳೂರಿಗೆ ಬಂದರು. ಕಲಿತದ್ದು ೪ನೇ ತರಗತಿವರೆಗೆ ಮಾತ್ರ, ನಂತರದ್ದೆಲ್ಲಾ ಲೋಕಶಿಕ್ಷಣ. ಅಕ್ಕ, ತಮ್ಮ ಗ್ಲಾಸ್ ಫ್ಯಾಕ್ಟರಿಯಲ್ಲಿ ಕಾರ್ಮಿಕರಾದರು. ಮೈಸೂರ್ ಲ್ಯಾಂಪ್ಸ್ ಸೇರಿದಾಗ ಸೋಗಾಲ ನಾಗಭೂಷಣರ ಸಂಪರ್ಕ. ಆಗ ಸುಮಾರು ೨೨ ಕಾರ್ಮಿಕ ಸಂಘಗಳು ಸೋಷಲಿಸ್ಟ್ ಪಾರ್ಟಿ ವ್ಯಾಪ್ತಿಯಲ್ಲಿದ್ದವು. ಸಹಜವಾಗಿಯೇ ಅವರಿಗೆ ಸಮಾಜವಾದದ ಬಗ್ಗೆ ಒಲವು ಮೂಡಿತು.

ಕೆಲಕಾಲದ ನಂತರ ವೆಂಕಟಸ್ವಾಮಿಯುವರು ಕೆಲಸ ಬಿಟ್ಟು ಒಂದು ಲಾರಿ ಖರೀದಿ ಮಾಡಿ ಅದನ್ನು ಅವರೇ ಓಡಿಸುತ್ತಿದ್ದರು. ಸಣ್ಣ ಕೈಗಾರಿಕೆಗಳಿಗೆ ಕಲ್ಲಿದ್ದಲು ಸಾಗಣೆ ಒಪ್ಪಂದ ಮಾಡಿಕೊಂಡರು. ಕಾಸ್ಟಿಂಗ್ ಕೈಗಾರಿಕೆಗಳಲ್ಲೂ ಬಹಳ ಜನ ಅವರಿಗೆ ಪರಿಚಿತರಾದರು. ನಾಗಭೂಷಣ ಅವರ ಜತೆ ಪಕ್ಷ ಕಟ್ಟುವ ಕೆಲಸ ಜತೆಯಲ್ಲೇ ಸಾಗಿತ್ತು. ಅನಂತರ ನಾಡು ಕಂಡ ಪ್ರಸಿದ್ಧ ಕಾರ್ಮಿಕ ನಾಯಕ ಸಮಾಜವಾದಿ ಎಸ್. ವೆಂಕಟರಾಂ ಜತೆ ಒಡನಾಟ. ವೆಂಕಟರಾಂ ಬಳಿ ವಾಹನ ಇರಲಿಲ್ಲ. ಅವರ ಓಡಾಟಕ್ಕೆಲ್ಲಾ ವೆಂಕಟಸ್ವಾಮಿಯವರ ಸ್ಕೂಟರ್ ಸದಾ ಮೀಸಲು. ವೆಂಕಟರಾಂ ಅದರ ಶಾಶ್ವತ ಪಿಲಿಯನ್ ಸವಾರ! ಇವರಿಬ್ಬರ ಈ ನಂಟೇ ಇಂದಿಗೂ ಎರಡೂ ಕುಟುಂಬಗಳ ಆತ್ಮೀಯ ನಂಟಾಗಿದೆ. ಈ ನಡುವೆ ವೆಂಕಟಸ್ವಾಮಿ ಶಾರದಾ ಅವರನ್ನು ಕೈಹಿಡಿದರು. ವೆಂಕಟಸ್ವಾಮಿಯವರ ಕಾರ್ಖಾನೆ ದುಡಿತದ ಆದಾಯಕ್ಕೆ ಪೂರಕವಾಗಿ ಮನೆಯಲ್ಲಿ ಮಡದಿಯ ಹೊಲಿಗೆ ಕೆಲಸ. ಈ ಆದಾಯದ ಒಂದು ಪಾಲು ಸಮಾಜವಾದಿ ಚಟುವಟಿಕೆಗಳಿಗೆ ಮೀಸಲು.

ಲಾರಿ ಒಡೆಯರಾದ ಮೇಲೆ ಅವರು ಇಟ್ಟ ಮುಂದಿನ ಹೆಜ್ಜೆ ಲಾರಿಮಾಲೀಕರ ಸಂಘಟನೆ. ಅವರಿಗಾಗಿ ಸಹಕಾರಿ ಬ್ಯಾಂಕ್ ಕಟ್ಟಿದರು. ಅದರ ಅಧ್ಯಕ್ಷರಾಗಿ ಸುಲಭ ಬಡ್ಡಿಯಲ್ಲಿ ಸಾಲ ವಿತರಿಸಿದರು. ಲಾರಿ ಒಡೆಯರ ಕಷ್ಟ, ಸಮಸ್ಯೆ ವಿಚಾರಿಸಿ ಸಾಲ ವಸೂಲಿ ಮಾಡುತ್ತಿದ್ದರು. ಬಹಳ ಜನರಿಗೆ ಸಹಾಯ ಮಾಡಿದರು. ಅವರ ನಿಲುವು, ವೇಷಭೂಷಣ, ಆತ್ಮೀಯತೆ ಮತ್ತು ಅಸ್ಖಲಿತ ಉರ್ದು ನೋಡಿ ಮುಸ್ಲಿಂ ಗ್ರಾಹಕರು ಅವರನ್ನು ನಿಮಗೆ ವೆಂಕಟಸ್ವಾಮಿ ಎಂದು ಏಕೆ ಹೆಸರಿಟ್ಟರು ಎಂದು ಕೇಳುತ್ತಿದ್ದರಂತೆ. ಮಾನವೀಯತೆ ಸಮಾಜವಾದಿಯ ಬುನಾದಿ ಗುಣ ಎಂಬುದಕ್ಕೆ ಇವರೇ ನಿದರ್ಶನ. ಅದೇ ಅವರ ಕೊನೆಯುವರೆಗಿನ ಉಪಾಸನೆಯಾಗಿತ್ತು. ಬೇರೆಯವರಿಗೆ ನೆರವಾಗುವುದರಲ್ಲಿ ಎತ್ತಿದ ಕೈ. ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಚಿತ್ರ ನಟ ಅಶ್ವತ್ ಅವರಿಗೆ, ಪ್ರಸಿದ್ಧ ಗಾಯಕ ಕಾಳಿಂಗರಾಯರ ಮನೆಯವರಿಗೆ ತಮ್ಮ ಶ್ರಮದಿಂದ ಗಳಿಸಿದ ಹಣದಲ್ಲಿ ನೀಡಿದ್ದೂ ಉಂಟು. ಅವರು ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರ ನೆರವಿಗೆ ಹೋಗುತ್ತಿದ್ದುದನ್ನು ಅವರ ಒಡನಾಡಿಗಳು ಇಂದಿಗೂ ಸ್ಮರಿಸುತ್ತಾರೆ.

ಗೋವಾ ವಿಮೋಚನೆ ಹೋರಾಟದಲ್ಲಿ ಭಾಗವಹಿಸಿದ ವೆಂಕಟಸ್ವಾಮಿ ಬಂಧನಕ್ಕೂ ಒಳಗಾಗುತ್ತಾರೆ. ಜೆ.ಪಿ., ಲೋಹಿಯಾ ಅವರ ನಿಕಟ ನಂಟಿನ ಜತೆಗೆ ಪಟ್ಟಾಭಿರಾಮರೆಡ್ಡಿ, ಸ್ನೇಹಲತಾರೆಡ್ಡಿ, ಗೋಪಾಲಗೌಡರು, ಜೆ.ಹೆಚ್. ಪಟೇಲ್ ಮತ್ತು ಸಿಜಿಕೆ ರೆಡ್ಡಿಯವರೊಡನೆ ನಿಕಟ ಪರಿಚಯ ಹೊಂದಿದ್ದ ವೆಂಕಟಸ್ವಾಮಿಯವರಿಗೆ ಪುಸ್ತಕಗಳ ಮತ್ತು ಸಂಗೀತದ ಒಲವು ಸಹಜವಾಗಿಯೇ ಮೂಡಿತು. ಗೆಳೆಯರೆಲ್ಲರನ್ನೂ ಕರೆದುಕೊಂಡು ಬ್ಯಾಲೆ ನೋಡಲು ಹೋಗುವ ಅಭಿರುಚಿಯ ಜತೆಗೆ ಎಲ್ಲರಿಗೂ ತಿನ್ನಿಸಿ ಖುಷಿ ಪಡಿಸುವುದರಲ್ಲಿ ಸಂತೋಷ ಕಾಣುತ್ತಿದ್ದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ ರಾತ್ರಿಹೊತ್ತು ಕರಪತ್ರ ಹಂಚಿಕೆ ಹಾಗೂ ಸಮಾಜವಾದಿ ಸುಬ್ರಮಣ್ಯ ಅವರು ಕೆಲಸ ಮಾಡುತ್ತಿದ್ದ ಖಾಸಗಿ ಪಾದರಕ್ಷೆ ಮಾರಾಟ ಕಂಪನಿಯ ವಿಳಾಸಕ್ಕೆ ಬರುತ್ತಿದ್ದ ಪತ್ರಗಳನ್ನು ವಿತರಣೆ ಮಾಡುವ ದಿಟ್ಟತನ ತೋರಿದ್ದರು. ಅಷ್ಟೇ ಅಲ್ಲ ಮಾರುವೇಷದಲ್ಲಿ ಬೆಂಗಳೂರಿಗೆ ಬಂದಿದ್ದ ಜಾರ್ಜ್ ಫರ್ನಾಂಡೀಸ್ ಅವರಿಗೆ ಸರ್ದಾರ್‌ಜೀ ವೇಷದಲ್ಲಿ ಟರ್ಬನ್ ಕಟ್ಟುವುದನ್ನು ಕಲಿಸಲು ಸರ್ದಾರ್‌ಜೀಗಳನ್ನು ಪತ್ತೆ ಮಾಡಿ ಕರೆತಂದಿದ್ದರು. ಉನ್ನತ ರಾಜಕೀಯ ವ್ಯಕ್ತಿಗಳ ಪರಿಚಯವಿದ್ದರೂ ಅಧಿಕಾರದ ವ್ಯಾಮೋಹ ಅವರ ಬಳಿ ಸುಳಿಯಲಿಲ್ಲ. ಸದಾ ಪರೋಪಕಾರದಲ್ಲೇ ಮುಳುಗಿಹೋಗಿದ್ದ ವೆಂಕಟಸ್ವಾಮಿಯವರು ಸ್ವಂತ ಮನೆ ಕಟ್ಟಲು ತೆಗೆದುಕೊಂಡ ಸಮಯ ಕೇವಲ ೧೦ ವರ್ಷ! ಅದಕ್ಕೆ ಅವರಿಟ್ಟ ಹೆಸರು 'ಶ್ರಮ'. ೮೩ ವರ್ಷ ಬಾಳಿ ಬದುಕಿದ ವೆಂಕಟಸ್ವಾಮಿ ೮-೬-೨೦೧೩ರಂದು ಸ್ವಲ್ಪ ಕಾಲದ ಅನಾರೋಗ್ಯದ ನಂತರ ನಮ್ಮನ್ನು ಅಗಲಿದರು. ಎಲೆಮರೆ ಕಾಯಾಗಿಯೇ ಇದ್ದ ವೆಂಕಟಸ್ವಾಮಿ ಸಮಾಜವಾದಿಗಳ ಅಂದಿನ ದೊಡ್ಡ ಪಡೆಯ ನಡುವೆ ಎದ್ದು ನಿಲ್ಲುವ ಹೆಮ್ಮೆಯ ವ್ಯಕ್ತಿತ್ವ. ಇಂತಹ ಸ್ಫೂರ್ತಿ ತರುವ ವ್ಯಕ್ತಿಗಳ ಚಿತ್ರ ಬಿಂಬಿಸುವ ಗ್ಯಾಲರಿಯೊಂದು ಬರ್ಲಿನ್‌ನಲ್ಲಿನ ಪ್ರಸಿದ್ಧ ಸಮಾಜವಾದಿ ವಿಲಿ ಬ್ರಾಂಟ್ ಫೋರಂನಂತೆ ಸ್ಥಾಪಿಸುವ ಆಸಕ್ತಿ, ಪ್ರಯತ್ನ ನಮ್ಮಲ್ಲೂ ಏಕೆ ಆಗಬಾರದು?

**–ಖಾದ್ರಿ. ಎಸ್. ಅಚ್ಯುತನ್**

# ''ಅನ್ನ ಭಾಗ್ಯ': ಇದು ಯಾರ ಭಾಗ್ಯ?




ಉಚಿತ ಅಕ್ಕಿ ಯೋಜನೆ ಎಂದೇ ಪ್ರಸಿದ್ಧವಾಗಿರುವ ರಾಜ್ಯ ಸರ್ಕಾರದ 'ಅನ್ನಭಾಗ್ಯ' ಕಾರ್ಯಕ್ರಮದ ಬಗ್ಗೆ ಕಳೆದ ಮೇ ಸಂಚಿಕೆಯ 'ಸಂಪಾದಕರ ಟಿಪ್ಪಣಿ'ಯಲ್ಲಿ ನಾನು ಇದೊಂದು ಅಗ್ಗದ ಜನಪ್ರಿಯತೆಯ ಬೇಜವಾಬ್ದಾರಿ ಯೋಜನೆ ಎಂದು ಒಂದು ಸಾಲು ಬರೆದಿದ್ದೆ. ಈ ಬಗ್ಗೆ ನನ್ನ ಒಂದಿಬ್ಬರು ಆಪ್ತ ಸ್ನೇಹಿತರು ಕರೆ ಮಾಡಿ ಆಕ್ಷೇಪಣೆ ವ್ಯಕ್ತಪಡಿಸಿದರು. ಈ ಯೋಜನೆ ಇಷ್ಟು ಸರಳ ಮತ್ತು ಸುಲಭವಾಗಿ ತಳ್ಳಿಹಾಕುವಂತಹದಲ್ಲವೆಂದೂ, ಕಡುಬಡವರು ಗಣನೀಯ ಸಂಖ್ಯೆಯಲ್ಲಿರುವ ರಾಜ್ಯವೊಂದರಲ್ಲಿ ಸರ್ಕಾರ ತನ್ನ ಕರ್ತವ್ಯದಂತೆ ಕೈಗೊಳ್ಳಬೇಕಾದ ಕ್ರಮ ಇದೆಂದೂ ವಿವರಿಸಿದರು. ಆದರೆ ನಾನು ಆ ವಾಕ್ಯ ಬರೆದಾಗ ಇದೆಲ್ಲವನ್ನೂ ಯೋಚಿಸಿರಲಿಲ್ಲವೆಂದಲ್ಲ. ಈ ಯೋಜನೆಯನ್ನು ಆರಂಭ ಮಾಡಿದಾಗ ಮುಖ್ಯಮಂತ್ರಿಗಳೇ ಇದನ್ನೆಲ್ಲ ವಿವರಿಸಿದ್ದರು. ಆದರೆ ನನ್ನ ಆಲೋಚನೆ ಬೇರೇ ಸ್ತರದ್ದೇ ಆಗಿತ್ತು. ಆದರೂ ಈ ಬಗ್ಗೆ ಇನ್ನಷ್ಟು ಅಭಿಪ್ರಾಯಗಳನ್ನು ಪಡೆದು ನನ್ನ ಆಲೋಚನೆಯೇನಾದರೂ ತಪ್ಪು ದಿಕ್ಕಿನಲ್ಲಿ ಸಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಲು ಸಮಾಜದ ವಿವಿಧ ಸ್ತರಗಳಿಗೆ ಸೇರಿದ ನನ್ನ ಕೆಲ ಗೆಳೆಯರನ್ನು ಅಭಿಪ್ರಾಯ ಬರೆದು ಕಳಿಸಲು ಕೇಳಿದೆ. ಆ ಅಭಿಪ್ರಾಯಗಳು ಇಲ್ಲಿವೆ.

ಅನ್ನಭಾಗ್ಯವನ್ನು ಸಮರ್ಥಿಸುವವರು ಮುಖ್ಯವಾಗಿ, ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣ ಪ್ರಮಾಣದಲ್ಲಿ ಮತ್ತು ಶ್ರೀಮಂತರು ಮತ್ತು ಮಧ್ಯಮ ವರ್ಗದವರು ಸರ್ಕಾರದಿಂದ ವಿವಿಧ ರೀತಿಗಳಲ್ಲಿ ಪಡೆಯುತ್ತಿರುವ ರಿಯಾಯ್ತಿಗಳಿಗೆ ಹೋಲಿಸಿದರೆ ನಗಣ್ಯವೆಂದೂ ವಾದಿಸಿದ್ದಾರೆ. ಆದರೆ ಪತ್ರಿಕೆ, ಈ ರಿಯಾಯ್ತಿಗಳನ್ನೂ ಕಟುವಾಗಿ ಟೀಕಿಸಿದೆ ಎಂಬುದನ್ನು ಮತ್ತು ಒಂದು ತಪ್ಪು ಇನ್ನೊಂದು ತಪ್ಪಿನ ಸಮರ್ಥನೆಯಾಗಲಾರದು ಎಂಬುದನ್ನು ಮರೆತಿದ್ದಾರೆ. ಹಾಗೇ, ಮೊನ್ನೆ ಲೇಖಕ ಎಸ್.ಎಲ್. ಭೈರಪ್ಪನವರು–ಅವರ ಕಾದಂಬರಿಗಳ ಬಗ್ಗೆ ನಮ್ಮ ಅಭಿಪ್ರಾಯಗಳು ಏನೇ ಇರಲಿ–'ಅನ್ನಭಾಗ್ಯ'ವನ್ನು ಟೀಕಿಸಿದಾಗ, ಅವರಿಗೆ ಹಸಿವಿನ ಸಂಕಟವೇನು ಗೊತ್ತು ಎಂದು ನಮ್ಮ ಮುಖ್ಯ ಮಂತ್ರಿಗಳೂ ಸೇರಿದಂತೆ ಬಹಳ ಜನ ಅವರ ಮೇಲೆ ಹರಿಹಾಯ್ದರು. ಆದರೆ ಹೀಗೆ ಹರಿಹಾಯ್ದವರಿಗಿಂತ ಹೆಚ್ಚಿನ ಹಸಿವಿನ ಸಂಕಟವನ್ನು ಭೈರಪ್ಪ ಅನುಭವಿಸಿದವರು ಎಂಬುದು ಇವರಿಗೆ ಗೊತ್ತಿರಲಾರದು. 'ಅನ್ನ ಭಾಗ್ಯ'ದ ಸಮರ್ಥನೆಯ ಹಿಂದೆ ಬಹುಪಾಲು ಇಂತಹುದೇ ಸುಲಭ ಜನಪರತೆಯ ಆವೇಶವಿದೆ ಎಂದು ನನ್ನ ಸಂದೇಹ.

ಮನುಷ್ಯತ್ವ ಇರುವ ಯಾರೂ, ಹಸಿವಿನಿಂದ ನರಳುತ್ತಿರುವವರಿಗೆ ಅನ್ನ ಕೊಡುವುದು ತಪ್ಪೆಂದು ಹೇಳಲಾರರು. ಹಾಗೇ, ನೋಡಿಕೊಳ್ಳಲು ಯಾರೂ ಇಲ್ಲದ ಅನಾಥ ವೃದ್ಧರಿಗೆ ಸರ್ಕಾರ ಅನ್ನ ಸೂರು ಕೊಡಬಾರದೆಂದೂ ಯಾರೂ ಹೇಳಲಾರರು. ಆದರೆ ಅನುಮಾನಾಸ್ಪದ ರೀತಿಯಲ್ಲಿ ವಿತರಣೆಯಾಗಿರುವ ಬಿಪಿಎಲ್ ಕಾರ್ಡುಗಳ ಆಧಾರದ ಮೇಲೆ ರಾಜ್ಯಮಟ್ಟದಲ್ಲಿ ಸಾರಾ ಸಗಟಾಗಿ ಮುಖ್ಯಮಂತ್ರಿಗಳ ಕರುಣೆಯ ಕಾರ್ಯಕ್ರಮದಂತೆ ಈ ಯೋಜನೆ ಜಾರಿಯಾಗಿರುವುದರ ಬಗ್ಗೆ ನಾವು ಜನಪರತೆ ಎಂಬ ರೂಢಿಗತ ಭಾವಾವೇಶದ ಮಾನಸಿಕತೆಯಲ್ಲಿ ಯೋಚಿಸಬಾರದೆಂದೇ ನನ್ನ ಅಭಿಪ್ರಾಯ. ಜೊತೆಗೆ ರಾಜಕಾರಣವೆಂಬುದು ಕೇವಲ ಆರ್ಥಿಕ ಆಯಾಮವುಳ್ಳ ವಿದ್ಯಮಾನವಲ್ಲ. ಅದು ಒಂದು ಜನಸಮುದಾಯದ ಶೀಲವನ್ನು ಕಟ್ಟುವ ಜವಾಬ್ದಾರಿಯುತ ಕಾಯಕ ಕೂಡ. ಹಾಗೆ ಯೋಚಿಸಿದಾಗ ಈ ಸಾರಾ ಸಗಟು ಯೋಜನೆಯಿಂದ ಆಗುತ್ತಿರುವ ಹಲವು ನೆಲೆಗಳ ಅನಾಹುತಗಳು ನಮಗೆ ಗೋಚರವಾಗಬಲ್ಲವು.

ಸಂಸತ್ತಿನಲ್ಲಿ ಕೇಂದ್ರದ ಮುಂಗಡ ಪತ್ರದ ಬಗೆಗಿನ ಚರ್ಚೆಯ ಮಧ್ಯೆ, ಕಾಂಗ್ರೆಸ್ ಪಕ್ಷದವರು 'ಉದ್ಯೋಗ ಭರವಸೆ ಯೋಜನೆ'ಯನ್ನು ಹಾಳು ಮಾಡಲಾಗುತ್ತಿದೆ ಎಂಬ ಕೂಗೆಬ್ಬಿಸಿದಾಗ ಪ್ರಧಾನಿ ಮೋದಿ ಹೇಳಿದರು: 'ಇಲ್ಲ, ಅದನ್ನು ರದ್ದು ಮಾಡುವುದಿಲ್ಲ. ಅರವತ್ತು ವರ್ಷಗಳ ಕಾಂಗ್ರೆಸ್ ಸರ್ಕಾರದ ಕಾರ್ಯದಕ್ಷತೆಯ ಸ್ಮಾರಕವಾಗಿಯಾದರೂ ಅದನ್ನು ಉಳಿಸುತ್ತೇನೆ'. ಮೋದಿಯವರ ಆರ್ಥಿಕ ನೀತಿ ಬಗ್ಗೆ ನಮ್ಮ ಮೂಲಭೂತ ಆಕ್ಷೇಪಣೆಗಳ ಹೊರತಾಗಿಯೂ ಅವರ ಈ ಮಾತಿನ ಮರ್ಮವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಈ ಅರವತ್ತು ವರ್ಷಗಳಲ್ಲಿ ನಮ್ಮ ರಾಜಕಾರಣ ಜನರ ಕನಿಷ್ಟ ಅಗತ್ಯಗಳನ್ನು ಪೂರೈಸಬಲ್ಲ ಒಂದು ವಿಶ್ವಾಸಾರ್ಹ ಉದ್ಯೋಗ ವ್ಯವಸ್ಥೆಯ ಆರ್ಥಿಕತೆಯನ್ನೂ ಕಟ್ಟಲಾಗಿಲ್ಲ. ಜನ ಈಗಲೂ ದಿನವಹಿ ಆಧಾರದ ಮೇಲೆ ಬದುಕಿನ ಭರವಸೆ ಕಾಣಬೇಕಾಗಿದೆ! ನಾವು ಯೋಚಿಸಬೇಕಿದೆ.

ಹಾಗಾಗಿ, ನಮ್ಮ ಅನ್ನಭಾಗ್ಯ ಯೋಜನೆ ನನಗೆ ಬಂಡವಾಳಶಾಹಿ ಆರ್ಥಿಕತೆಯೊಂದರ ಐನಾತಿ ಉಪಾಯ ಕಾರ್ಯಕ್ರಮವಾಗಿಯೇ ಕಾಣುತ್ತದೆ. ಬಂಡವಾಳಶಾಹಿಗಳ ಭರ್ಜರಿ ಊಟಗಳಿಗೆ ಬಡಜನರಿಂದ ಧಕ್ಕೆಯಾಗದಂತೆ ಅವರಿಗೆ ಒಂದಿಲ್ಲ ಒಂದು ರೂಪದ ಭಿಕ್ಷೆ ಎಸೆದು ಸುಮ್ಮನಿರಿಸುವ ರಾಜಕೀಯ ಉಪಾಯವಾಗಿ ಇದು ನನಗೆ ಕಾಣುತ್ತದೆ. ಇದು ಸಮಾಜವಾದವಲ್ಲ; ಬದಲಿಗೆ ಸಮಾಜವಾದದಿಂದ ಪಲಾಯನ ಎಂದೇ ನಾನು ಭಾವಿಸುತ್ತೇನೆ. ಸಮಾಜವಾದ ಶೋಷಣೆಯ ವಿರುದ್ಧ ರಕ್ಷಣೆಯ ರಾಜಕಾರಣವಲ್ಲ. ಬದಲಿಗೆ ಪರ್ಯಾಯ ನೈತಿಕತೆಯ ಆಧಾರದ ದುಡಿಮೆ ಮತ್ತು ಬದುಕಿನ ಮಾದರಿಗಳ ನಿರ್ಮಾಣದ ರಾಜಕಾರಣ ಎಂದು ನಾನು ಭಾವಿಸಿದ್ದೇನೆ.

ದುಡಿಯುವ ಶಕ್ತಿ ಇಲ್ಲದ ಅಸಹಾಯಕರನ್ನು ಸ್ಥಳೀಯವಾಗಿ ಗುರುತಿಸುವ ವ್ಯವಸ್ಥೆಯಾಗಲಿ. ಅವರಿಗೆ ಅನ್ನಾಹಾರಗಳು ಮಾತ್ರವಲ್ಲ; ಬದುಕಲು ಅಗತ್ಯವಾದ ಎಲ್ಲ ಕನಿಷ್ಟ ಅಗತ್ಯಗಳನ್ನೂ ಪೂರೈಸಲಿ. ಆದರೆ ರಾಜರ ಕಾಲದ ಈ ಬಾಜಾ ಭಜಂತ್ರಿ ಪ್ರಚಾರ ವೈಭವದ ದಾನಧರ್ಮದ ಕಾರ್ಯಕ್ರಮ ಬೇಡ ಎಂದೇ ಪತ್ರಿಕೆಯ ಅಭಿಪ್ರಾಯ.

ಪತ್ರಿಕೆಯ ಈ ಅಭಿಪ್ರಾಯವನ್ನು ಈ ಮುಂದಿನ ಹಲವರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಓದುಗರು ಪರಿಶೀಲಿಸಿ ತಮ್ಮದೇ ತೀರ್ಮಾನಗಳಿಗೆ ಬರಬಹುದು.–ಸಂ

## 'ಅನ್ನಭಾಗ್ಯ' ಭಿಕ್ಷಾನ್ನವಲ್ಲ

**ಸ**ರಕಾರ ರಕ್ಷಣೆ ಕಾನೂನು ಸುವ್ಯವಸ್ಥೆ, ಸಾರಿಗೆ ಸಂಚಾರ ನಿರ್ವಹಣೆ ಮುಂತಾದವನ್ನು ಹೊರತುಪಡಿಸಿ, ಇತರ ಯಾವ ವ್ಯವಹಾರದಲ್ಲೂ ತಲೆ ಹಾಕ ಕೂಡದು ಎಂದು ಪ್ರತಿಪಾದಿಸುವ ಅರ್ಥಶಾಸ್ತ್ರಜ್ಞರು ಮತ್ತು ಪತ್ರಕರ್ತರು ಪುಕ್ಕಟೆ ಪಡಿತರ ಯೋಜನೆಯನ್ನು ಸಿದ್ಧರಾಮಯ್ಯನವರ ತುಗ್ಲಕ್ ದರ್ಬಾರ್ ಎಂದು ಚಿತ್ರಿಸುತ್ತಿದ್ದಾರೆ. ಪುಕ್ಕಟೆ ಪಡಿತರ ಮಾತ್ರವಲ್ಲ ಬಡವರಿಗೆ ನೆರವು ನೀಡುವ ಸರಕಾರದ ಎಲ್ಲಾ ಯೋಜನೆಗಳನ್ನೂ ಇವರು ವಿರೋಧಿಸುವವರೇ. ಆದರೆ ಸರಕಾರ, ಕಾರ್ಪೊರೇಟ್ ಬಂಡವಾಳಶಾಹಿಗಳಿಗೆ ಕೊಡುವ ನೂರೆಂಟು ಸವಲತ್ತು ಮತ್ತು ತೆರಿಗೆ ವಿನಾಯ್ತಿಗಳ ಬಗ್ಗೆ ಮಾತ್ರ ಈ 'ವಿದ್ವಾಂಸರು' ಬಾಯಿ ತೆರೆಯುವುದಿಲ್ಲ.

೨೦೧೪–೧೫ರ ಸಾಲಿನ ೧,೪೨,೫೩೪ ಕೋಟಿ ರೂಪಾಯಿಗಳ ರಾಜ್ಯ ಬಜೆಟ್‌ನಲ್ಲಿ ಪಡಿತರ ಯೋಜನೆಗಾಗಿ ಸರಕಾರ ೪೩೬೦ ಕೋಟಿ ರೂಪಾಯಿಗಳನ್ನು ಮೀಸಲಾಗಿರಿಸಿತ್ತು. ರಾಜ್ಯಾದ್ಯಂತ ವ್ಯಾಪಕವಾಗಿ ಚಲಾವಣೆಯಲ್ಲಿದ್ದ ನಕಲಿ ಬಿ.ಪಿ.ಎಲ್. ಕಾರ್ಡುಗಳನ್ನು ಪತ್ತೆ ಹಚ್ಚಿ ರದ್ದು ಪಡಿಸುವ ಕಾರ್ಯಕ್ರಮವನ್ನು ಸರಕಾರ ದೊಡ್ಡ ಮಟ್ಟದಲ್ಲಿ ನಡೆಸಿ, ಈ ಹಣದಲ್ಲಿ ಸುಮಾರು ಕಾಲು ಭಾಗದಷ್ಟನ್ನು ಉಳಿಸಿದೆ. ಹಾಗಾಗಿ ಸಿದ್ಧರಾಮಯ್ಯನವರ ಪುಕ್ಕಟೆ ಪಡಿತರ ಯೋಜನೆ ರಾಜ್ಯದ ಬೊಕ್ಕಸಕ್ಕೆ ಹೊರಲಾಗದ ಹೊರೆ ಎಂದು ಕೆಲವರು ಹುಯಿಲೆಬ್ಬಿಸುವುದರಲ್ಲಿ ಹುರುಳಿಲ್ಲ.

ಬಡವರಿಗೆ ತಿಂಗಳಿಗೆ ೧೦ ಕೆ.ಜಿ. ಆಹಾರಧಾನ್ಯ ಪುಕ್ಕಟೆ ಕೊಟ್ಟರೆ ಅವರು ಸೋಮಾರಿಗಳಾಗುವುದಾದರೆ, ಅದನ್ನೇ ರಿಯಾಯ್ತಿ ದರದಲ್ಲಿ ಕೊಟ್ಟರೂ ಅವರು ಸೋಮಾರಿಗಳಾಗುವುದಿಲ್ಲವೆ? ಇಷ್ಟಕ್ಕೂ ದುಡಿಯುವವರು ಮಾತ್ರ ಉಣ್ಣಬೇಕಾ? ವೃದ್ಧಾಪ್ಯ, ಅನಾರೋಗ್ಯ ಮುಂತಾದ ನಾನಾ ಕಾರಣಗಳಿಂದ ದುಡಿಯುವ ತ್ರಾಣ ಕಳೆದುಕೊಂಡವರು ಅಥವಾ ದುಡಿಮೆಯ ಅವಕಾಶದಿಂದಲೇ ವಂಚಿತರಾಗುವವರು ಉಪವಾಸವಿರಬೇಕಾ? ಸಂವಿಧಾನದತ್ತವಾದ ಬದುಕುವ ಮೂಲಭೂತ ಹಕ್ಕು ಆಹಾರದ ಹಕ್ಕನ್ನೂ ಒಳಗೊಳ್ಳುವುದಿಲ್ಲವೇ? ಉಚಿತ ಪಡಿತರ ಯೋಜನೆಯಿಂದ ಜನ ಸೋಮಾರಿಗಳಾಗುತ್ತಾರೆ ಅಥವಾ ಕುಡಿದು ಹಾಳಾಗುತ್ತಾರೆ ಎಂದು ಯಾರೂ ಆತಂಕಪಡಬೇಕಾದ ಅಗತ್ಯವಿಲ್ಲ. ಬಡವರ ವರ್ತನೆಯ ಬಗ್ಗೆ ಯಾರೂ ಅಷ್ಟು ನಿರಾಶಾವಾದಿಗಳಾಗುವುದು ಬೇಡ. ಸರಕಾರದ ಈ ಹೊಸ ಪಡಿತರ ಯೋಜನೆಯಿಂದ ಉಳಿತಾಯವಾಗುವ ತಮ್ಮ ರೊಕ್ಕದಲ್ಲಿ

ಕೆಲವು ಬಡವರಾದರೂ, ತಮ್ಮ ಕುಟುಂಬಕ್ಕೆ ಬಟ್ಟೆ, ತಮ್ಮ ಮಕ್ಕಳಿಗೆ ಆಟಿಗೆ ಕೊಳ್ಳುವ ಬಗ್ಗೆ ಯೋಚಿಸಬಹುದು.

—ನೂತನ ಪಡಿತರ ಯೋಜನೆ ಪರಿಪೂರ್ಣವಾಗಿದ್ದು ಅದರಲ್ಲಿ ಲೋಪ ದೋಷಗಳೇ ಇಲ್ಲ ಎಂಬುದು ಈ ಲೇಖನದ ವಾದವಲ್ಲ. ಮೇಲ್ನೋಟಕ್ಕೆ ಈ ಯೋಜನೆಯಲ್ಲಿ ಎದ್ದು ಕಾಣುವ ಹಲವು ನ್ಯೂನತೆಗಳಿವೆ. ಸರಕಾರ ಈ ಯೋಜನೆಯ ಫಲಾನುಭವಿಗಳನ್ನು ಗುರುತಿಸಲು ಅನುಸರಿಸುವ ಮಾನದಂಡಗಳು ಏಕಪಕ್ಷೀಯವಾಗಿದೆ. ಅವೆಲ್ಲವೂ ಆದಾಯ ಕೇಂದ್ರಿತವಾಗಿದ್ದು ಬಡತನಕ್ಕೆ ಇರುವ ಸಾಮಾಜಿಕ ಮತ್ತು ಇತರ ಆಯಾಮಗಳನ್ನು ಪರಿಗಣಿಸುವುದಿಲ್ಲ. ರಾಜ್ಯದ ಎಲ್ಲಾ ಜಾತಿ, ಮತ, ಧರ್ಮ ಹಾಗೂ ವಯೋಮಾನಗಳ ಬಡವರ ಬಡತನ ಒಂದೇ ಬಗೆಯದ್ದಲ್ಲ. ಹಾಗೆಯೇ ನೀರಾವರಿ ಸೌಲಭ್ಯವಿರುವ ಮಂಡ್ಯ ಜಿಲ್ಲೆ ಮತ್ತು ಉದ್ಯೋಗಾವಕಾಶಗಳು ಜಾಸ್ತಿ ಇರುವ ಕರಾವಳಿ ಜಿಲ್ಲೆಗಳ ಬಡವರ ಬಡತನಕ್ಕೂ ಬರ ಪೀಡಿತ ಉತ್ತರ ಕರ್ನಾಟಕದ ಬಡತನಕ್ಕೂ ನಡುವೆ ವ್ಯತ್ಯಾಸಗಳಿವೆ. ಈ ಕಾರಣದಿಂದ ಮತ್ತು ನೌಕರಶಾಹಿಯ ಮಾಮೂಲಿ ಅದಕ್ಷತೆಯಿಂದ ಅನ್ನಭಾಗ್ಯ ಯೋಜನೆ ಅತ್ಯಂತ ಅಗತ್ಯವಿರುವ ನೂರಾರು ಬಡವರು ಅದರಿಂದ ವಂಚಿತರಾಗಿದ್ದಾರೆ. ರಾಜ್ಯದ ವಲಸೆ ಕಾರ್ಮಿಕರಲ್ಲಿಯೂ ಬಹುತೇಕ ಜನರಿಗೆ ಈ ಸೌಲಭ್ಯ ಈಗ ದೊರೆಯುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಈ ಯೋಜನೆ ಪ್ರಾಮಾಣಿಕವಾಗಿ ಜಾರಿಗೆ ಬರುವಂತೆ ಮಾಡುವಲ್ಲಿ ಆಳುವ ಮತ್ತು ವಿರೋಧ ಪಕ್ಷಗಳ ರಾಜಕೀಯ ಕಾರ್ಯಕರ್ತರು ಮುತುವರ್ಜಿ ವಹಿಸುತ್ತಿಲ್ಲ.

ಬಡವರಿಗೆ ಎಷ್ಟು ಕೊಟ್ಟರೂ ಸಾಲದು ಎಂಬ ಮಾತು ಸುಳ್ಳಲ್ಲ. ಬಡವರ ಹಸಿವು ತಣಿಯುವಂತಹದ್ದೇ ಅಲ್ಲ. ಬಹಳ ಹೊತ್ತು ಹಸಿದುಕೊಂಡಿರುವುದು ಕೂಡ ಅವರಿಗೆ ಸಾಧ್ಯವಿಲ್ಲ. ಬಂಡವಾಳ ಹೂಡಿಕೆ ಉದ್ಯೋಗ ನಿರ್ಮಾಣ ಮುಂತಾದ ಧೀರ್ಘಕಾಲೀನ ಯೋಜನೆಗಳಿಗೆ ಹಸಿದವರು ಕಾಯುತ್ತಾ ಕೂರುವಂತಿಲ್ಲ. ರಾಜ್ಯ ಸರಕಾರದ ಅನ್ನಭಾಗ್ಯ ಯೋಜನೆ ಈ ದೃಷ್ಟಿಯಿಂದ ಜನರ ತುರ್ತು ಅಗತ್ಯವಾಗಿದೆ.

'ಹೊಸ ಮನುಷ್ಯ'ದ ಸಂಪಾದಕರು ಮೇ ಸಂಚಿಕೆಯ ತಮ್ಮ ಸಂಪಾದಕರ ಟಿಪ್ಪಣಿಗಳಲ್ಲಿ ದೇಶದ ಭೀಕರ ಪರಿಸ್ಥಿತಿಯನ್ನು ಯಥಾವತ್ತಾಗಿ ನಿರೂಪಿಸಿ ಕೊನೆಯಲ್ಲಿ "ಈ ಮಧ್ಯೆ ನಮ್ಮ ಮುಖ್ಯಮಂತ್ರಿಗಳು... ಬಡವರಿಗಾಗಿ ಅಕ್ಕಿಯನ್ನು ಪುಕ್ಕಟೆ ನೀಡಲು ಹೊರಟಿದ್ದಾರೆ! ಇದು ಜನಪ್ರಿಯ ರಾಜಕಾರಣದ ಅತ್ಯಂತ ಬೇಜವಾಬ್ದಾರಿ ರೂಪವೇ ಸರಿ" ಎಂದು ಹೇಳಿರುವುದು ಸಂಪಾದಕರು ಮತ್ತು ಅವರ ಸಂಪಾದಕತ್ವದ ಪತ್ರಿಕೆ ಸದಾ ಎತ್ತಿ ಹಿಡಿಯುತ್ತಾ ಬಂದ ಸಮಾಜವಾದಕ್ಕೆ ಸರಿಹೊಂದುವುದಿಲ್ಲ. ಗ್ರಾಮ್ಷಿ ಹೇಳುವ ಚಿಂತನೆಯ ನಿರಾಶಾವಾದ ಮತ್ತು ಸಂಕಲ್ಪದ ಆಶಾವಾದ ಈ ಕಾಲದ ಅಗತ್ಯ.



**–ಜಿ. ರಾಜಶೇಖರ,** ಹಿರಿಯ ಚಿಂತಕರು ಹಾಗೂ ಲೇಖಕರು, ಉಡುಪಿ

## ಮೀನು ಕೊಡುವ ಬದಲು ಮೀನು ಹಿಡಿಯಲು ಕಲಿಸಿ

**ನಾ**ವು ಒಂದು ರೂಪಾಯಿಗೆ ಕೆ.ಜಿ. ಅಕ್ಕಿ ಮತ್ತಿತರ ಅಗ್ಗದ ಯೋಜನೆಗಳನ್ನು ವಿರೋಧಿಸುತ್ತಲೇ ಬಂದಿದ್ದೇವೆ. ಜನರಿಗೆ ಮೀನು ಹಿಡಿಯುವುದನ್ನು ಕಲಿಸಬೇಕೇ ಹೊರತು ಮೀನು ಕೊಡುವುದಲ್ಲ. ಹಸಿದವನಿಗೆ ಅನ್ನ ಕೊಡುವುದಕ್ಕಿಂತ ಅವನಲ್ಲಿ ಸ್ವಾಭಿಮಾನ ಬೆಳೆಸಬೇಕು. ಕಾಯಕ ಶ್ರದ್ಧೆ ಗಟ್ಟಿಗೊಳ್ಳಬೇಕು. ಅದರಿಂದ ವ್ಯಕ್ತಿ ಸ್ವಂತ ಕಾಲಮೇಲೆ ನಿಲ್ಲಲು ಸಾಧ್ಯವಾಗುವುದು. ಇವತ್ತಿನ ಅಗ್ಗದ ಯೋಜನೆಗಳಿಂದ ಸೋಮಾರಿತನ, ದುರಭ್ಯಾಸ ಹೆಚ್ಚುತ್ತಿದೆ. ರಾಷ್ಟ್ರೀಯ ಆದಾಯಕ್ಕೆ ದೊಡ್ಡ ಏಟು ಬೀಳುತ್ತಿದೆ. ಯಾವ ಸರ್ಕಾರವೂ ಜನರನ್ನು ನೀತಿವಂತರನ್ನಾಗಿಸಲು, ಪ್ರಜ್ಞಾವಂತರನ್ನಾಗಿಸಲು ಯೋಚಿಸುತ್ತಿಲ್ಲ?

ಅಗ್ಗದ ಯೋಜನೆಗಳ ಮೂಲಕ ಅಧಿಕಾರವನ್ನು ಭದ್ರಪಡಿಸಿಕೊಳ್ಳುವ ಹುನ್ನಾರ ಎಲ್ಲ ಸರ್ಕಾರಗಳಿಂದಲೂ ನಡೆಯುತ್ತಿರುವುದು ಖೇದಕರ ಸಂಗತಿ. ಹೀಗೆ ಹೇಳಿದಾಕ್ಷಣ ನಮಗೆ ಬಡತನದ ಅರಿವಿಲ್ಲ, ದಲಿತರ ಬಗ್ಗೆ ಕಾಳಜಿ ಇಲ್ಲ ಎಂದು ಅನೇಕರು ಈ ಹಿಂದೆಯೇ ಟೀಕಿಸಿದ್ದಾರೆ. ಆದರೂ ನಮ್ಮ ಅಭಿಪ್ರಾಯದಲ್ಲಿ ಬದಲಾವಣೆ ಇಲ್ಲ.



**–ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ,** ಸಿರಿಗೆರೆ ಶಾಖಾ ಮಠ, **ಸಾಣೆಹಳ್ಳಿ**

## ಚುನಾವಣೆ ಗೆಲುವಿಗೆ ಇದು ಆಮಿಷ

**ಮೊ**ದಲಾಗಲಿ, ಈಗಾಗಲಿ ಉಚಿತ ಅಕ್ಕಿಗಾಗಿ ಕಾರ್ಡುದಾರರಿಂದ ಬೇಡಿಕೆ ಏನು ಇರಲಿಲ್ಲ. ಇದು ಸರಕಾರದ ಏಕಪಕ್ಷೀಯ ಯೋಜನೆ. ತೀರ ಬಡ ಅಥವ ನಿರ್ಗತಿಕ, ಅಲೆಮಾರಿ ಜನರಿಗೆ ಇಂತಹ ಒಂದು ಸಹಾಯದ ಅಗತ್ಯ ಇರಬಹುದು. ಆದರೆ ಸಾರಾಸಗಟವಾಗಿ ಎಲ್ಲ ಬಿಪಿಲ್ ಕಾರ್ಡುದಾರಿಗೆ ಉಚಿತ ರೇಷನ್ ಅಗತ್ಯ ಕಂಡುಬರದು. ನಮ್ಮಲ್ಲಿ ಭರ್ಜರಿ ಕಬ್ಬು ಮತ್ತು ಇತರೆ ವಾಣಿಜ್ಯ ಬೆಳೆ ಬೆಳೆಯುವವರೆಲ್ಲ ಕಾರ್ಡು ಹೊಂದಿದ್ದಾರೆ. ಕೇಜಿಗೆ ಐದಾರು ರೂ.ಗಳಂತೆ ತಿಂಗಳಿಗೆ ನೂರಿನ್ನೂರು ರೂ. ಕಾಳುಕಡಿಗಾಗಿ ವೆಚ್ಚ ಮಾಡಲಾಗದ ಸ್ಥಿತಿಯಲ್ಲಿ ಯಾರೂ ಇಲ್ಲ. ಇದಕ್ಕೆ ಸರಕಾರವೆ ನಿಗದಿ ಮಾಡಿರುವ ಒಂದು ದಿನದ ಕನಿಷ್ಠ ವೇತನ ಸಾಕು. ನಾಲ್ಕಾರು ಸಾವಿರ ಕೋಟಿ ರೂ.ಗಳ ಇಂತಹ ಯೋಜನೆಗಳ ಹಣವನ್ನು ಸರಕಾರ ಅದೇ ವರ್ಗದ ಇತರ ಯೋಜನೆ, ಅಭಿವೃದ್ಧಿಗಾಗಿ ಬಳಸಬಹುದು.

ಈಗ ಉಚಿತವಾಗಿ ದೊರಕುತ್ತಿರುವ ಅಕ್ಕಿ ಉ.ಕರ್ನಾಟಕದಲ್ಲಿ ಮತ್ತೊಂದು ಬೆಳವಣಿಗೆಗೆ ಕಾರಣವಾಗಿದೆ. ತುಟ್ಟಿಯ ಜೋಳದೊಂದಿಗೆ ಅಗ್ಗದ ಅಕ್ಕಿ ಬೆರೆತು ಬೆಳ್ಳಗಿನ 'ಜೋಳಕ್ಕಿ' ರೊಟ್ಟಿ ಗ್ರಾಮೀಣ ಭಾಗದಲ್ಲಿ ಬಳಕೆಗೆ ಬಂದಿದೆ. ಆದರೆ ಎಲ್ಲ ಪ್ರದೇಶಗಳಲ್ಲಿ ಕಡ್ಡಾಯವಾಗಿ ವಿತರಿಸಲಾಗುತ್ತಿರುವ ಅಕ್ಕಿಯ ಬಳಕೆಯಿಂದಾಗಿ ಗ್ರಾಮೀಣ ಭಾಗದ ಆಹಾರ ಪದ್ಧತಿ ಮೇಲೆ ಆಗುತ್ತಿರುವ ಆಕ್ರಮಣ ಮತ್ತು ಅದರ ದೂರಗಾಮಿ ಪರಿಣಾಮದ ಬಗ್ಗೆ ಯಾರೂ ಚಿಂತಿಸಿದಂತೆ ಕಂಡು ಬರುವದಿಲ್ಲ. ರಾಜ್ಯದ ಹೆಚ್ಚಿನ ಭಾಗದಲ್ಲಿ ಬಳಸಲಾಗುವ ರಾಗಿ ಜೋಳ ಬೆಳೆಯುವ ಮತ್ತು ಬಳಸುವ ಜನ ಇಂದು ಕಡ್ಡಾಯದ ಅಕ್ಕಿ ಬಳಸುವಂತಾಗಿದೆ. ಶಾಲೆಗಳಲ್ಲಿ ಮಕ್ಕಳು ಬಿಸಿಊಟದ ಮೂಲಕ ನಿತ್ಯ ಅಕ್ಕಿ ತಿನ್ನುವಂತಾಗಿದೆ. ಯಥೇಚ್ಛ ರಾಸಾಯನಿಕ ಗೊಬ್ಬರ ಬಳಸಿ ಬೆಳೆಯಲಾಗುವ ಅಕ್ಕಿಯ ಬಳಕೆಯ ದೂರಗಾಮಿ ದುಷ್ಪರಿಣಾಮ, ಅಕ್ಕಿಯ ಪೋಷಕಾಂಶ, ಪೌಷ್ಠಿಕತೆ ಕುರಿತು ಯಾವ ಚಿಂತನೆ ನಡೆಯುತ್ತಿರುವದು ಕಂಡು ಬರುವದಿಲ್ಲ.

ಏನೆಲ್ಲ ಅಮಿಷಗಳ ಮೂಲಕ ಚುನಾವಣೆಗಳನ್ನು ಗೆದ್ದರೆ ಸಾಕು, ಜನರ ಕ್ರಿಯಾಶೀಲ ನಡೆ, ನೈತಿಕ ನೆಲೆಗಳು ಹಾಳಾದರೂ ಸರಿ, ಅದನ್ನು ಮುಂದೆ ಬರುವವರು ನೋಡಿಕೊಳ್ಳುತ್ತಾರೆ ಎನ್ನುವ ಮನೋಭಾವ ಎಲ್ಲ ನೇತಾರರಲ್ಲೂ ಮನೆ ಮಾಡಿ ಬಿಟ್ಟಿದೆ.



**–ವೆಂಕಟೇಶ ಮಾಚಕನೂರ,** ಶಿಕ್ಷಣ ತಜ್ಞರು ಮತ್ತು ಲೇಖಕರು, ಧಾರವಾಡ

## ಇದು ಬಡವರದ್ದೇ ಹಣದ ಕಾರ್ಯಕ್ರಮ

**ನಾ**ನು ಗ್ರಾಮಾಂತರ ಪ್ರದೇಶಗಳಲ್ಲಿಯೇ ಓದು–ಉದ್ಯೋಗ ಮುಗಿಸಿದೆ. ನಾನೀಗ ವಾಸಿಸುತ್ತಿರುವ ಸ್ಥಳ ಒಂದು ಅಭಿವೃದ್ಧಿ ಹೊಂದಿದ ಹಳ್ಳಿಯಂತಿದ್ದು, ಇಲ್ಲಿ ಸಹಕಾರ ಸಂಘಗಳ ಮೂಲಕ ಬಡವರಿಗೆ ಉಚಿತ ಅಕ್ಕಿ ವಿತರಣೆ ಕಾರ್ಯಕ್ರಮವನ್ನು ಗಮನಿಸುತ್ತಿದ್ದೇನೆ. ಈ ಯೋಜನೆಯ ಫಲಾನುಭವಿಗಳಲ್ಲಿ ಸಣ್ಣ ರೈತರು, ಕೂಲಿಕಾರರು, ವಯೋವೃದ್ಧ ಮಹಿಳೆಯರೂ ಸೇರಿದ್ದಾರೆ. ಈ ಯೋಜನೆಯಿಂದ ಮೂರು ಜನರಿರುವ ಒಂದು ಕುಟುಂಬಕ್ಕೆ ತಿಂಗಳಿಗೆ ಸರಾಸರಿ ಮೂರುನೂರು ರೂ.ಗಳ ಉಳಿತಾಯವಾಗುತ್ತದೆ.

ಈ ಯೋಜನೆಗೆ ಕೇಂದ್ರ ಸರ್ಕಾರದ 'ಆಹಾರ ಭದ್ರತೆ' ಶಾಸನದ ನೆರವಿನಿಂದ ಲಕ್ಷಾಂತರ ಟನ್ ಆಹಾರ ಧಾನ್ಯ ಪೂರೈಕೆಯಾಗುತ್ತಿದ್ದು, ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹಣಕಾಸಿನ ಹೊರೆಬೀಳುತ್ತಿಲ್ಲ. ಹೆಚ್ಚೆಂದರೆ ರಾಜ್ಯ ಬಜೆಟ್ಟಿನ ಶೇ. ೧.೫ರಷ್ಟು. ಆದರೆ ಇದರ ಬಹುಪಾಲನ್ನು, ಈ ಯೋಜನೆಯ ಪ್ರಯೋಜನ ಪಡೆಯುವ ದುಡಿಯುವ ವರ್ಗದವರು ನಿತ್ಯ ತಾವು ಬಳಸುವ ಮದ್ಯ, ಹೊಗೆಸೊಪ್ಪು, ಬೀಡಿಗಳ ಮೇಲೆ ತೆರುವ ತೆರಿಗೆಗಳಿಂದ ಸರ್ಕಾರಕ್ಕೇ ಹಿಂತಿರುಗಿಸುತ್ತಾರೆ.

ಈ ವರ್ಗದ ಜನ ನಿತ್ಯ ದುಡಿಯುವ ಹೊಲಗದ್ದೆಗಳಲ್ಲಿನ ಶ್ರಮ, ರಸ್ತೆ ಕಾಮಗಾರಿ, ಸಣ್ಣ ಕೈಗಾರಿಕೆಗಳು, ಪೌರ ಕಾರ್ಮಿಕ ಕೆಲಸ ಇವುಗಳ ಶ್ರಮದ ವೈಜ್ಞಾನಿಕ ಬೆಲೆ ನಿಗದಿಯಾಗಿಲ್ಲ. ದೇಶದ ಒಟ್ಟಾರೆ ಉತ್ಪನ್ನಕ್ಕೆ ಇವರ ದೈಹಿಕ ಶ್ರಮದ ಕೊಡುಗೆ ಅಪಾರ. ಇದಾವುದರ ಬಗ್ಗೆಗೂ ನಾವ್ಯಾರೂ ಚಿಂತಿಸಿಲ್ಲ.

ಆದಾಯ ತೆರಿಗೆ, ಅಡಿಗೆ ಅನಿಲ, ಪೆಟ್ರೋಲ್ ಉತ್ಪನ್ನಗಳು ಇತ್ಯಾದಿಗಳಿಂದ ಶ್ರೀಮಂತರು ಮತ್ತು ಮಧ್ಯಮ ವರ್ಗದ ಜನ ತಿಂಗಳಿಗೆ ಸರಾಸರಿ ೧೫೦೦

ರೂ.ಗಳ ಸಬ್‌ಸಿಡಿ ಪಡೆಯುತ್ತಿದ್ದಾರೆ. ಇನ್ನು ವಾರ್ಷಿಕ ೫ ಲಕ್ಷದಿಂದ ೧೫ ಲಕ್ಷ ರೂ.ಗಳ ಸಂಬಳ-ಸಾರಿಗೆ ಪಡೆಯುತ್ತಿರುವವರ ಸಹಾಯಧನ ಮತ್ತು ತೆರಿಗೆ ವಂಚನೆಯ ಲೆಕ್ಕ ಸಿಗುತ್ತಿಲ್ಲ.

ನಿಜ, ಹಳ್ಳಿಯೊಂದರ ಶೇ. ೯೫ ಜನ 'ಅನ್ನಭಾಗ್ಯ'ದ ಪ್ರಯೋಜನ ಪಡೆಯುತ್ತಿದ್ದಾರೆ. ಇದರಿಂದ ಈ ಜನರ ಆಹಾರ ಪದ್ಧತಿಯಲ್ಲಿ ಬದಲಾವಣೆಯಾಗಿದ್ದು, ನಿತ್ಯ ದುಡಿದರೂ ಹೊಟ್ಟೆಬಟ್ಟೆಗೆ ಪರದಾಡುವ ಈ ಜನಕ್ಕೆ ಸಹಾಯವಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಲೋಪದೋಷಗಳಿಲ್ಲದ ಕಾರ್ಯಕ್ರಮಗಳು ಎಲ್ಲಿವೆ?



**-ಹೆಚ್.ಎಂ. ರುದ್ರಸ್ವಾಮಿ,** ಶಿಕ್ಷಣ ಇಲಾಖೆಯ ನಿವೃತ್ತ ಅಧಿಕಾರಿ ಮತ್ತು ದಲಿತ ಚಳುವಳಿಯ ಹಿರಿಯ ನಾಯಕರು, ಚಿಕ್ಕಮಗಳೂರು

## ಭಾಗ್ಯಗಳು ದೌರ್ಭಾಗ್ಯ ಆಗದಿರಲಿ...

**ಈ**ಗ ಕರ್ನಾಟಕದಲ್ಲಿ ಪ್ರಾರಂಭವಾಗಿರುವ ನಾನಾ ವಿಧವಾದ 'ಭಾಗ್ಯ'ಗಳ ಪರ್ವವನ್ನು ಜನತೆಯ ವಿವೇಚನಾ ಶಕ್ತಿಹರಣದ ಪರ್ವವೆಂದೇ ಕರೆಯಬಹುದು! ಜನತೆ ತನ್ನ ವಿವೇಚನಾ ಶಕ್ತಿಯನ್ನು ಕಳೆದುಕೊಳ್ಳುವುದಕ್ಕೆ ಕಾರಣವೇನೆಂದರೆ ಸರ್ಕಾರ ಕೊಡಮಾಡುವ ಎಲ್ಲ ಭಾಗ್ಯಗಳ ಹಿಂದೆ ಜನತೆಯ ಕಲ್ಯಾಣವೇ ಪ್ರಧಾನವಾಗಿದೆ, ಬಡತನದ ನಿರ್ಮೂಲನವೇ ಗುರಿಯಾಗಿದೆ, ಪೌಷ್ಠಿಕಾಂಶದ ಕೊರತೆಯ ನಿವಾರಣೆಯೇ ಮುಖ್ಯವಾಗಿದೆ ಎಂಬಂಥ 'ವೆಲ್‌ಫೇರ್ ಸ್ಟೇಟ್'ನ ಉದ್ದೇಶಗಳನ್ನು ಮಾಧ್ಯಮಗಳ ಮೂಲಕ ಪ್ರಚಾರ ಪಡಿಸುವಲ್ಲಿ ಸರ್ಕಾರ ಯಶಸ್ವಿಯಾಗುತ್ತದೆ. ಜನತೆ ಅದನ್ನು ನಂಬುತ್ತದೆ ಮತ್ತು ಕುರಿಗಳಂತೆ ಹಳ್ಳಕ್ಕೆ ಬೀಳುತ್ತದೆ; ಚುನಾವಣೆಯ ಸಂದರ್ಭ ಬಂದಾಗಲೆಲ್ಲ 'ಭಾಗ್ಯ'ಗಳನ್ನು ಕರುಣಿಸಿದ ಅಧಿಕಾರಸ್ಥ ಪಕ್ಷಕ್ಕೆ ಮತ ಕೊಡುತ್ತದೆ. ಇದರ ಅರ್ಥ 'ಭಾಗ್ಯ'ಗಳ ಕೊಡುಗೆಯ ಹಿಂದಿನ ಉದ್ದೇಶ ರಾಜಕೀಯ ಸ್ಪರ್ಧೆಯೇ ಹೊರತು ಜನತೆಯನ್ನು ಬುದ್ಧಿವಂತರನ್ನಾಗಿ ಮತ್ತು ಕಾಯಕಸ್ಥರನ್ನಾಗಿ ಮಾಡುವ ಉದ್ದೇಶವಂತು ಖಂಡಿತವಲ್ಲ.

'ಭಾಗ್ಯ'ಗಳ ಸರಣಿ ಪ್ರಾರಂಭವಾದಾಗಿನಿಂದ ಫಲಾನುಭವಿಗಳ ಮಾನಸದಲ್ಲಿ ಮತ್ತು ಆರ್ಥಿಕವಾಗಿ ಅವರ ಜೀವನದಲ್ಲಿ ಏನೆಲ್ಲ ಸಕಾರಾತ್ಮಕ ಪರಿವರ್ತನೆಗಳಾದವು ಎಂಬುದರ ಬಗ್ಗೆ ಇದುವರೆಗೆ ನಿಖರವಾದ ಮತ್ತು ವೈಜ್ಞಾನಿಕವಾದ ಸಾಮಾಜಿಕ ಪರಿಶೀಲನೆ ನಡೆದಿಲ್ಲ. ಹಾಗೆಯೇ ಇಡೀ ಸಮಾಜ ವ್ಯವಸ್ಥೆಯ ಮೇಲೆ ಪರಿಣಾಮ ಏನಾಗಿದೆಯೆಂಬುದರ ಬಗ್ಗೆಯೂ ಪರಿಶೋಧನೆಯಾಗಿಲ್ಲ. ಕಡು ಬಡವರಿಗೆ, ಬಡವರಿಗೆ ಮತ್ತು ಅವಕಾಶ ವಂಚಿತರಿಗೆ ನೆರವು ನೀಡಬೇಕಾದುದು ಸರ್ಕಾರದ ಕರ್ತವ್ಯ. ನೆರವು ಪೂರ್ತ ಪುಕ್ಕಟೆಯಾಗಿರಬೇಕೇ ಅಥವಾ ರಿಯಾಯಿತಿ ದರದಲ್ಲಿ ಇರಬೇಕೇ ಎಂಬುದನ್ನು ಕೂಡ ಆಲೋಚಿಸಬೇಕಾಗುತ್ತದೆ. ಆದರೆ ಸಂಪೂರ್ಣ ಉಚಿತ ಕೊಡುವುದು ಅದರಲ್ಲಿಯೂ ಮುಖ್ಯವಾಗಿ ಅಕ್ಕಿಯಂಥ ಜೀವನಾವಶ್ಯಕವಾದ ಪದಾರ್ಥಗಳನ್ನು ಉಚಿತವಾಗಿ ಕೊಡುವುದು ಖಂಡಿತವಾಗಿಯೂ ತಪ್ಪು. ಜೀವನಕ್ಕೆ ಅನ್ನ ಸಂಪಾದಿಸಬೇಕಾದುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯ. ದುಡಿಯದೆಯೆ ತಿನ್ನುವ ಮನುಷ್ಯ ಕಳ್ಳನೆಂದೆ ಪರಿಭಾವಿಸುವ ಸಂಸ್ಕೃತಿ ಈ ನೆಲದ್ದಾಗಿದೆ.

ಬಡತನದ ಹೆಸರಿನಲ್ಲಿ ಆಹಾರ ಪದಾರ್ಥಗಳನ್ನು ಉಚಿತವಾಗಿ ಕೊಡುವುದು ಮತ್ತು ನಿರುದ್ಯೋಗದ ಹೆಸರಿನಲ್ಲಿ ಭತ್ಯೆ ಕೊಡುವುದು ಮುಂತಾದವು ಆರ್ಥಿಕವಾಗಿ ಸಮೃದ್ಧವಾದ ಪಾಶ್ಚಿಮಾತ್ಯ ದೇಶಗಳ ರೀತಿ. ಆ ದೇಶಗಳಲ್ಲಿ ಜನಸಂಖ್ಯೆಯು ಕಡಿಮೆ. ಯಾಂತ್ರೀಕರಣ ಮುಖ್ಯವಾಗಿದೆ. ಆದರೆ ಭಾರತದಲ್ಲಿ ಅಪಾರವಾದ ಮಾನವಶಕ್ತಿಯಿದೆ; ಪ್ರಾಕೃತಿಕ ಸಂಪತ್ತು ಇದೆ; ಈಗ ದೇಶಕ್ಕೆ ಬೇಕಾಗಿರುವುದು ದುಡಿಯುವ ಕೈಗಳು ಮತ್ತು ಶ್ರಮ ಜೀವಿಗಳು. ದುಡಿಮೆಗೆ ಮುಖ್ಯ ಕಾರಣ ಮತ್ತು ಪ್ರೇರಣೆ ಅನ್ನ ಸಂಪಾದನೆ. ಅನ್ನ ಸಂಪಾದನೆಯ ಅಗತ್ಯವನ್ನೇ ತಪ್ಪಿಸುವ ಕೆಲಸವನ್ನು ಸರ್ಕಾರ ಮಾಡಿದರೆ ದೇಶದ ಗತಿಯೇನು? ಭಾಗ್ಯಗಳು ದೌರ್ಭಾಗ್ಯ ಆಗದಿರಲೆಂದು ಆಶಿಸೋಣ.



**-ಸುರೇಂದ್ರ ಕೌಲಗಿ,** ಸರ್ವೋದಯ ಮುಖಂಡರು ಮತ್ತು 'ಜನಪದ ವಿಚಾರ' ಪತ್ರಿಕೆಯ ಸಂಪಾದಕರು, ಮೇಲುಕೋಟೆ

## ಸಮಾಜವಾದ ಕನಸು ನನಸಾಗಿದೆ!

**ಕ**ರ್ನಾಟಕದಲ್ಲಿ ಈ ಹಿಂದೆ ಸಮಾಜವಾದಿ ಪಕ್ಷ ಸಕ್ರಿಯ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿದ್ದಾಗ ನಾನು ಬೆಂಗಳೂರಿನಲ್ಲೊಮ್ಮೆ ವಿಧಾನ ಸೌಧದ ಕಲಾಪಗಳನ್ನು ವೀಕ್ಷಿಸಲು ಶಾಂತವೇರಿ ಗೋಪಾಲಗೌಡರೊಂದಿಗೆ ವಿಧಾನಸೌಧಕ್ಕೆ ಹೋಗಿ ಗ್ಯಾಲರಿಯಲ್ಲಿ ಕೂತಿದ್ದ ಸಂದರ್ಭ. 'ಸರ್ಕಾರಿ ನೌಕರಿ ಅಥವಾ ಸ್ವಂತ ಜಮೀನು ಇಲ್ಲದ ಬಡ ಕುಟುಂಬಗಳಿಗೆ ಆಹಾರ ಭದ್ರತೆಗಾಗಿ ಏನಾದರೂ ವಿಧಾನ ಹುಡುಕಿ' ಎಂಬ ವಿರೋಧ ಪಕ್ಷಗಳ ಮಾತಿಗೆ 'ಆಲೋಚನೆ ಮಾಡೋಣ...' ಎಂದು ಆಡಳಿತ ಪಕ್ಷದವರು ರಾಗ ಎಳೆದಾಗ ಸಮಾಜವಾದಿ ಪಕ್ಷದ ಶಾಸಕರು 'ನಾವು ಪ್ರಸ್ತಾಪಿಸಿದ ಕುಟುಂಬಗಳೇ ಬಂಡವಾಳ ಉತ್ಪಾದಕರಾಗಿದ್ದು ಆಡಳಿತ ಪಕ್ಷ ಈ ಬಗ್ಗೆ ರಾಗ ಎಳೆಯುತ್ತಾ ಕಾಲಹರಣ ಮಾಡಬಾರದು' ಎಂದು ಕೆರಳಿ ಹೇಳಿದ ಮಾತುಗಳು ನನ್ನ ಕಿವಿಯಲ್ಲಿ ಈಗಲೂ ಗುಂಯ್‌ಗುಡುತ್ತಿವೆ.

ಈಗ ಸರ್ಕಾರ ಅದನ್ನೇ 'ಅನ್ನಭಾಗ್ಯ' ಹೆಸರಿನಡಿ ಬಡಕುಟುಂಬಗಳಿಗೆ ಪುಕ್ಕಟೆಯಾಗಿ ಅಕ್ಕಿ, ಬೇಳೆ, ಬೆಲ್ಲ, ಎಣ್ಣೆಗಳನ್ನು ನೀಡುತ್ತಿದ್ದು, ಅದು ಸರಿಯೆನ್ನಿಸುತ್ತದೆ. ಆದರೆ ಬಡವರಿಗೆ ಪೌಷ್ಠಿಕಾಂಶ ಒದಗಿಸಲು ಅಕ್ಕಿಯನ್ನು ಹೆಚ್ಚು ಪಾಲಿಷ್ ಮಾಡದೆ ಕೊಡಬೇಕೆಂಬುದು ನನ್ನ ಅಭಿಪ್ರಾಯ. ಜೊತೆಗೆ ಈ ವಸ್ತುಗಳು ನ್ಯಾಯಬೆಲೆ ಅಂಗಡಿಗೋ, ಹೆಂಡದಂಗಡಿಗಳಿಗೋ ಕದ್ದು ಮುಚ್ಚಿ ವ್ಯಾಪಾರವಾಗದಂತೆ ಸರ್ಕಾರ ನೋಡಿಕೊಳ್ಳಬೇಕು. ಮತ್ತೂ ಒಂದು ಹೆಜ್ಜೆ ಮುಂದುವರೆದು ಹೇಳಬೇಕೆಂದರೆ, ಈ ಆಹಾರ ಪದಾರ್ಥಗಳನ್ನು ಹೇಗಾದರೂ ಮಾಡಿ ರೈತರಿಂದ ಸಾವಯವ ಕೃಷಿ ಪದ್ಧತಿ ಮೂಲಕ ಬೆಳೆಸಿ ಅದನ್ನು ಬಡವರಿಗೆ ಕೊಡುವುದು ಸರ್ವ ಶ್ರೇಷ್ಠ. ವೈಜ್ಞಾನಿಕ ಕೂಲಿ ಜಾರಿಗೆ ಬರುವವರೆಗೆ 'ಅನ್ನಭಾಗ್ಯ'ವನ್ನು ತಪ್ಪೆಂದು ಹೇಳಲಿಕ್ಕಾಗುವುದಿಲ್ಲ.



**-ಕಡಿದಾಳು ಶಾಮಣ್ಣ,** ಹಿರಿಯ ಸಮಾಜವಾದಿ ಹಾಗೂ ರೈತನಾಯಕರು, ಭಗವತಿಕೆರೆ
\

## ಶ್ರಮ ಸಂಸ್ಕೃತಿಗೆ ಸಂದ ಗೌರವ.

**ಸ**ಮಾಜದ ವಿವಿಧ ವಲಯಗಳಿಂದ ಮತ್ತು ಕೆಲ ಆರ್ಥಿಕ ತಜ್ಞರಿಂದ, ವಿಮರ್ಶಕರಿಂದ ಅಕ್ಕಿ ಯೋಜನೆ ಕುರಿತು ಸಭ್ಯತೆ ಎಲ್ಲೆ ಮೀರಿದ ಟೀಕೆ ವ್ಯಕ್ತವಾಗುತ್ತಿದೆ. ಅದರಂತೆ ಜಮೀನಿನ ಪಟ್ಟಾ ಹೊಂದಿದ ಕಾರಣಕ್ಕೆ ರೈತರಾದ ಆಧುನಿಕ ರೈತ ವರ್ಗ ಕೂಡ ಕೂಲಿ ಆಳಿನ ಸಮಸ್ಯೆಯನ್ನು ಮುಂದೆ ಮಾಡಿ, ಪುಕ್ಕಟೆ ಅಕ್ಕಿ ನೀಡುತ್ತಿರುವ ಕಾರಣಕ್ಕೆ ಕೂಲಿಕಾರರು ಅಹಂಕಾರಿಗಳಾಗಿದ್ದಾರೆಂದು ದೂರುತ್ತಿದ್ದಾರೆ. ಬಡವರನ್ನು ಸೋಮಾರಿಗಳನ್ನಾಗಿ ಮಾಡುವ ಯೋಜನೆಯೆಂದು ಲಘುವಾಗಿ ಶ್ರಮ ಜೀವಿಗಳನ್ನು ಅವಮಾನಿಸಲಾಗುತ್ತಿದೆ. ಇದನ್ನೆಲ್ಲಾ ಗಮನಿಸಿದಾಗ ಚುನಾಯಿತ ಸರಕಾರಗಳ ಕೆಲಸ, ಬಂಡವಾಳಶಾಹಿಗಳ, ಗುತ್ತಿಗೆದಾರರ ಹಾಗೂ ಸ್ಥಿತಿವಂತರ, ಕಾರಕೂನಿಕೆ ಮಾಡುವುದು ಮಾತ್ರವೇ? ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ನಮ್ಮ ಸಂವಿಧಾನದ ಆಶಯ ಕೂಡ ಜನರ ಮೂಲಭೂತ ಅವಶ್ಯಕತೆಗಳಾದ ಆಹಾರ, ನೀರು, ಶಿಕ್ಷಣ, ಆರೋಗ್ಯ ಸೇವೆಗಳನ್ನು ಎಲ್ಲ ಜನತೆಗೂ ಒದಗಿಸುವುದು ಚುನಾಯಿತ ಸರಕಾರದ ಜವಾಬ್ದಾರಿ ಎಂಬುದನ್ನು ಮರೆಯಲಾಗದು. ಈ ಕಾರಣಕ್ಕೇ ಸಮಾಜವಾದಿ ಚಿಂತಕ ಡಾ. ರಾಮ ಮನೋಹರ ಲೋಹಿಯಾ ಅಧಿಕಾರ ರಾಜಕಾರಣದ ಬಗ್ಗೆ ಮಾತನಾಡುತ್ತ, ನಾಯಕರಾದವರು ಅಪಾಯಕ್ಕೆದುರಾಗಿ ಮುನ್ನುಗ್ಗುವ ಗುಣ ಹೊಂದಿದಾಗ ಮಾತ್ರ ಸಮಾಜದಲ್ಲಿ ಏನಾದರೂ ಬದಲಾವಣೆ ತರಲು ಸಾಧ್ಯವೆಂದು ಮಾರ್ಮಿಕವಾಗಿ ಹೇಳಿದ್ದು ನೆನಪಾಗಿತ್ತದೆ.

ಸಿದ್ಧರಾಮಯ್ಯನವರ ಅನ್ನಭಾಗ್ಯ ಯೋಜನೆಯಲ್ಲಿ ರಾಜಕೀಯ ಲಾಭವಿಲ್ಲವೆಂದು ಹಾಗೂ ವಿತರಣೆಯಲ್ಲಿ ಅದರ ಲೋಪದೋಷಗಳನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅದು ಬಿರುವ ಸಾಮಾಜಿಕ ಪರಿಣಾಮಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ಶ್ರಮ ಸಂಸ್ಕೃತಿಯನ್ನು ಗೌರವಿಸಬೇಕಾಗಿದೆ.



**-ಅಜ್ಜಪ್ಪ ಬಿರಡಿ,** ಕೃಷಿ ಪತ್ತಿನ ಸಹಕಾರಿ ಬ್ಯಾಂಕಿನ ಕಾರ್ಯದರ್ಶಿ, ಗೋಕಾಕ

## ವಾಸ್ತವ ಸ್ಥಿತಿ ಏನು? ಸರ್ಕಾರ ತಿಳಿಸಬೇಕು!

ಬೆಂಗಳೂರಿನ ರಸ್ತೆಗಳ ಪಕ್ಕದಲ್ಲಿ ಮೂವತ್ತು ನಲವತ್ತು ವರ್ಷಗಳ ಕಾಲದಿಂದ ಬೆಳೆದು ನಿಂತಿರುವ ಬೃಹತ್ 'ಮಳೆ ಮರ'ಗಳ (ರೇನ್ ಟ್ರೀ) ತೊಗಟೆಯನ್ನು ಬಡಜನರು ಕಿತ್ತು ಅದನ್ನು ಉರುವಲನ್ನಾಗಿ ಉಪಯೋಗಿಸುವುದನ್ನು ಅನೇಕ ವರ್ಷಗಳಿಂದ ನೋಡುತ್ತಿದ್ದೇನೆ. ತಮ್ಮ ತೊಗಟೆಗಳನ್ನು ಕಳೆದುಕೊಂಡ ಆ ಮರಗಳು ಬೇಗ ಜೀವ ಕಳೆದುಕೊಳ್ಳುವುದು ಖಾತ್ರಿ. ಆದರೆ ಇಂತಹ ಹಾನಿಕಾರಕ ಕೆಲಸದಲ್ಲಿ ತೊಡಗಿರುವ ಜನರನ್ನು ವಿರೋಧಿಸುವುದಕ್ಕೆ ಮನಸ್ಸಾಗುವುದಿಲ್ಲ. ಅದೇ ರೀತಿ ನಮ್ಮ ರಾಜ್ಯ ಸರ್ಕಾರದ 'ಅನ್ನ ಭಾಗ್ಯ' ಯೋಜನೆಯನ್ನೂ ವಿರೋಧಿಸುವುದು ಸರಿಯಲ್ಲ ಎಂದೇ ಅನಿಸುತ್ತದೆ. ಆದರೆ ಬಡ ಜನರಿಗೆ ಅನ್ನ ಭಾಗ್ಯ ಕೊಟ್ಟಿರುವ ಇದೇ ಸರ್ಕಾರ ತನ್ನಲ್ಲಿ ಹಣವಿಲ್ಲವೆಂದು ಇದೇ ಬಡಜನರ ಮಕ್ಕಳು ಓದುವ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರನ್ನು ನೇಮಿಸುತ್ತಿಲ್ಲ; ಈ ಜನರು ಅಸ್ವಸ್ಥರಾದಾಗ ಅವರಿಗೆ ಸರ್ಕಾರಿ ದವಾಖಾನೆಗಳಲ್ಲಿ, ವೈದ್ಯರು ಮತ್ತು ಔಷಧಗಳ ಕೊರತೆಯಿಂದಾಗಿ ಸರಿಯಾದ ಶುಶ್ರೂಷೆ ಸಿಗದೆ ಅವರಿಗೆ ಹಾನಿಯಾಗುವುದೂ ಸಾಮಾನ್ಯ ಸಂಗತಿಯಾಗಿದೆ.

ಒಂದು ಕಡೆ ಜಗತ್ತಿನ ಅತಿ ಹೆಚ್ಚು ಜನ ಬಡವರು ಭಾರತದಲ್ಲಿ ಇದ್ದಾರೆ ಎಂಬ ಸುದ್ದಿಯನ್ನು ಓದುತ್ತಾ ಇರುತ್ತೇವೆ. ಹಾಗೆಯೇ ಅನೇಕ ವರ್ಷಗಳಿಂದ ನಮ್ಮ ರೈತರು ತಮ್ಮ ಹೊಲಗಳಲ್ಲಿ ದುಡಿಯಲು ಕೂಲಿಗಳು ಸಿಗುತ್ತಿಲ್ಲ ಎಂದು ಹೇಳುವುದೂ ವರದಿಯಾಗುತ್ತಲೇ ಇದೆ. ಹಾಗಾದರೆ ವಾಸ್ತವ ಸ್ಥಿತಿ ಏನು? ಇದರ ಬಗ್ಗೆ ಮಾಹಿತಿ ಇರುವುದು ಸರ್ಕಾರದಲ್ಲೆ. ಸರ್ಕಾರದವರು ತಮ್ಮಲ್ಲಿರುವ ಎಲ್ಲಾ ಮಾಹಿತಿಯನ್ನು ಜನರ ಮುಂದೆ ಇಟ್ಟು, ತನ್ನ 'ಅನ್ನ ಭಾಗ್ಯ'ದಂತಹ ಯೋಜನೆಗಳ ಅವಶ್ಯಕತೆ ಮತ್ತು ಅದರಿಂದ ಬಡವರ ಜೀವನದಲ್ಲಾಗಿರುವ ಬದಲಾವಣೆಗಳನ್ನು ಪ್ರಚುರಪಡಿಸಬೇಕು.



ಇನ್ನೊಂದು ಮುಖ್ಯ ಅಂಶ ಎಂದರೆ, ನಮ್ಮ ಅಧಿಕಾರಸ್ಥರಿಗೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು, ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು, ಆಡಳಿತಶಾಹಿಯನ್ನು ಚುರುಕುಗೊಳಿಸುವುದು ಅಸಾಧ್ಯ ಎಂಬುದು ತಿಳಿದಿದೆ. ಅದರಿಂದಾಗಿಯೇ ಅವರು 'ಅನ್ನ ಭಾಗ್ಯ'ದಂತಹ ಸುಲಭ ಯೋಜನೆಗಳನ್ನು ಆಯ್ದುಕೊಂಡಿದ್ದಾರೆ.

**–ಗಿರೀಶ್ ವಿ. ವಾಘ್,** ನಿವೃತ್ತ ಪತ್ರಕರ್ತರು ಬೆಂಗಳೂರು

## ಬಡವರ ಮನುಷ್ಯತ್ವವನ್ನು ತಗ್ಗಿಸಿದಂತಲ್ಲವೇ?

ಇದೀಗ ಅತ್ಯಂತ ಸಂಕಟದ ವಿಷಯ: ಒಂದು ತುತ್ತು ದೊರಕಿಸಿಕೊಳ್ಳಲಾಗದಂತೆ ಅಸಹಾಯಕರಾಗಿರುವ ಮಂದಿಗೆ ಸರ್ಕಾರ ಅಕ್ಕಿಯನ್ನು ಉಚಿತವಾಗಿ ನೀಡುವುದು ತಪ್ಪು ಎಂದು ಹೇಳಲು ಗಂಟಲು ಹೂತುಹೋದಂತಾಗುತ್ತದೆ. ನಮ್ಮ ಮನೆಗೆ ಒಂದು ಮುದುಕಿ ಭಿಕ್ಷೆ ಬೇಡಲು ಬಂದಿತ್ತು. ಆಕೆಯ ಕಂಕುಳಲ್ಲೊಂದು ಮಗು. ನನ್ನ ಹೆಂಡತಿ ಆಕೆಗೆ ಏನನ್ನೋ ನೀಡಲು ಹೋದಾಗ ಅವಳು–'ಅವ್ವ, ಅನ್ನ ಇದ್ದರೆ ಕೊಡಿ. ಈ ಮಗುವಿಗೆ. ನನಗೆ ಈ ಇಳಿವಯಸ್ಸಲ್ಲಿ ಇಂಥ ಎರಡು ಮಕ್ಕಳನ್ನು ನೋಡಿಕೊಳ್ಳುವ ಭಾರ ಬಿದ್ದಿದೆ' ಎಂದಳಂತೆ. ಅವಳ ಮಗ ಸೊಸೆ ಆ ಎರಡು ಮಕ್ಕಳನ್ನು ಬಿಟ್ಟು ಇದ್ದಕ್ಕಿದ್ದಂತೆ ತೀರಿಹೋಗಿದ್ದರು....

ನಾನು ಹಸಿವಿನ ಬಗ್ಗೆ 'ಜೀವಯಾನ' ಎಂಬ ಕವಿತಾ ಸರಣಿ ಬರೆದಿದ್ದೇನೆ. ನನ್ನ ಹೆಂಡತಿ ಅಂದಳು; ನಿಮ್ಮ ಜೀವಯಾನದ ಅಷ್ಟೂ ಸಂಕಟ ಈ ಮುದುಕಿಯ ಕಷ್ಟದ ಮುಂದೆ ಏನೂ ಅಲ್ಲ ಅಲ್ಲವೇ? ನಾನು ಆ ಮುದುಕಿಯನ್ನು ಸ್ವತಃ ನೋಡಲಿಲ್ಲ, ಆದರೆ ದುಃಖ ಹೆಪ್ಪುಗಟ್ಟಿದ ಆ ಮುಪ್ಪಿನ ಮೋರೆಯನ್ನು ಊಹಿಸಬಲ್ಲೆ.

ಆಕೆಯಂಥವರನ್ನು ನೋಡಿಕೊಳ್ಳುವುದು ಸಮಾಜದ ಧರ್ಮವೇ ಎನ್ನುವುದಕ್ಕೆ ಎರಡು ಮಾತಿಲ್ಲ. ಅಂಥವರ ಸಂಖ್ಯೆ ಎಷ್ಟಿರಬಹುದು ಎಂದು ಯೋಚಿಸುತ್ತ ವಿಚಾರಿಸುತ್ತ ಹೋದೆ. ಬಹಳ ಇರಲಿಕ್ಕಿಲ್ಲ ಎನಿಸಿತು. ಮತ್ತು ಅಂಥವರ ನೆವದಲ್ಲಿ ತಾವು ಬಡವರೆಂದು ಹೇಳಿಕೊಳ್ಳುವ ಎಲ್ಲರನ್ನೂ ಅಶಕ್ತರೆಂದು ತಿಳಿಯುವುದು ಮತ್ತು ಅವರಿಗೇ ತಿಳಿಸುವುದು ಬಡವರ ಮನುಷ್ಯತ್ವವನ್ನು ತಗ್ಗಿಸಿದಂತಲ್ಲವೇ ಎನ್ನಿಸಿತು.

ಕಾಲಕಾಲಕ್ಕೆ ಇಲ್ಲಿ ಬಂದ ಎಲ್ಲ ಸರ್ಕಾರಗಳೂ ಜನರ ಚಾರಿತ್ರ್ಯವನ್ನು ನಾಶ ಮಾಡುತ್ತಲೇ ಹೋಗಿವೆ. ಈ ದೇಶದಲ್ಲಿ ಈಗ ಬಹು ಪ್ರಧಾನವಾಗಿರುವ ಎರಡು ವಿಚಾರಗಳಾದ–ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಇವುಗಳು ಶ್ರೀಮಂತ ಬಡವ ಎನ್ನದೆ ಎಲ್ಲ ಜನವರ್ಗಗಳನ್ನೂ ಹಾಗೆ ಆತ್ಮಸಾಕ್ಷಿರಹಿತ, ನ್ಯಾಯ ಪ್ರಜ್ಞೆಯಿಲ್ಲದ ದುರಾಶಾಪೀಡಿತರನ್ನಾಗಿಸುತ್ತಿರುವ ದೃಶ್ಯ ಘೋರವಾಗಿದೆ. ಅನ್ನದ ಕೊರತೆ ಕೆಲವರಿಗಿದೆ ಹಲವರಿಗಿಲ್ಲ. ಆದರೆ ಮನಸ್ಸಿನ ದಾರಿದ್ರ್ಯ ಬಹಪಾಲು ಜನಸಮುದಾಯದ್ದಾಗಿದೆ. ಬಡತನ ಬಹಳ ಕೆಟ್ಟದ್ದು, ಆದರೆ ಅದಕ್ಕೆ ಸರಳತೆಯ ಮೆರಗು ಬಂದರೆ ಅತ್ಯಂತ ಆಧ್ಯಾತ್ಮಿಕವಾದ್ದು. ಸಮಾನತೆಯ ಆದರ್ಶ ಆಕರ್ಶಕವೇನೋ ನಿಜ, ಆದರೆ ಈಗಾಗುತ್ತಿರುವಂತೆ ಅದರ ಕುರಿತಾಗಿ ಸಮತೋಲ ದೃಷ್ಟಿ ಸಾಧ್ಯವಾಗದಿದ್ದರೆ ಅದೂ ಮತ್ತೆ ದ್ವೇಷ ತ್ವೇಷಗಳನ್ನು ಹಬ್ಬಿಸುವುದು ದುರಂತ.

ಈಗಿನಂತೆ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಈ ಎರಡೂ ವಿಚಾರಗಳ ವಿಕೃತ ರೂಪಕ್ಕಿಂತ, ಕೆಲವು ಮಾನವೀಯ ಗುಣಗಳು–ಪ್ರಾಮಾಣಿಕತೆ, ವಿಶ್ವಾಸಾರ್ಹತೆ, ಕಷ್ಟಪಟ್ಟು ದುಡಿಯುವುದು ಇಂಥವೇ ಆ ಎರಡೂ ಗುರಿಗಳನ್ನು ಹೆಚ್ಚು ಸಾಧಿಸುತ್ತಿದ್ದವು ಎನಿಸುತ್ತದೆ.

ಜನರ ಚಾರಿತ್ರ್ಯ ನಾಶ ಎಂದು ಬರೆದೆ, ಅದರ ಅರ್ಥವೇನು? ವ್ಯಕ್ತಿಯಾಗಿ ಮತ್ತು ಸಮುದಾಯದ ಅಂಗವಾಗಿ ಜನ ಎಲ್ಲ ರೀತಿಯ ಸ್ವಾಭಿಮಾನ, ಜವಾಬ್ದಾರಿ, ಕೃತಜ್ಞತೆ, ಸಾಚಾತನ, ಋಜುತ್ವಗಳನ್ನು ಕಳೆದುಕೊಳ್ಳುತ್ತ ಹೋಗುವುದು. ಎಲ್ಲವೂ ತಮ್ಮ ಹಕ್ಕಷ್ಟೇ ಎಂದು ಪರಿಗಣಿಸುವುದು. ತಮಗೆ ಬಹಳ ಅನ್ಯಾಯವಾಗಿದೆ ಎಂದೇ ಎಲ್ಲರೂ ನಂಬುತ್ತ ತಮಗೆ ಸಲ್ಲಬೇಕಾದ್ದಕ್ಕಿಂತ ಹೆಚ್ಚಿನದನ್ನು ನಿರ್ಲಜ್ಜರಾಗಿ ಬಾಚಿಕೊಳ್ಳಲು ಯತ್ನಿಸುವುದು.....ಮತ್ತು ಎಲ್ಲರೂ ಎಲ್ಲರನ್ನೂ ಬೈಯುತ್ತ ತಾವು ಸರಿ ಎಂಬ ಭಾವದಲ್ಲಿ ನೊಚ್ಚಗಿರುವುದು.....

ಜನರನ್ನು ಸರಿಹಾದಿಯಲ್ಲಿ ನಡೆಸುವ ನಾಯಕನಾಗಿರಬೇಕಾದ ಸರ್ಕಾರ ಹೆಂಬೇಡಿಯಾಗಿ ನ್ಯಾಯವಂತಿಕೆಗಿಂತಲೂ ಜನರನ್ನು ಕೆರಳಿಸುವುದು ಅಥವಾ ಪೂಸಿಹೊಡೆಯುವುದು ಮಾಡುತ್ತ ಜನಪ್ರಿಯವಾಗುಳಿಯಲು–ಅದು ಯಾಕೆ ಎಂದು ಎಲ್ಲರಿಗೂ ಗೊತ್ತು–ದೊಂಬರಾಟ ನಡೆಸುವುದನ್ನು ಕಾಣುತ್ತಿದ್ದೇವೆ. ಇಂಥದನ್ನು ನಾವು ಗವರ್ನಮೆಂಟ್ ಎನ್ನಬಹುದೇ?

ಸರ್ಕಾರವೂ ಮೊದಲು 'ರಾಜಕಾರಣಿ'ಗಳ, ಬಳಿಕ ಶ್ರೀಮಂತರ ಹಿತಕಾಯಲು ಇರುವ ಒಂದು ಏಜೆಂಟ್‌ನಂತಾಗಿದೆ. ಸಿಂಹ ಬೇಟೆಯಾಡಿ ಖಂಡಗಳನ್ನು ಕಬಳಿಸಿದ ಮೇಲೆ ತೋಳ ನರಿ ಕೊನೆಗೆ ನಾಯಿಗೂ ಒಂದು ಮೂಳೆ ಬಿಟ್ಟುಕೊಡುವಂತೆ ಜನತೆಗೆ ದೊರೆಯುವ ಎಲ್ಲ 'ಭಾಗ್ಯ'ಗಳೂ ಇವೆ.

ಹಾಗಲ್ಲದಿದ್ದರೆ ಸರ್ಕಾರ ಇನ್ನೂ ದೂರಗಾಮಿಯಾಗಿ ಯೋಚಿಸಲು ಸಾಧ್ಯವಿಲ್ಲವೆ? ಜನರನ್ನು ಬಡವರು ಎಂದು, ದೈನೇಸಿಗಳು ಎಂದು ಅಸಮರ್ಥರು ಎಂದು ಪರೋಕ್ಷವಾಗಿ ಹೀನಾಯಗೊಳಿಸುವ ಬದಲು ಅವರು ಯಾರಷ್ಟೇ ಆತ್ಮಗೌರವದ ಮನುಷ್ಯರು ಎಂದು ತಿಳಿದು ಬೆಂಬಲಿಸಲು ಸಾಧ್ಯವಿಲ್ಲವೆ?

ಸಾಹಿತಿ ಭೈರಪ್ಪನವರು ಸರಿಯಾಗಿಯೋ ತಪ್ಪಾಗಿಯೋ ಅನ್ನಭಾಗ್ಯದಂಥ ಯೋಜನೆಯಿಂದ ಜನರು ಸೋಮಾರಿಗಳಾಗುತ್ತಾರೆ ಎಂದರು. ಮರುದಿನವೇ ಮುಖ್ಯಮಂತ್ರಿಯವರು 'ತೊಡೆತಟ್ಟಿ' ಶತಶತಮಾನಗಳಿಂದ ದುಡಿಯದಿದ್ದರೂ ಹಸಿವೇನೆಂದು ತಿಳಿಯದೆ ಆರಾಮಾಗಿ ಇರುವವರು ಈ ರೀತಿ ಹೇಳುತ್ತಾರೆ ಎಂಬ ಅರ್ಥದ ಮಾತಾಡಿದರು. ಇಡೀ ನಾಡಿನ ಮುಖ್ಯಮಂತ್ರಿಯಾದವರ ಗುರಿ ಯಾರಿತ್ತು ಎಂದು ಸರಳವಾಗಿ ಎಲ್ಲರಿಗೂ ಗೊತ್ತಾಗುವಂತಿತ್ತು. ಶತಶತಮಾನಗಳ ಅಥವಾ ಈಗ ಇನ್ನೂ ಸಹಸ್ರಮಾನಗಳ ಲೆಕ್ಕವನ್ನೆಲ್ಲ ಚುಕ್ತ ಮಾಡುವ ಮಾತು ಇಂದು ನಮ್ಮ ಸಮಾಜದಲ್ಲಿ ಯಾಕೋ ಹೇರಳವಾಗಿದೆ. ಅದೊಂದು ತೆರನ ಮೂಲಭೂತವಾದ ಎಂದು ಯಾಕೆ ಯಾರಿಗೂ ಕಾಣಿಸುವುದಿಲ್ಲ?

ಭೈರಪ್ಪನವರ ಮಾತಿನ ಸಂದರ್ಭದಲ್ಲಿ ಹೊಣೆಯರಿತ ನಾಯಕನಾಗಿದ್ದರೆ 'ಹೌದು, ದುಡಿಯದೇ ಉಚಿತವಾಗಿ ಅಕ್ಕಿ ಪಡೆಯುವುದು ಯಾರನ್ನಾದರೂ ಹಾಳು ಮಾಡುತ್ತದೆ. ಆದರೆ ಅತ್ಯಂತ ಅಸಹಾಯಕರಿಗೆ ಆಸರೆಯಾಗಲಿ ಎಂದು ತಾತ್ಕಾಲಿಕವಾಗಿ ಈ ಕ್ರಮ' ಎಂದು ಸಮಾಧಾನವಾಗಿ ಉತ್ತರಿಸಬಹುದಿತ್ತು. ಮತ್ತು ಸರ್ಕಾರಗಳು ಆ ತಿಳುವಳಿಕೆಯನ್ನು ಎಲ್ಲರಲ್ಲಿ ಮೂಡಿಸುವುದೂ ಅದರ ಜವಾಬ್ದಾರಿಯೇ ಆಗಿರುವುದಿಲ್ಲವೇ? ಇಲ್ಲದಿದ್ದರೆ ಈಗಾಗುತ್ತಿರುವಂತೆ ಸಮಾಜದಲ್ಲಿ ದ್ವೇಷಕ್ಕೆ ದ್ವೇಷ ಸೇರುತ್ತಲೇ ಹೋಗುವುದನ್ನು ನೋಡುತ್ತ ಇರಬೇಕೇ?



**–ಎಸ್ ಮಂಜುನಾಥ್,** ಕವಿ, ಹಾಗೂ ಚಿಂತಕ, ಕೆ.ಆರ್. ನಗರ

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ-೩೩

–ಇಂದಿರಾ ಬಿ.ಕೃಷ್ಣಪ್ಪ

## ಚಂದ್ರಗುತ್ತಿ ಹೋರಾಟದ ಪ್ರತಿಧ್ವನಿಗಳು

ಕೃಷ್ಣಪ್ಪ ಯಾವತ್ತೂ ಕೂಡ, ಯಾವ ವಿಷಯದಲ್ಲೂ ನನಗ್ಯಾವ ನಿರ್ದೇಶನವನ್ನೂ ಕೊಟ್ಟವರಲ್ಲ. ನನ್ನ ಆಯ್ಕೆ ತೀರ್ಮಾನಗಳು ನನ್ನವೇ ಆಗಿದ್ದರಿಂದ, ಚಂದ್ರಗುತ್ತಿಗೆ ಹೋಗಿ ಪಾರಾಗಿ ಬಂದಿದ್ದರ ಬಗ್ಗೆ ವಿಚಾರಿಸಿದರೆ ವಿನಹ, ಪ್ರಶ್ನೆಗಳನ್ನು ಮಾಡಲಿಲ್ಲ. ಚಂದ್ರಗುತ್ತಿ ಬೆತ್ತಲೆ ಸೇವೆಯ ವಿರುದ್ಧದ ಬಗ್ಗೆ ಸದನದಲ್ಲಿ ಬಹು ದೊಡ್ಡಮಟ್ಟದ ಚರ್ಚೆಗಳಾದವು. ಮಾಧ್ಯಮದವರು ಈ ಹೋರಾಟದಲ್ಲಿ ಸಕ್ರಿಯರಾಗಿ ಭಾಗವಹಿಸಿ, ದೌರ್ಜನ್ಯವನ್ನು ಅನುಭವಿಸಿದ್ದರಿಂದ ಬೆತ್ತಲೆ ಸೇವೆ ನಿಷೇಧದ ಬಗ್ಗೆ ಹೆಚ್ಚಿನ ಪ್ರಚಾರವನ್ನು ಕೊಟ್ಟಿದ್ದರು. ವಿರೋಧ ಪಕ್ಷ ಹಾಗೂ ಜನಸಾಮಾನ್ಯರ ಪ್ರತಿರೋಧದ ಕಾರಣ ಸರ್ಕಾರ ವಿಭಾಗಾಧಿಕಾರಿ ರಿನ್‌ಸಂಗ್ ಅವರ ನೇತೃತ್ವದ ವಿಚಾರಣಾ ಆಯೋಗವನ್ನು ದಿ. ೯.೪.೧೯೮೬ರಂದು ನೇಮಿಸಿತು. ಆಯೋಗ ಕಾರ್ಯ ನಿರ್ವಹಿಸುವ ವೇಳೆಯಲ್ಲಿಯೇ, ಕಾರಣಾಂತರಗಳಿಂದ, ಆ ಆಯೋಗವನ್ನು ರದ್ದು ಮಾಡಿ, ಚಿಕ್ಕಮಗಳೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಚೆನ್ನವೀರಪ್ಪನವರಿದ್ದ ಏಕಸದಸ್ಯ ಆಯೋಗವಾಗಿ ದಿ.೦೪.೦೯.೧೯೮೬ರಂದು ನೇಮಿಸಲಾಯಿತು.

ಒಟ್ಟು ೩೦ ಜನರ ಸಾಕ್ಷ್ಯವನ್ನು ೬೧ ದಾಖಲೆಗಳನ್ನು ಪರಿಶೀಲಿಸಿತ್ತು. – ಗೆಳೆಯರು, ತದನಂತರದಲ್ಲಿ ಚಿಕ್ಕಮಗಳೂರು ಕೋರ್ಟಿಗೆ ಓಡಾಡಬೇಕಾದ ಪ್ರಮೇಯ ಬಂದಿತು. ದಸಂಸ ಪರವಾಗಿ ಎಸ್.ಕೆ. ಶಿವಕುಮಾರ್ ಮತ್ತು ಬಿ. ತಿರುಕಪ್ಪ ವಕೀಲರು ವಕಾಲತ್ ವಹಿಸಿದ್ದರು. ನಾನು, ಹೋರಾಟದ ಸಿದ್ಧತೆಗಳು ಪ್ರಾರಂಭವಾದಂದಿನಿಂದ ಹಿಡಿದು ಆಯೋಗದ ವರದಿ ಸರ್ಕಾರದಿಂದ ನಿಷೇಧದ ಆದೇಶ ಬರುವವರೆಗಿನ ರಾಷ್ಟ್ರೀಯ ಮತ್ತು ಕರ್ನಾಟಕದ ಎಲ್ಲಾ ಪತ್ರಿಕಾ ವರದಿಗಳು, ವಿಚಾರವಂತರ ಲೇಖನಗಳು – ಪತ್ರಗಳು – ಕತೆ ಕವನ ಎಲ್ಲವನ್ನೂ ಸಂಗ್ರಹಿಸಿದ್ದೆ. ಅದರಂತೆ, ದಸಂಸದ ತೀರ್ಮಾನಗಳು, ಕರಪತ್ರಗಳು, ಸಭೆಗಳ ಮಾಹಿತಿಯನ್ನು ಒಟ್ಟುಗೂಡಿಸಿದ್ದೆ. ಸರ್ಕಾರದ ಆದೇಶಗಳು–ಪತ್ರಗಳನ್ನು ಜೋಡಿಸಿದ್ದೆ. ಆಯೋಗದ ಮುಂದೆ ಹಾಜರುಪಡಿಸಲು ಕ್ರಮಬದ್ಧವಾದ ಈ ಮಾಹಿತಿ ಕಡತವೇ ಪ್ರಮುಖ ದಾಖಲೆಯಾದ ಬಗ್ಗೆ ನನಗೆ ಹೆಮ್ಮೆ ಇದೆ. ಕೃಷ್ಣಪ್ಪ ಹಾಗೂ ಗೆಳೆಯರಿಗೆ ಆಯೋಗದ ಮುಂದೆ ಸಾಕ್ಷ್ಯ ನುಡಿಯಲು ದಿನಾಂಕವಾರು ಮಾಹಿತಿಯಾಗಿ ಈ ದಾಖಲೆಯೇ ಆಧಾರವಾಗಿತ್ತು.

ಆಯೋಗದ ವಿಚಾರಣಾ ವರದಿ ಆಧರಿಸಿ ದಿ. ೨೭.೨.೧೯೮೭ರಲ್ಲಿ ಸರ್ಕಾರ 'ಚಂದ್ರಗುತ್ತಿ ಬೆತ್ತಲೆ ಸೇವೆ ನಿಷೇಧ'ದ ಆದೇಶವನ್ನು ಹೊರಡಿಸಿತು. ಅಂದಿನಿಂದ ಪ್ರತಿವರ್ಷ ಬೆತ್ತಲೆ ಸೇವೆ ನಿಷೇಧ'ದ ಆದೇಶ ಸರ್ಕಾರದಿಂದ ಹೊರಡುತ್ತದೆ. ಚಂದ್ರಗುತ್ತಿಯಲ್ಲಿ ಸಾಮಾನ್ಯ ಪೂಜೆಗಳು ಮತ್ತು ಜಾತ್ರೆ ಮಾತ್ರ ಈಗಲೂ ನಡೆಯುತ್ತಿದೆ. ದಸಂಸದ ಈ ಹೋರಾಟದ ಫಲಶ್ರುತಿ ಯಶಸ್ವಿಯಾದ ಬಗ್ಗೆ ಎಲ್ಲರಿಗೂ ಹೆಮ್ಮೆ ಇದೆ.

ಚಂದ್ರಗುತ್ತಿಯಿಂದ ನಾವು ಬಂದ ಮರುದಿನವೇ ಜರ್ಮನಿಯಿಂದ ಇಬ್ಬರು ಪತ್ರಕರ್ತೆಯರು ಮನೆಗೆ ಬಂದು, ಕೃಷ್ಣಪ್ಪನವರೊಡನೆ ಮಾತನಾಡಿ ದಾಖಲಿಸಿಕೊಂಡು ಹೋಗಿದ್ದರು. ಕೃಷ್ಣಪ್ಪನವರು ಈ ಹೋರಾಟದಲ್ಲಿ ಬದುಕಿ ಬಂದದ್ದೇ ಒಂದು ಪವಾಡವಾಗಿತ್ತು. ಅವರನ್ನು ಸಿಐಡಿ ಅಧಿಕಾರಿಯೊಬ್ಬರು ದೌರ್ಜನ್ಯದ ಸ್ಥಳದಿಂದ ಪಾರುಮಾಡಿ, ಅವರ ಬೈಕಿನಲ್ಲಿ ಕಾಡು ಹಾದಿಯಲ್ಲಿ ವೇಷಮರೆಸಿಕೊಂಡು ಕರೆತಂದ ವಿವರ ಕೇಳಿ ನಾವೆಲ್ಲ ವಿಸ್ಮಯಗೊಂಡಿದ್ದೆವು. ನಿರಂತರ ೩–೪ ತಿಂಗಳ ಓಡಾಟ, ಬೆನ್ನಿನ ಮೇಲೆ ದೊಣ್ಣೆಯ ಹೊಡೆತದಿಂದ ಮತ್ತು ಮಾನಸಿಕ ಒತ್ತಡಗಳಿಂದ ಕೃಷ್ಣಪ್ಪ ದೈಹಿಕವಾಗಿ ಬಹಳ ಬಸವಳಿದಿದ್ದರು. ಅವರಿಗೆ ಅಂದಿನಿಂದ ಬೆನ್ನುನೋವು ತೀವ್ರಗೊಂಡಿತ್ತು. ವೈದ್ಯರ ಸಲಹೆಯಂತೆ ಬಹಳ ವರ್ಷಗಳವರೆಗೆ ಸೊಂಟದ ಬೆಲ್ಟನ್ನು ಹಾಕಿಕೊಳ್ಳುತ್ತಿದ್ದರು. ಮತ್ತು ಚಾಪೆಯ ಮೇಲೆ ದಿಂಬಿಲ್ಲದೆ ಅಂಗಾತ ಮಲಗುವ ಪರಿಪಾಠವಾಯಿತು. ನಾಲ್ಕಾರು ವರ್ಷಗಳು ಕಳೆದ ನಂತರ ಯಾವಾಗಲೂ ಧರಿಸುವ ಸೊಂಟದ ಬೆಲ್ಟ್, ಆಗಾಗ್ಗೆ ಧರಿಸುವ ಹಂತಕ್ಕೆ ಬಂದಿತ್ತು. ಸೊರಬ–ಶಿವಮೊಗ್ಗ–ಭದ್ರಾವತಿ ಜೈಲುಗಳಲ್ಲಿ ಭರ್ತಿಯಾಗಿದ್ದ ಜೋಗಮ್ಮ–ಜೋಗತಿಯರು–ಖೋಜಾಗಳ ಬಗ್ಗೆ ವಿವರಿಸುತ್ತಾ ಅಂದಿನ ವಿಶೇಷ ತಹಶೀಲ್ದಾರರಾಗಿದ್ದ ರುದ್ರಪ್ಪ ಹನಗವಾಡಿಯವರು ಈ ಕೆಳಕಂಡಂತೆ ದಾಖಲಿಸಿದ್ದಾರೆ.



ಚಂದ್ರಗುತ್ತಿ ರೇಣುಕಾದೇವಿ

'ಸುಮಾರು ೪.೦೦ ಘಂಟೆಯ ಸುಮಾರಿಗೆ ಹೆಚ್ಚಿನ ಪೋಲೀಸ್ ಬಂದು ಇಡೀ ಜೋಗತಿಯರ ಸಮೂಹವನ್ನು ಬೆತ್ತಲೆಯಾಗಿಯೇ ಅರೆಸ್ಟ್ ಮಾಡಿ ಸೊರಬ ಪೋಲೀಸ್ ಠಾಣೆಯಲ್ಲಿ ಕೂಡಿ ಹಾಕಿದರು. ಸುಮಾರು ೫–೬ ಘಂಟೆಯ ಸುಮಾರಿಗೆ ಪೋಲೀಸ್ ಬಂದು ಇವರಲ್ಲಿ ಯಾರು ನಿಮ್ಮ ಮೇಲೆ ಹಲ್ಲೆ ಮಾಡಿದರು ಗುರ್ತಿಸಿ ಎಂದು ಹೇಳಿದ ಪೊಲೀಸರೊಡನೆ ಹೋಗಿ ನೋಡುತ್ತೇನೆ, ಅದೊಂದು ಭಯಂಕರ ದೃಶ್ಯ. ಅನಾರೋಗ್ಯವೇ ಮೂರ್ತಿವೆತ್ತ ಪೀಚಲು ದೇಹಗಳು – ಕುಡಿತದ ಅಮಲಿನಲ್ಲಿದ್ದ ಅವರಿಗೆ ತಾವೇನು ಮಾಡಿದ್ದೆವು ಅನ್ನುವುದೇ ಅವರಿಗೆ ಗೊತ್ತಿರಲಿಲ್ಲ. ಒಂದು ರೂಮಿನಲ್ಲಿ ಯಾವುದೋ ಕಾಡಿನ ಪ್ರಾಣಿಗಳಂತೆ ಪಿಳಿಪಿಳಿ ಕಣ್ಣು ಬಿಡುತ್ತಾ ಬಂದವರನ್ನು ನೋಡುತ್ತಿದ್ದರು. ನನಗೆ 'ಯಾರು ಏನು ಮಾಡಿದರು ಎನ್ನುವುದನ್ನ ಯಾರ ಮೇಲೆ ಹೇಳಲಿ?' ಎನ್ನುತ್ತಾ ಈಚೆಗೆ ಬಂದೆ. ಆದರೆ ಈ ಜೋಗತಿಯರು ಅಂತಹ ಸ್ಥಿತಿಯಲ್ಲೂ ತಮ್ಮ ಬಳಿ ಬೆಳಗಿನಿಂದ ದೋಚಿದ ಒಡವೆಗಳು ಮತ್ತು ಹಣವನ್ನು ಸಣ್ಣ ಸಣ್ಣ ಚೀಲಗಳಲ್ಲಿ ಬಚ್ಚಿ ಜೋಪಾನಮಾಡಿಟ್ಟುಕೊಂಡಿದ್ದುದು ಪರಿಶೀಲಿಸಿದಾಗ ಕಂಡುಬಂತು.'

ತದನಂತರದಲ್ಲಿ ೨೦೦೬ರಲ್ಲಿ 'ಚಂದ್ರಗುತ್ತಿ ಬೆತ್ತಲೆ ಸೇವೆ ನಿಷೇದ ೨೦ವರ್ಷಗಳು' ಎಂಬ ನೆನಪಿನ ಕಾರ್ಯಕ್ರಮವನ್ನು ದಸಂಸ ಮತ್ತು ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ವತಿಯಿಂದ ಶಿವಮೊಗ್ಗದಲ್ಲಿ ಆಯೋಜಿಸಲಾಗಿತ್ತು. ಇದರಲ್ಲಿ ಭಾಗಿಯಾದವರ, ಕಡಿದಾಳು ಶಾಮಣ್ಣ, ಎಂ.ಬಿ. ನಟರಾಜ್, ರಾಚಪ್ಪ, ರಾಜಪ್ಪ ಮಾಸ್ಟರ್ ಮುಂತಾದವರು ಅನುಭವವನ್ನು ಆ ಸಮಾವೇಶದಲ್ಲಿ ಹಂಚಿಕೊಂಡಿದ್ದರು. ಆ ಸಂದರ್ಭದಲ್ಲಿ ಬೆತ್ತಲೆ ಸೇವೆ ವಿರುದ್ಧದ ಹೋರಾಟದ ಸಂಪೂರ್ಣ ದಾಖಲಾತಿ, ವರದಿ, ಸರ್ಕಾರದ ಆಜ್ಞೆಗಳು, ಪತ್ರಿಕಾ ವರದಿಗಳು ಮತ್ತು ಭಾಗಿಯಾದವರ ಅನುಭವಗಳು, ಕುರಿತಾದ ಲೇಖನವನ್ನೊಳಗೊಂಡ ಪುಸ್ತಕವನ್ನು ಪ್ರಕಟಗೊಳಿಸಿದ್ದೆವು. ಇದು ೨೦೧೦ರಲ್ಲಿ ಮರುಮುದ್ರಣಗೊಂಡಿದೆ.

(ಮುಂದುವರೆಯುವುದು)




**ಚಾಮರಾಜನಗರದ ಸಮತಾ ಪ್ರಕಾಶನ ಪ್ರಕಟಿಸಿರುವ ಡಿ.ಎಸ್. ನಾಗಭೂಷಣ ಅವರ ಸಂಪಾದಕತ್ವದ 'ನಮ್ಮ ಸಮಾಜವಾದಿಗಳು' ಕೃತಿಯನ್ನು ಜೂನ್ ೨೧ರಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹಾಕಾರ ದಿನೇಶ್ ಅಮೀನ್‌ಮಟ್ಟು ಮೈಸೂರಿನಲ್ಲಿ ಬಿಡುಗಡೆ ಮಾಡಿದರು. ಹಿರಿಯ ಸಮಾಜವಾದಿಗಳಾದ ಪ. ಮಲ್ಲೇಶ್, ಡಾ. ಕಾಳೇಗೌಡ ನಾಗವಾರ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಬಂಜಗೆರೆ ಜಯಪ್ರಕಾಶ್ ಅತಿಥಿಗಳಾಗಿ ಭಾಗವಹಿಸಿದ್ದರು.**

ಯುವ ಸಮಾಜವಾದಿ ಚಿಂತನ ವೇದಿಕೆ

# ಒಳ್ಳೆಯ ಬದುಕಿಗಾಗಿ ಸಿದ್ಧಾಂತಗಳನ್ನು ಅರಸುತ್ತಾ...

–ದೊಗ್ಗಳ್ಳಿ ಗೌಡ್ರು ಪುಟ್ಟರಾಜು

**ನ**ನಗೆ ತಿಳುವಳಿಕೆ ಬಂದಂದಿನಿಂದಲೂ ಒಂದು ನಿರಂತರ ಜಿಜ್ಞಾಸೆ ನನ್ನೊಳಗೆ ನಡೆಯುತ್ತಲೇ ಬಂದಿದೆ. ಅದೇನೆಂದರೆ ಯಾವುದು ಸರಿಯಾದ ಬದುಕುವ ರೀತಿ? ನನ್ನ ಬದುಕಿನ ಪ್ರತಿಹಂತದಲ್ಲೂ ಸರಿಯಾದ ಸಿದ್ಧಾಂತದ ಹುಡುಕಾಟದಲ್ಲೇ ಇದ್ದೆ. ಕೆಲ ವರ್ಷಗಳ ಹಿಂದೆ ಅದರ ಭ್ರಾಂತಿ ಹರಿಯುವವರೆಗೂ. ಮಠವೊಂದು ನಡೆಸುತ್ತಿದ್ದ ಶಾಲೆಯಲ್ಲಿ ಓದಿದ್ದರಿಂದ ಬಾಲ್ಯದಲ್ಲಿ ಶರಣರ ವಚನಗಳ ಪ್ರಭಾವ ನನ್ನ ಮೇಲೆ ಹೆಚ್ಚಾಗಿತ್ತು. ಆದರೆ ನನ್ನದು ವ್ಯಾಪಾರಿಗಳ ಕುಟುಂಬ. "ಬೇಪಾರ್ ಛೋರ್, ಗಿರಾಕ್ ಅಂಧಾ" (ವ್ಯಾಪಾರಿ ಕಳ್ಳ, ಗಿರಾಕಿ ಕುರುಡ.) ಎನ್ನುವ ತತ್ವ ಸಾಮಾನ್ಯವಾಗಿತ್ತು. ಯಾವುದು ಸರಿ ಎಂಬ ಜಿಜ್ಞಾಸೆಗೆ ಬೀಳುತ್ತಿದ್ದೆ.

ಬಾಲ್ಯದಲ್ಲಿ ಮನೆಗೆ ಯಾರೇ ಸ್ನೇಹಿತರು ಬಂದರೂ "ಅವನು ಯಾರ ಪೈಕಿ" ಎಂದು ನನ್ನಲ್ಲಿ ವಿಚಾರಿಸುತ್ತಿದ್ದರು. ನನಗೆ ಅವರ ಜಾತಿಗಳೇ ಗೊತ್ತಿರಲಿಲ್ಲ. ಪಿಯು ಹಂತಕ್ಕೆ ಬಂದಾಗ ನನ್ನ ಕೆಲವು ಸ್ವಜಾತಿ ಸ್ನೇಹಿತರೆಲ್ಲಾ ಸೇರಿ ರಚಿಸಿದ್ದ 'ವೀರಶೈವ ವಿದ್ಯಾರ್ಥಿ ವೇದಿಕೆ' ಎಂಬ ಸಂಘಕ್ಕೆ ನನ್ನನ್ನೂ ಪದಾಧಿಕಾರಿ ಮಾಡಿದರು. ಅದರ ಉದ್ಘಾಟನೆಗೆ ಬಂದಿದ್ದ ಎಸ್. ನಿಜಲಿಂಗಪ್ಪನವರು ನೀವಿನ್ನೂ ಚಿಕ್ಕವರು. ಜಾತಿಯ ಹೆಸರಿನಲ್ಲಿ ವಿದ್ಯಾರ್ಥಿ ಸಂಘ ರಚಿಸುವ ಅಗತ್ಯವಿತ್ತಾ? ಇನ್ನೊಮ್ಮೆ ಯೋಚನೆ ಮಾಡಿ ಎಂದರು. ಅದು ನನ್ನ ಮನಸ್ಸಿಗೆ ನಾಟಿತು. ಆರಂಭವಾದ ಕೆಲವೇ ದಿನಗಳಿಗೆ ಅದನ್ನು ಮುಚ್ಚಿಸುವಲ್ಲಿ ಯಶಸ್ವಿಯಾದೆ. ಆಗ ಮಂಡಲ ವರದಿಯ ಗದ್ದಲ ಜೋರಾಗಿತ್ತು. *ಲಂಕೇಶ್ ಪತ್ರಿಕೆ* ಓದಲು ಆರಂಭಿಸಿದ್ದೆ. ಜಾತ್ಯಾತೀತನಾಗಿ ಬದುಕುವುದೇ ನನ್ನ ಬದುಕಿನ ಸಿದ್ಧಾಂತವೆಂದುಕೊಂಡೆ. ಹಲವು ಜಾತಿಯ ಸ್ನೇಹಿತರನ್ನು ಸೇರಿಸಿಕೊಂಡು ಯುವಕ ಸಂಘವನ್ನು ಕಟ್ಟಿದೆ.

ಪದವಿ ಓದುವಾಗ ಲಂಕೇಶ್ ವಿಚಾರಗಳಿಗೆ ಆಕರ್ಷಿತನಾಗಿ *ಪ್ರಗತಿರಂಗ*ಕ್ಕೆ ಸೇರಿದೆ. ನಂತರ ಅದರ ಪ್ರಗತಿ ಕಂಡು ನನಗೆ ಭ್ರಮನಿರಸನವಾಯಿತು. ಕಾಲೇಜಿನಲ್ಲಿ ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು (ಸ್ವಾಮಿಗಳಾದವರೂ ಕೂಡಾ ಕಾಯಕ ಮಾಡಿಯೇ ಬದಕಬೇಕೆಂದು) ಇತಿಹಾಸದ ಉಪನ್ಯಾಸಕರಾಗಿದ್ದರು. ಕಾರ್ಯಕ್ರಮಗಳನ್ನು ಮಾಡುವಾಗ ಕರೆದು ಹಣ ಕೊಡುತ್ತಿದ್ದರು. 'ದಾವಣಗೆರೆಯಲ್ಲಿ ಎಲ್ಲವನ್ನೂ ದುಡ್ಡಿನಿಂದಲೇ ಅಳೆಯುತ್ತಾರೆ. ನೀನು ಅದರಲ್ಲಿ ಕಳೆದು ಹೋಗಬೇಡ. ಮಾನವೀಯತೆ, ಆಧ್ಯಾತ್ಮಿಕ ಜ್ಞಾನ ಬೆಳೆಸಿಕೋ' ಎಂದು ಮೊರೆಸ್, ಝುರತೃಷ್ಟ, ಸಾಕ್ರೆಟಿಸ್, ಮಾರ್ಕ್ಸ್ ಮುಂತಾದವರ ಕುರಿತ ಪುಸ್ತಕಗಳನ್ನು ಕೊಡುತ್ತಿದ್ದರು. ನಾಗಮ್ಮ ಕೇಶವಮೂರ್ತಿ, ಡಾ. ಎಂ. ಜಿ. ಈಶ್ವರಪ್ಪ, ಪ್ರೊ. ಬಿ. ವಿ. ವೀರಭದ್ರಪ್ಪ, ಮುಂತಾದವರು ನನ್ನ ಸಾಮಾಜಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಿದ್ದರು. ಸಾಮಾಜಿಕ ಸೇವೆಯನ್ನೇ ಬದುಕಿನ ಸಿದ್ಧಾಂತವನ್ನಾಗಿಸಿಕೊಳ್ಳಬೇಕೆಂದೆನಿಸಿತು.

ಅದೇ ಹೊತ್ತಿನಲ್ಲಿ, ಕ್ರಾಂತಿಕಾರಕ ಸ್ವಾಮೀಜಿ ಎನಿಸಿದ್ದ ಚಿತ್ರದುರ್ಗ ಮುರುಘಾಮಠದ ಶಿವಮೂರ್ತಿ ಶರಣರೆಡೆಗೆ ಆಕರ್ಷಿತನಾದೆ. ದೂರದಿಂದ ಚೆನ್ನಾಗಿಯೇ ಕಾಣುತ್ತಿದ್ದ ಮಠ ಒಳ ಹೊಕ್ಕಂತೆಲ್ಲಾ ಬೇರೆ ರೀತಿ ಕಾಣತೊಡಗಿತು. ಬಸವ ನಿಷ್ಠೆಯೂ ಒಂದು ರೀತಿಯ ಮೂಲಭೂತವಾದವಾಗಿ ಪರಿಣಮಿಸುತ್ತಿದೆಯೇನೋ ಅನಿಸುತ್ತಿತ್ತು. ಶಿವಮೂರ್ತಿ ಶರಣರೂ ಒಮ್ಮೊಮ್ಮೆ ಅಸಹಾಯಕರಂತೆ ಕಾಣತೊಡಗಿದರು. ಅವರು ಒಮ್ಮೆ ನನ್ನನ್ನು ಕರೆದು ನೀನೇಕೆ ವಿರಕ್ತ ಮಾರ್ಗದಲ್ಲಿ ಸಾಗಬಾರದು ಎಂದು ಕೇಳಿದರು. ಅದಾಗಲೇ ಹುಡುಗಿಯೊಬ್ಬಳ ಪ್ರೀತಿಯಲ್ಲಿ ಬಿದಿದ್ದ ನನಗೆ ಸ್ವಲ್ಪ ಆತಂಕವಾಯಿತು. ಇದ್ದಕ್ಕಿದ್ದಂತೆ ಅವರ ಸಂಪರ್ಕ ಕಡಿದುಕೊಂಡು ಬಿಟ್ಟೆ.

ಅಷ್ಟೊತ್ತಿಗಾಗಲೇ ಕಾನೂನು ಪದವಿಗೆ ಪ್ರವೇಶ ಪಡೆದಿದ್ದೆ. ಅಲ್ಲಿ ಜೆ. ಹೆಚ್. ಪಟೇಲರ ಕಿರಿಯ ಸಹೋದರ ಎಸ್. ಹೆಚ್. ಪಟೇಲರು ಪ್ರಾಂಶುಪಾಲರಾಗಿದ್ದರು. ಅವರ ತರಗತಿಗಳಲ್ಲಿ ಸಮಾಜವಾದದ ಬಗ್ಗೆ, ಲೋಹಿಯಾರ ಬಗ್ಗೆ, ಜೆ. ಪಿ. ಬಗ್ಗೆ ಹೇಳುತ್ತಿದ್ದರು. ಅದು ನನ್ನನ್ನು ಬಹುವಾಗಿ ಸೆಳೆಯಿತು. ಗಾಂಧೀಜಿ ಬಗ್ಗೆ ಅವರು ಮೂಡಿಸಿದ ಆಸಕ್ತಿಯಿಂದಾಗಿ ಗಾಂಧೀಜಿ ಕುರಿತು ಓದತೊಡಗಿದೆ. ಖಾದಿ ತೊಡಲು ಆರಂಭಿಸಿದೆ. ಸಮಾಜವಾದದ ಪುಸ್ತಕಗಳು ಅಷ್ಟಾಗಿ ದೊರೆಯಲಿಲ್ಲ. ಪಟೇಲರ ಗೌರವ ಸಂಪಾದಕತ್ವದಲ್ಲಿ ನಾನು ಸಂಪಾದಕನಾಗಿ 'ಅಭಿವ್ಯಕ್ತಿ' ಎನ್ನುವ ಫಲಕ ವಾರಪತ್ರಿಕೆ ಆರಂಭಿಸಿದೆ. ಪ್ರತಿ ಸೋಮವಾರ ಅದರಲ್ಲಿನ ವೈಚಾರಿಕ ಲೇಖನಗಳನ್ನೋದಲು ಅಕ್ಕಪಕ್ಕದ ಕಾಲೇಜುಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದರು. ಕಾಲೇಜು ಮುಗಿದಮೇಲೆ 'ವಿಕಸನ' ಎಂಬ ನಾಲ್ಕು ಪುಟಗಳ ಉಚಿತ ಖಾಸಗಿ ಪಾಕ್ಷಿಕವನ್ನು ಆರಂಭಿಸಿ ಒಂದು ವರ್ಷ ನಡೆಸಿದೆ. ದಾವಣಗೆರೆಯ *ಜನತಾವಾಣಿ* ಸಂಪಾದಕರಾಗಿದ್ದ ಹೆಚ್. ಎನ್. ಷಡಾಕ್ಷರಪ್ಪನವರು ನಿನ್ನ ಉಚಿತ ಹುಚ್ಚಾಟವನ್ನು ನಿಲ್ಲಿಸಿ ತಮ್ಮ ಪತ್ರಿಕೆಗೆ ಅಂಕಣ ಬರೆಯಲು ಸೂಚಿಸಿದರು. ಅದರಂತೆ ಒಂದು ವರ್ಷ ಅಂಕಣ ಬರೆದೆ. ವೈಚಾರಿಕವಾಗಿ, ವೈಜ್ಞಾನಿಕವಾಗಿ ಬದುಕಬೇಕು. ಅದೇ ಬದುಕಿನ ಸಿದ್ಧಾಂತವೆಂದುಕೊಂಡೆ. ವಿದ್ಯಾಭ್ಯಾಸದ ನಂತರ ಪೂರ್ಣಕಾಲಿಕವಾದ ಕುಟುಂಬದ ವ್ಯಾಪಾರ ಬೇಸರವಾಯಿತು. ಅದನ್ನು ಬಿಟ್ಟು ಖಾಸಗಿ ಯೋಜನಾ ವರದಿಗಳನ್ನು ಬರೆಯುವ ಬಗ್ಗೆ ಪರಿಣಿತಿ ಪಡೆದು, ಅದರ ಸಲಹೆಗಾರನಾಗಿ ಕೆಲಸ ಮಾಡುತ್ತಾ ಇಂದಿಗೂ ಅದನ್ನೇ ಉದ್ಯೋಗವನ್ನಾಗಿಸಿಕೊಂಡಿದ್ದೇನೆ.



ಗಾಂಧೀಜಿಯವರ ವಿಚಾರಗಳ ಪ್ರಭಾವಕ್ಕೊಳಗಾಗಿ ೨೦೦೩ರಲ್ಲಿ ಗ್ರಾಮೀಣ ಯುವಜನರಿಗೆ ಕೌಶಲ್ಯ ತರಬೇತಿ ನೀಡಲು ಕೆಲವು ಉಚಿತ ಸ್ವಯಂ ಉದ್ಯೋಗ ತರಬೇತಿಗಳನ್ನು ಆರಂಭಿಸಿದಾಗ ಯಾರ ನೆರವೂ ದೊರೆಯದೇ ಭ್ರಮನಿರಸನವಾಯಿತು. ಕೊನೆಗೆ ನನ್ನ ತಂದೆಯೇ ಹಣ ನೀಡಿ ಅವುಗಳನ್ನು ಪೂರ್ಣಗೊಳಿಸಲು ಸಹಾಯ ಮಾಡಿದರು. ನಂತರ ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಗಳಿಕೆಯೊಂದಿಗೆ ಕಲಿಕೆ ತತ್ವದ ಪದವಿ ಕೋರ್ಸ್ ಆರಂಭಿಸಬೇಕೆಂದು ೨೦೦೮ರಲ್ಲಿ ದಾವಣಗೆರೆಯಲ್ಲಿ ಜೆ. ಹೆಚ್. ಪಟೇಲರ ಹೆಸರಿನಲ್ಲಿ ಪದವಿ ಕಾಲೇಜು ಆರಂಭಿಸಿದೆ. ಶಿಕ್ಷಣ ಸೇವೆಯಾಗಿ ಉಳಿದಿಲ್ಲವೆಂದು ಗೊತ್ತಾಗಿ, ಅದನ್ನು ಉಳಿಸಿಕೊಳ್ಳಲು ಸಾಲದ ಹೊರೆ ಹೊರಬೇಕಾಯಿತು. ಈಗ ಅದರ ಕಬಂಧ ಬಾಹುವಿನಿಂದ ಬಿಡಿಸಿಕೊಳ್ಳುವ ಪ್ರಯತ್ನ ನಡೆಸಿದ್ದೇನೆ.

ಪ್ರೀತಿಸಿದ ಹುಡುಗಿಯನ್ನೇ ಮದುವೆಯಾಗಿ, ಆಕೆಗೆ ಮನೆಯಲ್ಲಿ, ಸಮಾಜದಲ್ಲಿ ಸಮಾನ ಗೌರವ ಸಿಗುವಂತೆ ನೋಡಿಕೊಂಡಿದ್ದೇನೆ. ಮದುವೆಯಾಗಿ ಇಬ್ಬರು ಚಿಕ್ಕ ಹೆಣ್ಣು ಮಕ್ಕಳಿದ್ದರೂ, ಕೆಲ ಅನಾಥ ಮಕ್ಕಳ ಜವಾಬ್ದಾರಿ ಹೊತ್ತು ಪತ್ನಿಯ, ಗೆಳೆಯರ ನೆರವಿನೊಂದಿಗೆ ಓದಿಸುತ್ತಿದ್ದೇನೆ. ಇಂದಿಗೂ ಸಮಾಜ ಅಸ್ಪೃಶ್ಯರೆಂದು ಭಾವಿಸುವ ನನ್ನ ಸ್ನೇಹಿತರ ಮನೆಗಳಲ್ಲಿ ನನ್ನದೇ ಮನೆಯೆಂಬ ಸಂಭ್ರಮದಲ್ಲಿ ಬೆರೆತಿದ್ದೇನೆ. ಸುತ್ತಲಿನ ಜನ ಹೇಗೇ ಬದುಕಲಿ, ನಾನು ನನಗೆ ಸರಿ ಎನಿಸಿದಂತೆ ಬದುಕುವ ಅಭ್ಯಾಸವಾಗಿದೆ. ಕೆಲವು ಬಾರಿ ಘೋರ ಅವಮಾನವಾದಾಗಲೂ ಕುಗ್ಗದೇ ಕಷ್ಟ–ನಷ್ಟಗಳಿಗೆ ಸ್ವಲ್ಪ ಮಟ್ಟದ ಸ್ಥಿತಪ್ರಜ್ಞತೆಯೂ ರೂಢಿಯಾಗಿದೆ. ಕಳೆದ ಮೂರು ವರ್ಷಗಳಿಂದ ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನದ ಸಂಪರ್ಕಕ್ಕೆ ಬಂದಾಗಿನಿಂದ ಸಮಾಜವಾದದ ಬಗ್ಗೆ ಹೆಚ್ಚು ತಿಳಿಯಬೇಕೆನ್ನುವ ನನ್ನ ಬಹುದಿನದ ಹಸಿವಿಗೆ ಸ್ವಲ್ಪ ಸ್ವಲ್ಪವಾದರೂ ಕೂಳು ಸಿಕ್ಕುತ್ತಿದೆ. ಡಿ. ಎಸ್. ನಾಗಭೂಷಣರ ಹಾಗೂ ಅವರು ಸಮಾಜವಾದಿ ಶಿಬಿರಗಳಿಗೆ ಕರೆಸುವ ವಿದ್ವಾಂಸರ ಚಿಂತನೆಗಳಿಂದ ಸಮಾಜದ ವಿವಿಧ ಮಜಲುಗಳ ಬಗ್ಗೆ, ಭವಿಷ್ಯದ ಆತಂಕಗಳ ಬಗ್ಗೆ ತಿಳಿಯತೊಡಗಿದ್ದೇನೆ.

ನಾನು ಗ್ರಹಿಸಿದಂತೆ ಜಾತಿಭೇದ, ಲಿಂಗಭೇದವೆಣಿಸದೇ, ಎಲ್ಲರಿಗೂ ಸಮಾನ ಹಕ್ಕು ಇರಬೇಕೆಂಬ ಆಶಯದೊಂದಿಗೆ, ತನ್ನ ದುಡಿಮೆಯಲ್ಲಿ ಅಗತ್ಯವಿದ್ದವರಿಗೆ ಸಾಧ್ಯವಾದಷ್ಟು ನೆರವಾಗುತ್ತಾ, ಹೆಚ್ಚು ಸಂಗ್ರಹಿಸದೇ, ಆದಷ್ಟೂ ಸರಳವಾಗಿ, ಸಹಜವಾಗಿ ಬದುಕುವುದೇ ಸಮಾಜವಾದವಾಗಿದ್ದರೆ, ನನ್ನದೂ ಸಮಾಜವಾದದ ಒಲವಿನ ಬದುಕೇ ಇರಬೇಕು ಎಂಬ ಹೊಳಹು ನನಗೀಗ ದೊರಕಿದೆ. ಬಹುಶಃ ನನ್ನ ಸೈದ್ಧಾಂತಿಕ ಪಯಣವೀಗ ಒಂದು ನಿರ್ಣಾಯಕ ಅಂತ್ಯಕ್ಕೆ ಬಂದಿದೆ ಎಂದು ನನಗನ್ನಿಸತೊಡಗಿದೆ!

# ಸಮಕಾಲೀನ




**ಕೇಜ್ರಿವಾಲ್**ರ 'ಸ್ವರಾಜ್ ಆಂದೋಲನ'ದ ನಂತರ ಈಗ ಅವರಿಂದ, ಅವರೊಂದಿಗೆ ಸೇರಿ ತಾವೇ ಕಟ್ಟಿದ ಆಪ್‌ನಿಂದ ಹೊರದೂಡಲ್ಪಟ್ಟಿರುವ ಯೋಗೇಂದ್ರ ಯಾದವ್ ಮತ್ತವರ ಗೆಳೆಯರು ಈಗ ಮತ್ತೊಂದು ಸ್ವರಾಜ್ ಅಭಿಯಾನ ಶುರುಮಾಡಿದ್ದಾರೆ. ಯೋಗೇಂದ್ರ ಅವರೀಗ ರಾಷ್ಟ್ರದ ಬೇರೆ ಭಾಗಗಳಲ್ಲಿ, ಊರುಗಳಲ್ಲಿ ತಮ್ಮ *ಸ್ವರಾಜ್ ಅಭಿಯಾನ*ದ ಭಾಗವಾಗಿ *ಸ್ವರಾಜ್ ಸಂವಾದ*ಗಳನ್ನು ನಡೆಸುತ್ತಿದ್ದಾರೆ. ಅಂತಹುದೊಂದು 'ಸಂವಾದ' ಕಳೆದ ಏಪ್ರಿಲ್ ೨೯ರಂದು ಬೆಂಗಳೂರಿನಲ್ಲಿ ಏರ್ಪಾಡಾಗಿತ್ತು.. ಕೇಜ್ರಿವಾಲ್ ನೇತೃತ್ವದ ಸ್ವರಾಜ್ ಆಂದೋಲನ ಮುಟ್ಟಿದ ಜಿಗುಪ್ಸೆಕರ ಹಂತದಿಂದ ಈಗಾಗಲೇ ಸಾವರಿಸಿಕೊಂಡಂತಿರುವ ನಮ್ಮ ಹಲವು ಗೆಳೆಯರು ಅದರಲ್ಲಿ ಭಾಗವಹಿಸಿದ್ದರು. ನನಗೂ ಆಹ್ವಾನ ಬಂದಿತ್ತಾದರೂ ನಾನು ಹೋಗಲಿಲ್ಲ. ಅದಕ್ಕೆ ಕೆಲವು ವೈಯಕ್ತಿಕವೂ, ಕೆಲವು ತಾತ್ವಿಕವೂ ಆದ ಕಾರಣಗಳಿದ್ದವು. ನನಗೆ ಆಹ್ವಾನ ನೀಡಿದ ಶ್ರೀಮತಿ ಚುಕ್ಕಿ ನಂಜುಂಡಸ್ವಾಮಿಯವರಿಗೆ, ನಾನು ಬರಲಾಗುತ್ತಿಲ್ಲವೆಂದು ಕಳಿಸಿದ ಈ–ಮೇಲ್ ಪತ್ರವನ್ನು–ಅದು ಈ ಚರ್ಚೆಗೆ ಪೀಠಿಕೆಯಾಗಬಹುದೆಂಬ ಕಾರಣದ ಮೇಲೆ–ಇಲ್ಲಿ ನೀಡುತ್ತಿದ್ದೇನೆ:

**ಪ್ರಿಯ ಶ್ರೀಮತಿ ಚುಕ್ಕಿ ಅವರೇ,**

**ನಿಮ್ಮ ಆಹ್ವಾನಕ್ಕಾಗಿ ಧನ್ಯವಾದಗಳು. ನಿಮಗೆ ಈಗಾಗಲೇ ತಿಳಿಸಿದಂತೆ ಈ ಸಂವಾದಕ್ಕೆ ನಾನು ಬರುವುದು ಕಷ್ಟ. ಇಂದು ಬೆಳಿಗ್ಗೆ ತಾನೇ ಬೆಂಗಳೂರಿನಿಂದ ಶಿವಮೊಗ್ಗಕ್ಕೆ ವಾಪಸಾದೆ.. ನಾಳೆ ಮತ್ತೆ ಅಲ್ಲಿಗೆ ಹೊರಡುವುದು ಕಷ್ಟ. ನಮ್ಮ ಪತ್ರಿಕೆಯ ತುರ್ತು ಕೆಲಸಗಳಿವೆ. ಗೆಳೆಯ ಯೋಗೇಂದ್ರ ಯಾದವ್ ಅವರಿಗೆ ಇದನ್ನು ತಿಳಿಸಿ. ಹಾಗೇ, ಅವರಿಗೆ ತಿಳಿಸಬೇಕಾದ ಇನ್ನೊಂದೆರಡು ವಿಷಯಗಳೆಂದರೆ–**

**೧. ಸಂವಾದದ ದಿನಾಂಕವನ್ನು ಸಂವಾದದಲ್ಲಿ ಯಾರೆಲ್ಲ (ಮುಖ್ಯವಾಗಿ ಅಥವಾ ಪ್ರಾತಿನಿಧಿಕವಾಗಿ) ಭಾಗವಹಿಸಬೇಕೆಂದು ಬಯಸಲಾಗುವುದೋ, ಅವರೊಂದಿಗೆ ಸಮಾಲೋಚಿಸಿ ನಿಗದಿ ಪಡಿಸುವುದು ಸ್ವರಾಜ್ಯ ಕಲ್ಪನೆಯ ಮೊದಲ ಪಾಠ. ಇದು ವಾಸ್ತವವಾಗಿ ಅಸಾಧ್ಯವಾದ ಸಂದರ್ಭದಲ್ಲಿ ಸಾಕಷ್ಟು ಮುಂಚಿತವಾಗಿ ದಿನವನ್ನು ಪ್ರಕಟಿಸುವುದೊಳಿತು. ನಾಳೆ ಬನ್ನಿ ಎಂದು ಇಂದು ಕರೆಯುವುದು ಸೂಕ್ತವಲ್ಲ.**

**೨. ಸಂವಾದದ ಮುಖ್ಯ ಆಶಯವನ್ನು ಸಂವಾದದಲ್ಲಿ ಭಾಗವಹಿಸುವ ಸಮೂಹಕ್ಕೆ ಸಮೂಹದ ಪ್ರಧಾನ ಭಾಷೆಯಲ್ಲಿ ತಿಳಿಸಬೇಕು. ಇಲ್ಲದಿದ್ದರೆ ಇದು ಪರ್ಯಾಯ ರಾಜಕಾರಣದ ಪ್ರಯತ್ನವೂ ಆಗುವುದಿಲ್ಲ ಮತ್ತು ಇದು ಸ್ವರಾಜ್ ಆಂದೋಲನದ ಹೆಸರಿನಲ್ಲಿ ನಡೆಸಲಾಗುವ/ಮುಂದುವರೆಸಲಾಗುವ ದೆಹಲಿ/ ಬೆಂಗಳೂರು ನಿಯಂತ್ರಿತ ಸಾಂಪ್ರದಾಯಿಕ ರಾಜಕೀಯ ವರಸೆಯೇ ಆಗುತ್ತದೆ.**

**ನಾನು ಸಂವಾದಕ್ಕೆ ಬಂದಿದ್ದರೆ, ಯೋಗೇಂದ್ರರಿಗೆ ಹೇಳಬೇಕಿದ್ದ ಒಂದು ಮುಖ್ಯ ಅಂಶವೆಂದರೆ:**

**ಆಂ ಆದ್ಮಿ ಪಕ್ಷದ ದುರಂತಕ್ಕೆ ಯೋಗೇಂದ್ರ ಯಾದವ್ ಮತ್ತು ಅವರ ಗೆಳೆಯರೂ ಜವಾಬ್ದಾರರಾಗಿದ್ದಾರೆ. ಮೊದಲಾಗಿ ಅದನ್ನು ದೆಹಲಿ ಕೇಂದ್ರಿತ ಮತ್ತು ಕೇಜ್ರಿವಾಲ್ ದಂಡನಾಯಕತ್ವದ 'ಪಕ್ಷ'ವಾಗಿ ಕಟ್ಟಲಾಯಿತು. ಕೇಜ್ರಿವಾಲರ ಬೀದಿ ರಾಜಕಾರಣದ ಜನಪ್ರಿಯತೆಗೆ ಮಾರು ಹೋಗಿ, ಪರ್ಯಾಯ ರಾಜಕಾರಣದ ಎಲ್ಲ ತತ್ವಗಳನ್ನೂ ನಿರ್ಲಕ್ಷಿಸಿ ಒಂದು 'ವಾಸ್ತವವಾದಿ' ಎಂದು ಹೇಳಲಾಗುವ ರಾಜಕಾರಣವನ್ನು ಮಾಡ ಹೊರಟಿದ್ದರಲ್ಲಿ ಯೋಗೇಂದ್ರರೂ ಭಾಗೀದಾರರು. 'ಖಾಪ್' ಪಂಚಾಯ್ತ್‌ಗಳನ್ನು ಸಮರ್ಥಿಸಿದ ಮತ್ತು ಪಕ್ಷದ ಪ್ರಣಾಳಿಕೆಯ ಪ್ರಧಾನ ಲೇಖಕರರಾಗಿ ಅವರು ಅದರಲ್ಲಿ ಪಕ್ಷದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳನ್ನು ಎಲ್ಲರಿಗೆ ಎಲ್ಲವೂ ಎಂಬಂತೆ ನಿರೂಪಿಸಿದ ಜಾಣತನ ಇದಕ್ಕೆ ಉದಾಹರಣೆಗಳು. (ಇದರ ವಿವರಣೆಗಾಗಿ ಪತ್ರಿಕೆಯ ೨೦೧೪ರ ಮೇ ಸಂಚಿಕೆಯನ್ನು ಗಮನಿಸಿ)**

**ವಂದನೆಗಳೊಂದಿಗೆ,**

**೨೭.೪.೨೦೧೫** **ಡಿ.ಎಸ್. ನಾಗಭೂಷಣ**

ಗಾಂಧಿ ಹೆಸರಿನಲ್ಲಿ, ಸ್ವರಾಜ್ಯದ ಹೆಸರಿನಲ್ಲಿ ಜನರಲ್ಲಿ ಹೊಸ ಆಶೆಗಳನ್ನು ಹುಟ್ಟಿಸಿ ಚುನಾವಣೆ ಗೆದ್ದ ಕೇಜ್ರಿವಾಲ್ ಈಗ ಏನಾಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಆತನ ಆಂದೋಲನ ಮತ್ತು ಪಕ್ಷಕ್ಕೆ ರಾಷ್ಟ್ರ ಮಟ್ಟದಲ್ಲಿ ಘನತೆ–ಗೌರವಗಳನ್ನು ಒದಗಿಸಿದ ಯೋಗೇಂದ್ರ ಯಾದವ್, ಪ್ರಶಾಂತ್‌ಭೂಷಣ್ ಮತ್ತಿತರನ್ನು ಆತ ಯಾವುದೇ ಪ್ರಜಾಸತ್ತಾತ್ಮಕ ಮಾನ–ಮರ್ಯಾದೆಗಳನ್ನೂ ಲೆಕ್ಕಿಸದೆ ಹೊರಹಾಕಿದ ರೀತಿ–ನೀತಿಗಳು ನಾವು ಜನಾಂದೋಲನಗಳೆಂದು ಭಾವಿಸಿದ ವಿದ್ಯಮಾನಗಳು ಎಷ್ಟು ಹುಸಿಯಾಗಿರಬಲ್ಲವು ಎಂಬುದನ್ನು ನಮ್ಮ ಕಣ್ಮುಂದೆಯೇ ಸಾಬೀತುಪಡಿಸಿವೆ. ಇದಕ್ಕಿಂತ ಹೆಚ್ಚು ತಲ್ಲಣಗೊಳಿಸುವ ಸಂಗತಿಯೆಂದರೆ ಇದನ್ನೆಲ್ಲ ಆಪ್ ಒಂದು ಪಕ್ಷವಾಗಿ ಕಮಕ್ ಕಿಮಕ್ ಎನ್ನದೆ ಒಪ್ಪಿ/ಸಹಿಸಿಕೊಂಡು ಯೋಗೇಂದ್ರ ಮತ್ತವರ ಗೆಳೆಯರನ್ನು ನಡುನೀರಿನಲ್ಲಿ ಕೈಬಿಟ್ಟಿರುವುದು.

ಈ ಬಗ್ಗೆ ಆಂ ಆದ್ಮಿ ಪಕ್ಷವನ್ನು ಆರಂಭದಿಂದಲೂ ವಿರೋಧಿಸುತ್ತಿದ್ದ ನಮ್ಮ ಕೆಲ ಗೆಳೆಯರು ತಮ್ಮ ರಾಜಕೀಯ ವಿವೇಕ ಗೆದ್ದಿತೆಂದು ಹೆಮ್ಮೆ ಪಡಬೇಕಿಲ್ಲ. ಏಕೆಂದರೆ ಅವರ ವಿರೋಧವಿದ್ದುದು ತಮ್ಮದೇ ರಾಜಕೀಯ ಬದ್ಧತೆಗಳ ಕಾರಣದ ಮೇಲೆ. ಈ ಮಾತನ್ನು ನಾನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ನನ್ನ ಈ ಮೇಲಿನ ಮಾತುಗಳೆಲ್ಲ ಓದುಗರಿಗೆ ಜನಾಂದೋಲನಗಳ ವಿರುದ್ಧದ ಸಾರಾಸಗಟಾದ ಮಾತುಗಳಾಗಿ ಕೇಳಿಸಬಾರದೆಂದು.

ಜನಾಂದೋಲನಗಳು ಒಂದು ಪ್ರಜಾಪ್ರಭುತ್ವದ, ನಾಗರೀಕ ಸಮಾಜದ ಜೀವಾಳ. ಆದರೆ ಅವು ನಮ್ಮನ್ನು ಇಡಿಯಾಗಿ ಒಳಗೊಂಡ ಜನಾಂದೋಲನಗಳಾಗಿರಬೇಕು. ಅಂದರೆ ನಾವು ಸಾವಯವವಾಗಿ ಬೆರೆಯಬಲ್ಲ ಆಂದೋಲನವಾಗಿರಬೇಕು. ಅಂದರೆ, ದೂರದ ಯಾರೋ ನಮಗೆಂದು ಆರಂಭಿಸಿ ನಡೆಸುವ ಮತ್ತು ನಾವು ಅಭಿಮಾನದಿಂದ ದೂರದಲ್ಲಿ ನಿಂತು ನೋಡಿ ಬೆರಗಾಗಿ ಬೆಂಬಲಿಸಬೇಕಾದ ರೀತಿಯ ಆಂದೋಲನವಾಗಿರಬಾರದು. ದೂರವಿದ್ದರೂ ನಂಬಿ ಬೆಂಬಲಿಸಬಹುದಾದ–ಸ್ವಾತಂತ್ರ್ಯ ಆಂದೋಲನದ ಮೂಸೆಯಲ್ಲಿ ಮೂಡಿದ ವ್ಯಕ್ತಿತ್ವಗಳ ನೇತೃತ್ವದ ಜನಾಂದೋಲನಗಳು–ಬಹುಶಃ ಜೆಪಿ ಆಂದೋಲನದ ಕಾಲಕ್ಕೇ ಮುಗಿಯಿತೆಂದು ಕಾಣುತ್ತದೆ. ಹಾಗೇ ನೋಡಿದರೆ ಅಂತಹ ಆ ಆಂದೋಲನವೇ ನಮ್ಮನ್ನು ನಿರಾಶೆಗೊಳಿಸಿತ್ತು. ಹಾಗಾಗಿ ಇಂದು ವಿಶ್ವಾಸಾರ್ಹವೆನಿಸಬಲ್ಲವು ಸ್ಥಳೀಯವಾಗಿರುವ ಆಂದೋಲನಗಳು ಮಾತ್ರ. ಅಂದರೆ, ಭೌತಿಕ ಮತ್ತು ಮಾನಸಿಕ ದೂರಗಳು ಸೃಷ್ಟಿಸುವ ಅಸ್ಪಷ್ಟತೆ, ಅನುಮಾನ, ಸ್ಥೂಲತೆಗಳಿಗೆ ಅವಕಾಶವಿಲ್ಲದ ಜನಾಂದೋಲನಗಳು. ಯಾವುದರಲ್ಲಿ ನಮ್ಮ ಮಾತನ್ನು ನಮ್ಮ ನುಡಿಗಟ್ಟಿನಲ್ಲಿ ಆಡಲು ಸೌಕರ್ಯಗಳಿರುವುದೋ ಮತ್ತು ಅಂತಹ ಮಾತುಗಳಿಂದಲೇ ಆಂದೋಲನವೊಂದು ರೂಪ ಮತ್ತು ಮರುರೂಪ ಪಡೆಯಲು ಸಾಧ್ಯವೋ ಅಂತಹ ಜನಾಂದೋಲನಗಳು ಮಾತ್ರ ನಮ್ಮವೆನಿಸಬಲ್ಲವು ಮತ್ತು ಅವು ಮಾತ್ರ ಅವುಗಳ ಉದ್ದೇಶಗಳ ನೆಲೆಯಲ್ಲಿ ಸಾರ್ಥಕತೆಯನ್ನು ಮುಟ್ಟಬಲ್ಲವುಗಳು.

ನಿಜವಾಗಿ ಇದೇ–ಈ ಸ್ಥಳೀಯತೆಯೇ–ಗಾಂಧಿಯು ಹೇಳಿದ ಸ್ವರಾಜ್ಯ ಆಂದೋಲನದ ಮೂಲಾಧಾರ. ರಾಜ್ಯತ್ವ ಅಥವಾ ಆಡಳಿತವೆನ್ನುವುದು ಮನಸ್ಸಿಗೆ ಮಾತ್ರವಲ್ಲ ನಮ್ಮ ದೇಹಕ್ಕೂ ಹತ್ತಿರ ತಂದು ರಾಜ್ಯವನ್ನು 'ಸ್ವ' ಮಾಡಿಕೊಳ್ಳುವ ಆಂದೋಲನವದು. ಗಾಂಧಿ ಪ್ರಕಾರ ಮನಸ್ಸು–ದೇಹಗಳು ಅವಿಭಾಜ್ಯ. ಹಾಗಾಗಿ ರಾಜ್ಯವೆನ್ನುವುದು ದೇಹಕ್ಕೂ ಹತ್ತಿರವಾಗಿರಬೇಕು. ಆಗಲೇ ಆ ದೇಹವನ್ನು ಧರಿಸಿರುವ ಮನಸ್ಸಿಗೂ ಅದು ನಿಜವಾಗಿ ಹತ್ತಿರವಾಗಿರಬಲ್ಲುದು. ಆದರೆ ನಾವಿಂದು ಕಟ್ಟಿಕೊಂಡಿರುವ ರಾಜ್ಯತ್ವ ಅಂದರೆ ರಾಷ್ಟ್ರ ಸ್ವರೂಪ. ಇದಕ್ಕೆ ತದ್ವಿರುದ್ಧವಾದದ್ದು. ನಮಗೆ ಸಂಬಂಧಿಸಿದ ಯಾವುದೂ ನಮ್ಮ ಹತೋಟಿಯಲ್ಲಿಲ್ಲದಂತೆ



ನಿಯಮ, ಕಾನೂನು, ಸಂಸ್ಥೆ–ಸಂವಿಧಾನಗಳ ಹೆಸರಿನಲ್ಲಿ ನಮ್ಮಿಂದ ಮನೋದೈಹಿಕ ದೂರದಲ್ಲಿರುವವರ ಕೈಗೆ ಕೊಡಲಾಗಿದೆ. ಹಾಗಾಗಿಯೇ ನಮ್ಮ ಸರ್ಕಾರಿ ಕಛೇರಿಗಳು ನಮ್ಮದಲ್ಲವೆನ್ನಿಸುವುದು. ಅಲ್ಲಿಗೆ ಹೋದೊಡನೆ ಉಸಿರು ಕಟ್ಟಿದಂತಾಗುವುದು. ಅವುಗಳಲ್ಲಿ ಕೂತ ಅಧಿಕಾರಿ–ಗುಮಾಸ್ತ–ಜವಾನರಾದಿಯಾಗಿ ಎಲ್ಲರೂ ನಮಗೆ ಅಪರಿಚಿತರಂತೆ–ಬಹಳ ಸಲ ಶತ್ರುಗಳಂತೆಯೂ ಕಾಣುವುದು. ಅಲ್ಲಿಯೇ ಲಂಚ, ಸ್ವಜನಪಕ್ಷಪಾತ, ಅದಕ್ಷತೆ ಇತ್ಯಾದಿ ಭ್ರಷ್ಟಾಚಾರಗಳು ಈ ಅನ್ಯತೆ–ಶತ್ರುತ್ವಗಳನ್ನು ನಿವಾರಿಸುವ ಸಾಧನವಾಗಿ ಹುಟ್ಟುವುದು. ಈ ವ್ಯವಸ್ಥೆಯನ್ನು ರಾಷ್ಟ್ರ ಎಂದು ಭವ್ಯವಾಗಿ ಕರೆಯಲಾಗಿದ್ದು, ಇದನ್ನು ಕಾಪಾಡಿಕೊಳ್ಳಲು ಇದರ ಫಲಾನುಭವಿಗಳು–ರಾಜಕಾರಣಿಗಳು, ವಾಣಿಜ್ಯೋದ್ಯಮಿಗಳು ಮತ್ತು ಧರ್ಮಲಂಡರು–ಅದಕ್ಕೆ ರಾಷ್ಟ್ರೀಯತೆ ಎಂಬ ಅಂಧ ಆರಾಧನಾ ಮಾರ್ಗವೊಂದನ್ನು ಸೃಷ್ಟಿಸಿ ಪ್ರಜೆಗಳನ್ನು ಅದರ ಅಮಲಿನಲ್ಲಿ ಮಲಗಿಸಿಬಿಟ್ಟಿದ್ದಾರೆ. ಒಟ್ಟಿನಲ್ಲಿ ಇದು ನಮ್ಮ ಮೇಲೆ ನಾವೇ ನಡೆಸಿಕೊಂಡಿರುವ ಆಧುನಿಕ ರಾಷ್ಟ್ರತ್ವವೆಂಬ ಅತ್ಯಾಚಾರ. ಹಾಗಾಗಿಯೇ ನಾವು ನಮ್ಮ ಉಸಿರಾಟ ಸರಾಗವಾಗಿರಲು ಅವಶ್ಯಕವಾದ ಸಣ್ಣಪುಟ್ಟ ನ್ಯಾಯದಾನದ ವಿಧಿಗಳೂ ಇಲ್ಲಿ ವರ್ಷಗಟ್ಟಲೇ ತೆಗೆದುಕೊಂಡರೂ–ಇತ್ತೀಚಿನ ಉದಾ: ಒಬ್ಬ ವ್ಯಕ್ತಿ ಜನಗಳ ಮೇಲೆ ವಾಹನ ಹತ್ತಿಸಿದನೋ ಇಲ್ಲವೋ ಎಂಬುದನ್ನು ತೀರ್ಮಾನಿಸಿ ಶಿಕ್ಷೆ ವಿಧಿಸಲು ೧೩ ವರ್ಷ ಬೇಕು–ಮತ್ತು ಅಷ್ಟು ವರ್ಷಗಳ ನಂತರವೂ ನ್ಯಾಯ ಅನುಮಾನಾಸ್ಪದವೆನಿಸಿದರೂ ಏನೂ ಮಾಡಲಾಗದೆ ಅಸಹಾಯಕರಾಗಿರುವಂತಾಗಿರುವುದು. ಇದು ನಮ್ಮ ಸ್ಥಿತಿಯ ಬಗ್ಗೆ ಗಾಬರಿ ಹುಟ್ಟಿಸುವುದಿಲ್ಲವೆಂದರೆ, ಆಳವಾದ ಯೋಚನೆಗೆ, ಕ್ರಿಯಾತ್ಮಕವಾದ ಸಿಟ್ಟಿಗೆ ಪ್ರೇರೇಪಿಸುವುದಿಲ್ಲ ಎಂದರೆ ನಾವು ಸರ್ಕಾರಿ ಕಛೇರಿಗಳಿಗೆ, ನ್ಯಾಯಾಲಯಗಳಿಗೆ ತಿಂಗಳುಗಟ್ಟಲೆ, ವರ್ಷಗಟ್ಟಲೆ ಅಲೆಯಲು ಅರ್ಹರಾದ ಪ್ಯಾದೆಗಳೇ ಸರಿ ಎಂದು ತೀರ್ಮಾನಿಸಬೇಕಾಗುತ್ತದೆ.

ಹಾಗೆಂದೇ ಗಾಂಧಿ ಹಿಂದ್ ಸ್ವರಾಜ್‌ನಲ್ಲಿ 'ರಾಷ್ಟ್ರಕ್ಕೆ ನಿಮ್ಮ ಸಂದೇಶವೇನು?' ಎಂಬ ಪ್ರಶ್ನೆಗೆ 'ರಾಷ್ಟ್ರ? ಅದು ಏನು?' ಎಂಬ ಮರುಪ್ರಶ್ನೆಯ ರೂಪದಲ್ಲಿ ಉತ್ತರಕೊಟ್ಟಿರುವುದು. ಅಂದರೆ ಅದರರ್ಥದಲ್ಲಿ ರಾಷ್ಟ್ರವೆಂಬುದು ಇರುವುದಾದರೆ ಅದು ಸಾಮಾನ್ಯ ಪ್ರಜೆಗಳಿಗೆ ಅನ್ಯವೆನಿಸದ–ಆತನಿಗೆ ದೂರವೆನಿಸದ ರೂಪದಲ್ಲಿರಬೇಕು. ಅದು ಮನೋದೈಹಿಕ ಸಾಮೀಪ್ಯವಿರುವ ಸಮೂಹಗಳ ಒಕ್ಕೂಟವಾಗಿರಬೇಕು. ಹಾಗಾಗಿ ಯಾವುದೇ ಸ್ವರಾಜ್ಯ ಆಂದೋಲನ ಈ ಆಧುನಿಕ ರಾಷ್ಟ್ರತ್ವದ ಬಂಧನದ ಬಿಗಿಯನ್ನು ಗಾಂಧಿಯ ಸ್ವರಾಜ್ಯದ ಕಾಣ್ಕೆಯಲ್ಲಿ ಕ್ರಮೇಣ ಸಡಿಲಿಸಬಲ್ಲ ಸ್ಥಳೀಯತೆಯ ಸ್ಪರ್ಶ–ಪರಿಮಳ–ಆಶೋತ್ತರಗಳನ್ನು ಹೊಂದಿರಬೇಕು. ಯಾರೋ ಎಲ್ಲಿಂದಲೋ ಬಂದು ತಮ್ಮ ರಾಜಕೀಯ ಆಶೋತ್ತರಗಳು, ಒತ್ತಡಗಳು ಮತ್ತು ಅಗತ್ಯಗಳಿಗೆ ಅನುಗುಣವಾಗಿ ಅವರ ನುಡಿಗಟ್ಟಿನಲ್ಲಿ ನಮ್ಮನ್ನು ಸಂಘಟಿಸುವ, ನಿಯಂತ್ರಿಸುವ ಮತ್ತೊಂದು ರಾಷ್ಟ್ರೀಯ ರಾಜಕೀಯ ಆಟ ಆಗಬಾರದು. ಯೋಗೇಂದ್ರ ಯಾದವ್‌ರಂತಹ ಪ್ರಾಜ್ಞರು ಇಲ್ಲಿಗೆ ಬರಲಿ; ಆದರೆ ಸ್ಥಳೀಯ ಚಳುವಳಿಗಳ ರಾಷ್ಟ್ರೀಯ ಸಮನ್ವಯಕಾರರಾಗಿ–ಈ ಹಿಂದೆ ಕಿಷನ್ ಪಟ್ನಾಯಕ್ ಮಾಡುತ್ತಿದ್ದಂತೆ–ಬಂದು ತಮ್ಮ ಅನುಭವ ಹಂಚಿಕೊಳ್ಳಲಿ.

ಈ ಹಿನ್ನಲೆಯಲ್ಲಿ ಈ ಪುಟಗಳಲ್ಲಿ ಯೋಗೇಂದ್ರರ ಸ್ವರಾಜ್ಯ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಇಬ್ಬರನ್ನು ಮಾತಾಡಿಸಿದ್ದೇವೆ. ಒಬ್ಬರು ದೇವನೂರ ಮಹಾದೇವ. ಇವರನ್ನು ಯೋಗೇಂದ್ರರ ಸಂವಾದದಲ್ಲಿ ಗಾಂಧಿ ಅರ್ಥದಲ್ಲಿನ ಸ್ವರಾಜ್ಯದ ಸುಳಿವುಗಳನ್ನು ಎಲ್ಲಿಯಾದರೂ ಕಂಡಿರಾ ಎಂದು ಕೇಳಿದರೆ, ತಮಗೆ ಪಳೆಯುಳಿಕೆಗಳಲ್ಲಿ ನಂಬಿಕೆ ಇಲ್ಲ ಎಂದಿದ್ದಾರೆ! ಅವರು ಚೈತನ್ಯ ಕಂಡ ಕಡೆ ಹೋಗುತ್ತಾರಂತೆ! ಹಾಗೆ ಅವರು ಹತ್ತು–ಹನ್ನೆರಡು ವರ್ಷಗಳ ಹಿಂದೆ ತಾವು ಕಂಡ ಚೈತನ್ಯದ ಹಿಂದೆ ಬಿದ್ದು ಸ್ಥಾಪಿಸಿದ 'ಸರ್ವೋದಯ ಕರ್ನಾಟಕ' ಇಂದು ಕರ್ನಾಟಕದ ಪರ್ಯಾಯ ರಾಜಕಾರಣದ ಎಂತಹ ನಗೆಪಾಟಲಿನ ಪಳೆಯುಳಿಕೆಯಾಗಿದೆ ಎಂಬುದು ಅವರ ಅರಿವಿಗಿನ್ನೂ ಬಂದಂತೆ ಕಾಣುವುದಿಲ್ಲ! ನಾವೆಲ್ಲ ಬಹು ಗೌರವಿಸುವ, ನಿರೀಕ್ಷೆಗಳನ್ನಿಟ್ಟುಕೊಂಡಿರುವ ಮಹಾದೇವ ಈಗಲಾದರೂ ಇಂತಹ ಜಾಣ ಮಾತುಗಳನ್ನಾಡುವುದನ್ನು ನಿಲ್ಲಿಸಿ ನಿಜವನ್ನರಸಿ ಆ ನಿಜವನ್ನೇ ನುಡಿಯುವ ಎಚ್ಚರಕ್ಕೆ ಬರಲಿ ಎಂದು ಇಲ್ಲಿ ಹಾರೈಸುತ್ತೇನೆ.

ಇನ್ನು ಎರಡನೆಯವರು, ಗೆಳೆಯ ರಾಜಾರಾಂ ತೋಳ್ಪಾಡಿ. ಯೋಗೇಂದ್ರರ ಬೆಂಗಳೂರಿನ ಸಂವಾದಕ್ಕೆ ಮಂಗಳೂರಿನಿಂದ ಬಂದು ನಿರಾಶರಾಗಿ ಹೋದ ಪರಿಯನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಓದಿ, ಬರೆಯಿರಿ. **–ಸಂಪಾದಕ**

# ನಾನು ಪಳೆಯುಳಿಕೆಗಳನ್ನು ನೋಡುವುದಿಲ್ಲ : ದೇವನೂರ ಮಹಾದೇವ

**ನೀವು ದೆಹಲಿಯ 'ಸ್ವರಾಜ್ ಸಂವಾದ'ಕ್ಕೆ ಹೋಗಿ ಮಾತನಾಡಿದ್ದರ ಸ್ಫೂರ್ತಿ ಮತ್ತು ಉದ್ದೇಶಗಳಾದರೂ ಏನು? ಆಮ್‌ಆದ್ಮಿ ಪಕ್ಷದ ಒಡಕು ಹುಟ್ಟಿಸಿದ ನಿರಾಸೆಯನ್ನು ಈ ಸ್ವರಾಜ್ ಸಂವಾದ ನಿವಾರಿಸಿ ಪರ್ಯಾಯ ರಾಜಕಾರಣದ ಬಗ್ಗೆ ಹೊಸ ಹುರುಪನ್ನು ಹುಟ್ಟಿಸಬಲ್ಲುದೆ? ಹೇಗೆ?**

ಭಾರತದ ರಾಜಕಾರಣಕ್ಕೆ ಇನ್ನು ದಿಕ್ಕಿಲ್ಲವೇನೋ ಎನ್ನುವಂತಾ ಸಂದರ್ಭ ಇದ್ದಾಗ ಆಮ್‌ಆದ್ಮಿ ಪಕ್ಷ ಒಂದು ಸ್ಫೋಟದಂತೆ ಸಂಭವಿಸಿತು. ಆಗ ಸಧ್ಯಪ್ಪ! ಎಂದು ಉಸಿರಾಡುವಂತಾಯ್ತು. ಇದಾಗಲು, ಆಮ್‌ಆದ್ಮಿ ಪಕ್ಷಕ್ಕೆ ಮಾಮೂಲಿ ರಾಜಕಾರಣಕ್ಕೆ ಹೊರತಾದ ಹೊಸ ನಡೆ–ನುಡಿಗೆ ರೂಪ ನೀಡುವಲ್ಲಿ, ನಾನು ಬಲ್ಲಂತೆ ಈಗ ಆಮ್ ಆದ್ಮಿಯಿಂದ ಹೊರಗೆ ಹಾಕಿಸಿಕೊಂಡ ಯೋಗೇಂದ್ರ ಯಾದವ್ ಮತ್ತು ಗೆಳೆಯರು ಬಹುತೇಕ ಕಾರಣರು. ಆಪ್ ಒಂದಾಗಿದ್ದಾಗ ಈ ಹೊರ ಹಾಕಿಸಿಕೊಂಡ ಗೆಳೆಯರ ಕನಸಿನ ಸ್ವರೂಪಕ್ಕೆ ಕೇಜ್ರಿವಾಲ್‌ರ ನಡಾವಳಿ (ಬಿಹೇವಿಯರಲ್) ರಾಜಕಾರಣದ ಭಾಷೆಯೂ ಸೇರಿಕೊಂಡು ಅದೊಂದು ಅದ್ಭುತ ಶಕ್ತಿಯಾಗಿ ಅಭಿವ್ಯಕ್ತಿಯಾಗುತ್ತಿತ್ತು. ನತದೃಷ್ಟ ಭಾರತ ಈ ಅವಕಾಶ ಕಳೆದುಕೊಂಡುಬಿಟ್ಟಿತು.

ಈಗ ಆಪ್‌ನಿಂದ ಹೊರಹಾಕಿಸಿಕೊಂಡಿರುವ ಸೃಷ್ಟ್ಯಾತ್ಮಕ ರಾಜಕಾರಣದ ವಿವೇಕಶಾಲಿಗಳಾದ ಯೋಗೇಂದ್ರಯಾದವ್ ಮತ್ತು ಗೆಳೆಯರು ಸ್ವರಾಜ್ ಅಭಿಯಾನ ಆರಂಭಿಸಿದ್ದಾರೆ. ಇದು ಆಪ್‌ನಂತೆ ಸ್ಫೋಟಕವಲ್ಲ, ನಿಜ. ಆದರೆ ಭಾರತದ ಜನಾಂದೋಲನಗಳನ್ನು ಕೂಡಿಸಿಕೊಂಡು ಸಮುದಾಯದ ಆಶೋತ್ತರಗಳನ್ನು ಇಟ್ಟುಕೊಂಡು ಸಮುದಾಯದ ರಾಜಕಾರಣದತ್ತ ಇದು ಹೆಜ್ಜೆ ಇಟ್ಟಿದೆ. ಇಂದಿನ ಬಹಿರಂಗದ ಅಧಿಕಾರದ ರಾಜಕಾರಣವು, ಅಂತರಂಗದ ಸಮುದಾಯದ ಜನಾಂದೋಲನಗಳ ರಾಜಕಾರಣವನ್ನು ತುಳಿದು ಕುಣಿಯುತ್ತಿರುವ ಈ ಸಂದರ್ಭದಲ್ಲಿ ಸ್ವರಾಜ್ ಅಭಿಯಾನದ ಹುಟ್ಟು ಸ್ಫೋಟಕ ಅಲ್ಲದಿದ್ದರೂ ಅತ್ಯಂತ ನಿಧಾನಗತಿಯದಾದರೂ ಅರ್ಥಪೂರ್ಣವಾದುದು. ನನಗನಿಸುವಂತೆ ಇದೇ ನಿಜವಾದ ಪರ್ಯಾಯ ರಾಜಕಾರಣ.



ದೇವನೂರ ಮಹಾದೇವ

**ಬೆಂಗಳೂರಿನಲ್ಲಿ ನಡೆದ ಸ್ವರಾಜ್ ಸಂವಾದ ರಾಜ್ಯದ ಮಟ್ಟಿಗೆ ಒಳ್ಳೆಯ ಆರಂಭ ಎನಿಸಿದೆಯೇ? ಹೇಗೆ?**

ಎಲ್ಲಿ? ಹೇಗೆ? ಯಾರು? ಎಂಬುದನ್ನು ಬಿಟ್ಟು ಇಂತಹ ಯಾವುದೇ ಆರಂಭವನ್ನು ನಾನು ಆಸೆಗಣ್ಣಿಂದ ನೋಡುವೆ.

**ಗಾಂಧಿಯ ಸ್ವರಾಜ್ಯದ ಸತ್ವ ಈ ಸ್ವರಾಜ್ ಸಂವಾದದಲ್ಲಿ ನೀವು ಕಂಡಿರಾ? ಎಲ್ಲಿ? ಹೇಗೆ?**

ಸಾಮಾನ್ಯವಾಗಿ ನಾನು ಪಳೆಯುಳಿಕೆಗಳನ್ನು ನೋಡುವುದಿಲ್ಲ. ಸ್ವರಾಜ್ ಪರಿಕಲ್ಪನೆಯನ್ನು ನಾನು 'ಗಾಂಧಿ ಲಿಮಿಟೆಡ್'ಗೆ ಮಿತಿಗೊಳಿಸಿ ನೋಡುವುದೂ ಇಲ್ಲ. ಪಳಯುಳಿಕೆ ಬದಲು ಚೈತನ್ಯ ಕಾಣಲು ಪ್ರಯತ್ನಿಸುತ್ತೇನೆ. ಇಂದಿನ ಪರಿಸ್ಥಿತಿಯಲ್ಲಿ ಸ್ಥೂಲವಾಗಿ ವಿಕೇಂದ್ರಿಕರಣ ಹಾಗೂ ಕಟ್ಟಕಡೆಯವನ/ಳ ಭಾಗವಹಿಸುವಿಕೆ–ಇದಿಷ್ಟು ಸಾಕು.

**ನಿಮ್ಮ ಸರ್ವೋದಯ ಕರ್ನಾಟಕ ಈ 'ಸ್ವರಾಜ್ ಸಂವಾದ' ಪ್ರಯತ್ನಗಳಿಗೆ ಏನಾದರೂ ಕೊಡಬಲ್ಲುದೇ? ಮತ್ತು ಅದರಿಂದ ಏನಾದರೂ ಪಡೆಯಬಹುದೇ?**

ಸರ್ವೋದಯ ಕರ್ನಾಟಕ ಕೊಡಬಲ್ಲುದೇ? ...ಏನೋ ಗೊತ್ತಿಲ್ಲ. ಸ್ವರಾಜ್ ಅಭಿಯಾನದಿಂದ ಏನಾದರೂ ಪಡೆಯಬಹುದೇ ಎಂದು ಕಾತರಿಸುತ್ತಿರುವೆ.

# ‘ಸ್ವರಾಜ್ಯ ಸಂವಾದ’ದ ಕುರಿತು ಕೆಲವು ತಕ್ಷಣದ ಪ್ರತಿಫಲನಗಳು

–ಡಾ. ರಾಜಾರಾಂ ತೋಳ್ಪಾಡಿ




**ಬೆಂಗಳೂರಿನ ‘ಸ್ವರಾಜ್ ಸಂವಾದ’ದಲ್ಲಿ ಯೋಗೇಂದ್ರ ಯಾದವ್**

**ನ**ನ್ನ ಗೆಳೆಯ ಯೋಗೇಂದ್ರ ಯಾದವ್ ಆಮ್ ಆದ್ಮಿ ಪಕ್ಷದಿಂದ ಹೊರ ಬಂದ ನಂತರ ಸ್ವರಾಜ್ ಅಭಿಯಾನ ಎನ್ನುವ ಒಂದು ವಿಶಿಷ್ಟವಾದ ರಾಜಕೀಯ ಆಂದೋಲನವನ್ನು ಕ್ರಿಯಾತ್ಮಕಗೊಳಿಸುವ ಪ್ರಯತ್ನವನ್ನು ನಡೆಸುತ್ತಿದ್ದಾರೆ. ಈ ಪ್ರಯತ್ನದ ಭಾಗವಾಗಿ ಅವರು ದೇಶದ ವಿವಿದೆಡೆ ಸ್ವರಾಜ್ಯ ಸಂವಾದ ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಸ್ವರಾಜ್ ಸಂವಾದದ ಮೊದಲನೆಯ ಸಮಾವೇಶ ದೆಹಲಿ ಸಮೀಪದ ಗುರ್‌ಗಾಂವ್‌ನಲ್ಲಿ ನಡೆದಿದ್ದು, ಆ ಸಮಾವೇಶದಲ್ಲಿ ಸುಮಾರು ನಾಲ್ಕು ಸಾವಿರ ಜನರು ಭಾಗವಹಿಸಿದ್ದರು ಎಂದು ವರದಿಯಾಗಿದೆ. ಎರಡನೇಯ ಸಮಾವೇಶ ದಿನಾಂಕ ೨೯–೫–೨೦೧೫ರಂದು ಬೆಂಗಳೂರಿನಲ್ಲಿ ನಡೆಯಿತು. ಈ ಸಮಾವೇಶದಲ್ಲಿ ಸುಮಾರು ನೂರು ಜನರು ಭಾಗವಹಿಸಿದರು ಎನ್ನಬಹುದು. ಯೋಗೇಂದ್ರ ಯಾದವ್‌ರ ಜೊತೆಗಿನ ವೈಯಕ್ತಿಕ ಸ್ನೇಹ ಹಾಗೂ ಅವರು ಪ್ರತಿನಿಧಿಸುವ ಕಾಳಜಿಗಳ ಕುರಿತು ನನಗೆ ಸಹಮತವಿರುವುದರಿಂದ ನಾನೂ ಕೂಡ ಈ ಕೂಡುವಿಕೆಯಲ್ಲಿ ಪಾಲ್ಗೊಂಡಿದ್ದೆ.

ಯೋಗೇಂದ್ರ ಯಾದವ್ ಭಾರತದ ಚಿಂತನಶೀಲ ಸಂಶೋಧಕರಲ್ಲಿ ಒಬ್ಬರು. ಆಮ್ ಆದ್ಮಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಹಾಗೂ ಅದಕ್ಕೆ ಒಂದು ತಾತ್ವಿಕ ರಾಜಕೀಯ ದಿಕ್ಕು ದೆಸೆಯನ್ನು ಒದಗಿಸುವಲ್ಲಿ ಅವರು ತುಂಬಾ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಆಮ್ ಆದ್ಮಿ ಪಕ್ಷದ ಇತ್ತೀಚಿನ ಅಲ್ಲೋಲ ಕಲ್ಲೋಲಗಳು ಅವರನ್ನು ಪಕ್ಷದಿಂದ ಈ ಕಡೆ ತಂದು ನಿಲ್ಲಿಸಿದೆ. ಹಾಗಾಗಿ, ಹೊಸ ರಾಜಕೀಯ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವ, ಹೊಸ ಸಮೀಕರಣಗಳನ್ನು ರೂಪಿಸಿಕೊಳ್ಳುವ ಹಾಗೂ ಹೊಸ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುವ ಆತಂಕ ಹಾಗೂ ತವಕಗಳಲ್ಲಿ ಅವರು ಇದ್ದಾರೆ ಎಂದು ನನಗೆ ಅನಿಸುತ್ತದೆ. ಈ ದಿಸೆಯಲ್ಲಿ ಅವರು ಹೊಸದಾಗಿ ಸೃಷ್ಟಿಸಿಕೊಳ್ಳುವ ರಾಜಕೀಯ ಅವಕಾಶದ ರೂಪುರೇಷೆಗಳೇನು, ಹೊಸದಾಗಿ ರೂಪಿಸಿಕೊಳ್ಳುವ ಸಮೀಕರಣಗಳ ಅರ್ಥವೇನು? ಹೊಸ ಸಂಬಂಧಗಳ ಸಾಧ್ಯತೆ ಹಾಗೂ ಮಿತಿಗಳೇನು ಎನ್ನುವುದರ ಕುರಿತು ನನಗೆ ಕುತೂಹಲ ಹಾಗೂ ಅನುಮಾನಗಳು ಇವೆ. ಈ ಅನುಮಾನ ಹಾಗೂ ಕುತೂಹಲಗಳ ಕೆಲವು ಎಳೆಗಳನ್ನು ಇಲ್ಲಿ ಪ್ರಸ್ತುತ ಪಡಿಸುತ್ತಿದ್ದೇನೆ.

ಸ್ವರಾಜ್ಯ ಅದರ ಅನೇಕ ಅರ್ಥಗಳಲ್ಲಿ ನಮ್ಮ ಗಮನವನ್ನು ಸೆಳೆಯುವ ಹಾಗೂ ನಮ್ಮಿಂದ ನಿರೂಪಣೆ ಹಾಗೂ ವಿಮರ್ಶೆಗಳನ್ನು ನಿರೀಕ್ಷಿಸುವ ಒಂದು ಸಂಕೀರ್ಣ ಪರಿಕಲ್ಪನೆ. ಬಹುಶ: ಗಾಂಧೀಜಿ ಸ್ವರಾಜ್ಯಕ್ಕೆ ಒದಗಿಸಿರುವ ನಿರ್ವಚನ ಹಾಗೂ ಈ ನಿರ್ವಚನವನ್ನು ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ವಿಸ್ತರಿಸಲು ಮತ್ತು ಕಾರ್ಯಗತಗೊಳಿಸಲು ಯತ್ನಿಸಿದ ಕೆಲವು ಮೂಲ ಜಿಜ್ಞಾಸಿಕ ಚಿಂತಕರ ಹಾಗೂ ಚಿಂತನಾ ಪರಂಪರೆಗಳ ನೆಲೆಯಲ್ಲಿ ನಾವು ಇದನ್ನು ಹೆಚ್ಚಾಗಿ ಗುರುತಿಸುತ್ತೇವೆ. ವಿಶೇಷವಾಗಿ ಯೋಗೇಂದ್ರ ಯಾದವ್ ಆಮ್ ಆದ್ಮಿ ಪಕ್ಷದೊಳಗೆ ನೆಲೆಯೂರಿಸಲು ಯತ್ನಿಸಿದ ಸ್ವರಾಜ್ಯದ ಕಲ್ಪನೆ ಗಾಂಧಿ ಹಾಗೂ ಲೋಹಿಯಾ ಚಿಂತನೆಗಳಿಂದ ಸ್ಫುಟಗೊಂಡದ್ದು. ಈ ಸ್ವರಾಜ್ಯದ ಪರಿಕಲ್ಪನೆ ಆಳವಾದ ಸಹ ಚಿಂತನೆಯ ಪ್ರಜಾತಂತ್ರ (ಡೆಲಿಬರೇಟಿವ್ ಡೆಮೋಕ್ರೆಸಿ)ದ ಕಲ್ಪನೆಯ ನೆಲೆಯಲ್ಲಿ ರೂಪುಗೊಂಡದ್ದು. ಆದ್ದರಿಂದಲೇ ಯೋಗೇಂದ್ರ ಯಾದವ್ ಹುಟ್ಟಿಹಾಕಲು ಯತ್ನಿಸಿದ ಸ್ವರಾಜ್ಯ ಅಭಿಯಾನದ ತಳಹದಿ ಸ್ವರಾಜ್ಯ ಸಂವಾದವೇ ಆಗಿದೆ. ಸ್ವರಾಜ್ಯ ಸಂವಾದ ಸಮಾನತೆಯ ಅಧಾರದಲ್ಲಿ ಚಿಗುರೊಡೆಯುವ ಹಾಗೂ ಅರಳುವ ಸಹ ಚಿಂತನೆ. ಯಾವೊನೋ ಒಬ್ಬ ಉದಾತ್ತ ನಾಯಕ ತನ್ನ ತಾತ್ವಿಕ ಭಾವನ್ಮೋದದಲ್ಲಿ ಜನ ಸಮುದಾಯಕ್ಕೆ ಧಾರೆ ಎರೆಯುವ ವಿದ್ಯಮಾನವನ್ನು ಸ್ವರಾಜ್ಯ ಎಂದು ಕರೆಯಲಾಗದು.

ಸಮಾನತೆ, ಸಹ ಅನ್ವೇಷಣೆ ಹಾಗೂ ಸಹ ಚಿಂತನೆಗಳ ದ್ವಂದ್ವಾತ್ಮಕ ಕರ್ಷಣೆಯಲ್ಲಿ ರೂಪುಗೊಳ್ಳಬೇಕಾದ ವಿದ್ಯಮಾನ ಸ್ವರಾಜ್ಯವೆಂದಾದರೆ ಬೆಂಗಳೂರಿನಲ್ಲಿ ನಡೆದ ಸ್ವರಾಜ್ಯ ಸಂವಾದ ಇದಾವುದನ್ನೂ ಪ್ರತಿಫಲಿಸಿದಂತೆ ಕಾಣುವುದಿಲ್ಲ. ಬೇರೆ ಬೇರೆ ಕಡೆಗಳಿಂದ ಬಂದು ಸೇರಿದ, ಬೇರೆ ಬೇರೆ ಹಿತಾಸಕ್ತಿಗಳನ್ನು ಹೊಂದಿದ ಜನರ, ಒಡಕುಗಳಿಂದ ಕೂಡಿದ, ಪ್ರತ್ಯೇಕ ಪ್ರತ್ಯೇಕವಾದ, ಪರಸ್ಪರ ಸಂಬಂಧಗಳಿಲ್ಲದ, ಏಕಾಲಾಪಗಳಾಗಿ ಅದು ಕಾಣಿಸಿಕೊಂಡಿತು. ರಾಜಕಾರಣವೆಂದರೆ ಬೇರೆ ಬೇರೆ ತರಹದ ಜನರ ವಿಭಿನ್ನ ತರಹದ ಹಿತಾಸಕ್ತಿಗಳ ನಡುವೆ ನಡೆಸುವ ಅನುಸಂಧಾನವೇ ಆಗಿದೆ ಎಂದು ಯೋಗೇಂದ್ರ ಯಾದವ್ ನನಗೆ ತಿರುಗಿ ಹೇಳಬಹುದು. ಯಾಕೆಂದರೆ ಸ್ವರಾಜ್ಯ ಅಭಿಯಾನ ಹಾಗೂ ಸ್ವರಾಜ್ಯ ಸಂವಾದ ಮೂಲತ: ಒಂದು ರಾಜಕೀಯ ಆಂದೋಲನ ಎನ್ನುವ ಮಾತನ್ನು ಅವರು ಮತ್ತೆ ಮತ್ತೆ ಹೇಳುತ್ತಾರೆ. ಸಾರ್ವಜನಿಕ ಅನ್ನುವ ಅರ್ಥದಲ್ಲಿ ರಾಜಕಾರಣವನ್ನು ಒಂದು ಮೂಲಭೂತ ಪರಿವರ್ತನೆಯ ಚಟುವಟಿಕೆಯಾಗಿ ಗ್ರಹಿಸುವುದಾದರೆ ವಿಭಿನ್ನ ಹಿತಾಸಕ್ತಿಗಳ ನಡುವೆ ಸಂಧಾನ ನಡೆಯಲೇಬೇಕು. ಸಂಧಾನವನ್ನು ಸಿದ್ದಿಸಿಕೊಳ್ಳಬೇಕಾದರೆ ಸಂವಾದ ಮತ್ತು ಸಹ ಚಿಂತನೆ ನಡೆಯಬೇಕು. ಆದರೆ ಬೆಂಗಳೂರು ಸಂವಾದದಲ್ಲಿ ಬಂದು ಸೇರಿದ ಜನರು (ಅವರುಗಳಲ್ಲಿ ಆಯ್ಕೆ ಮಾಡಿದ ಕೆಲವರು) ತಮಗೆ ಇಷ್ಟ ಬಂದ ರೀತಿಯಲ್ಲಿ ಸ್ವರಾಜ್ಯದ ಕುರಿತು, ಸಂವಾದದ ಕುರಿತು, ಪ್ರಜಾತಂತ್ರದ ಕುರಿತು, ಭಾರತದ ರಾಜಕಾರಣದ ಕುರಿತು, ಆಮ್ ಆದ್ಮಿ ಪಕ್ಷದ ಕುರಿತು, ಯೋಗೇಂದ್ರ ಯಾದವ್‌ರವರ ಕುರಿತು ತಮ್ಮ ತಮ್ಮ ಮಾತುಗಳನ್ನು ಮುಂದಿಟ್ಟರು. ಆದರೆ ಈ ಮಾತುಗಳು ಒಂದನ್ನೊಂದು ಸಂಧಿಸುವ ಬದಲಾಗಿ ಪರಸ್ಪರ ಢಿಕ್ಕಿ ಹೊಡೆದು ತಮ್ಮ ತಮ್ಮ ಮೂಲ ನಿರ್ದೇಶಿತ ದಾರಿಗಳನ್ನು ಹಿಡಿದವು. ಯೋಗೇಂದ್ರ ಯಾದವ್ ತಮ್ಮ ಎಂದಿನ ಸರಳತೆ, ಸಜ್ಜನಿಕೆ ಹಾಗೂ ತಾತ್ವಿಕ ಖಚಿತತೆಯಲ್ಲಿ ಸ್ವರಾಜ್ಯ ಎಂದರೇನು ಸಂವಾದ ಯಾಕೆ, ಅಭಿಯಾನದ ಧ್ಯೇಯೋದ್ದೇಶಗಳೇನು ಎನ್ನುವುದರ ಕುರಿತು ಮಾತನಾಡಿದರು. ಪ್ರತೀ ರಾಜ್ಯದಲ್ಲಿಯೂ ಒಂದು ಸಂವಾದ ನಡೆಯಬೇಕು. ಪ್ರತೀ ಪ್ರದೇಶದಲ್ಲಿಯೂ ಕನಿಷ್ಟ ಒಂದು ಸ್ವರಾಜ್ಯ ಕೇಂದ್ರವಿರಬೇಕು. ವಿಕೇಂದ್ರೀಕರಣ, ಸ್ವಾಯತ್ತತೆ ಮತ್ತು ಸಂಯುಕ್ತತೆ– ಇವುಗಳು ಅಭಿಯಾನದ ಮೂಲ ತತ್ವಗಳು ಎಂದೆಲ್ಲಾ ವಿವರಿಸಿದರು.

ಆದರೆ ಇವೆಲ್ಲವೂ ಅನೇಕ ಸಂದೇಹಗಳನ್ನು ನನ್ನ ಮನಸ್ಸಿನಲ್ಲಿ ಮೂಡಿಸಿದವು. ಸ್ವರಾಜ್ಯ ಅಭಿಯಾನ ಹಾಗೂ ಸಂವಾದ ಕುರಿತು ನನಗೆ ಯಾವುದೇ ಮೂಲಭೂತ ತಾತ್ವಿಕ ಭಿನ್ನಮತ ಇಲ್ಲವಾದರೂ ಬೆಂಗಳೂರಿನಲ್ಲಿ ನಾನು ಕಂಡ ಸಂವಾದದ ಅಭಿವ್ಯಕ್ತಿ ಅನೇಕ ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತದೆ. ಯಥಾ ಪ್ರಕಾರ ದೆಹಲಿಯ ಕಾಸ್ಮೋಪೊಲಿಟನ್ ಬುದ್ಧಿಜೀವಿಯೊಬ್ಬ ಕರ್ನಾಟಕದ ಸ್ಥಳೀಯರಿಗೆ ಸ್ವರಾಜ್ಯದ ಗಾಯಿತ್ರಿ ಮಂತ್ರವನ್ನು ಉಪದೇಶಿಸಿದಂತೆ ನನಗೆ ಈ ಸಂವಾದ ಭಾಸವಾಯಿತು. ಕರ್ನಾಟಕದ ಮಂದಿಗೆ ಅವರ ನಿರ್ದಿಷ್ಟ ಅನುಭವದ ನೆಲೆಯಲ್ಲಿ ಸ್ವರಾಜ್ಯದ ಅಗತ್ಯದ ಅರಿವು ಮೂಡಬೇಕೇ ಹೊರತು ಮೇಲಿನಿಂದ ಬಂದ ಬ್ರಹ್ಮಜ್ಞಾನಿಯೊಬ್ಬನಿಂದ ಪಡೆದುಕೊಳ್ಳಬೇಕಾದ ವಿಶೇಷ ಜ್ಞಾನ ಅದಲ್ಲ.

ಈ ಮಾತುಗಳು ನಿಜವೆಂದಾದರೆ ಯೋಗೇಂದ್ರಯಾದವ್ ಏನು ಮಾಡಬೇಕು? ಸ್ವರಾಜ್ಯ ಚಿಂತನೆಯ ಸಹ ಯಾತ್ರಿಕನಾಗಿ ನಾನು ಈ ಸಲಹೆಯನ್ನು ಕೊಡಬಹುದೇನೋ? ಬಹುಶ: ಸ್ವರಾಜ್ಯ ಅಭಿಯಾನದ ತಮ್ಮ ರಾಷ್ಟ್ರೀಯ ಮಟ್ಟದ ಮಹತ್ವಕಾಂಕ್ಷೆಯ ಕುರಿತು ಅವರು ಮರು ಚಿಂತನೆ ನಡೆಸಬೇಕು. ಸ್ವರಾಜ್ಯದ ಕಲ್ಪನೆಯನ್ನು ರಾಷ್ಟ್ರಮಟ್ಟದಲ್ಲಾಗಲೀ ಅಥವಾ ಜಾಗತಿಕ ಮಟ್ಟದಲ್ಲಾಗಲೀ ಪರಿಭಾವಿಸಲಾಗದು ಎನ್ನುವುದು ಈ ಮಾತಿನ ಅರ್ಥವಲ್ಲ. ಸ್ವರಾಜ್ಯ ಮೂಲತ:

ಒಂದು ವಿಶ್ವಾತ್ಮಕ ಕಲ್ಪನೆ. ಆದರೆ ಅದು ನಿಜಗೊಳ್ಳುವುದು ಅಥವಾ ಯಥಾರ್ಥಗೊಳ್ಳುವುದು ಅನೇಕ ನಿರ್ದಿಷ್ಟತೆಗಳ ನೆಲೆಗಳಲ್ಲಿ ಅದು ಪರಿಕಲ್ಪಿಸಲ್ಪಟ್ಟು ಈ ಅನೇಕ—ಅನೇಕ ನಿರ್ದಿಷ್ಟತೆಗಳು ಒಂದುಗೂಡಿ ಅದು ವಿಶ್ವಾತ್ಮಕಗೊಂಡಾಗ. ಬಹುಶ: ನಮಗೆಲ್ಲರಿಗೂ ತಿಳಿದಿರುವ 'ಜಾಗತಿಕವಾಗಿ ಯೋಚಿಸು ಹಾಗೂ ಪ್ರಾದೇಶಿಕವಾಗಿ ಕಾರ್ಯ ಪ್ರವೃತ್ತ ನಾಗು' ಎಂಬ ರೂಢಿ ಮಾತು ನಾವೇನು ಮಾಡಬೇಕು ಎನ್ನುವುದನ್ನು ಸರಳವಾಗಿ ಮನಮುಟ್ಟುವಂತೆ ತಿಳಿಸುತ್ತದೆ. ಯೋಗೇಂದ್ರ ಯಾದವ್ ಈ ದೇಶದ ಪ್ರತಿ ರಾಜ್ಯದಲ್ಲಿಯೂ ಸ್ವರಾಜ್ ಸಂವಾದವನ್ನು ನಡೆಸುವ ಬಗ್ಗೆ ನನಗೆ ತಕರಾರು ಏನು ಇಲ್ಲ. ಆದರೆ ಅವರು ಈ ದೇಶದಾದ್ಯಂತ ಯಾರು ಯಾರು ಸ್ವರಾಜ್ಯ ಸಂವಾದದ ತಾತ್ವಿಕ ಚೌಕಟ್ಟಿನೊಳಗೆ ಬರಲಿಚ್ಛಿಸುತ್ತಾರೆ? ಅವರು ಏಕೆ ಬರಲಿಚ್ಛಿಸುತ್ತಾರೆ ಮತ್ತು ಅವರ ಹಿತಾಸಕ್ತಿಗಳೇನು? ಎನ್ನುವುದರ ಕುರಿತು ಯೋಚಿಸಬೇಕಾಗುತ್ತದೆ. ಬಹುಶ: ಮಾವೋ ಕ್ರಾಂತಿಯ ಕುರಿತು ಆಡಿದ ಮಾತುಗಳನ್ನು ಸ್ವಲ್ಪ ಬದಲಿಸಿ ಹೀಗೆ ಹೇಳಬಹುದು. ಸ್ವರಾಜ್ಯ ಅಂದರೆ 'ಭೋಜನ ಕೂಟಕ್ಕೆ ಆಹ್ವಾನವಲ್ಲ'. ಅದು ನಿರಂತರ ಸಾಮುದಾಯಿಕ ಸಹಚಿಂತನೆಯ ಚಲನಶೀಲ ಪ್ರಕ್ರಿಯೆ. ಈ ಸಾಮುದಾಯಿಕ ಸಹ ಚಿಂತನೆಯ ಪ್ರಕ್ರಿಯೆ ವಿವೇಚನೆಯಿಂದ, ಸಾವಧಾನವಾಗಿ ಹಂತ ಹಂತದಲ್ಲಿ ನಡೆಯಬೇಕು. ಈ ಸಹಚಿಂತನೆಯ ಸಹಯೋಗದಲ್ಲಿ ಯಾರು ಹಿತವರು ಎನ್ನುವ ಅರಿವು ನಮಗೆ ಇರಬೇಕಾಗುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಇಲ್ಲಿ ಬೆಂಗಳೂರು ಒಂದೇ ಜಾಗವಲ್ಲ ಅಥವಾ ಕರ್ನಾಟಕದ ಸ್ವರಾಜ್ಯ ಸಂವಾದ ನಡೆಯಬೇಕಾದದ್ದು ಬೆಂಗಳೂರಿನಲ್ಲಿ ಅಲ್ಲವೇ ಅಲ್ಲ. ಅಥವಾ ಇನ್ನೊಂದು ರೀತಿಯಲ್ಲಿ ಹೇಳುದಾದರೆ ಸ್ವರಾಜ್ಯ ಸಂವಾದ ಎಲ್ಲಿ ನಡೆಯಿತು ಅನ್ನುವುದಕ್ಕಿಂತಲೂ ಅದು ಕರ್ನಾಟಕದ ಚರಿತ್ರೆ ಸಮಾಜ, ಸಂಸ್ಕೃತಿ ಆರ್ಥಿಕತೆ ಹಾಗೂ ರಾಜಕಾರಣಗಳ ಕುರಿತು ಯಾವ ರೀತಿಯ ಚಿಂತನ ಮಂಥನಗಳನ್ನು ನಡೆಸಿತು ಎನ್ನುವುದು ಮುಖ್ಯವಾಗುತ್ತದೆ. ಈ ಸಂವಾದದಲ್ಲಿ ಕರ್ನಾಟಕದ ಬೇರೆ ಬೇರೆ ಹೋರಾಟದ ವಲಯಗಳಿಂದ ಯಾರು ಯಾರು ಭಾಗವಹಿಸಿದ್ದರು? ಅವರು ತಮ್ಮ ಹೋರಾಟದ ಹಿನ್ನಲೆಯಲ್ಲಿ ಸ್ವರಾಜ್ಯದ ಕಲ್ಪನೆಗೆ ಯಾವ ರೆಕ್ಕೆ ಪುಕ್ಕಗಳನ್ನು ಒದಗಿಸುತ್ತಾರೆ. ಅವರ ಚಿಂತನ ಮಂಥನಗಳ ಫಲವಾಗಿ ಸಂವಾದದಲ್ಲಿ ಯಾವ ತಾತ್ವಿಕ ನೆಲೆಗಳಿಂದ ಸ್ವರಾಜ್ಯದ ಕಲ್ಪನೆ ನಿರ್ದಿಷ್ಟ ರೂಪವನ್ನು ಪಡೆದುಕೊಳ್ಳುತ್ತದೆ ಎನ್ನುವುದು ಅತ್ಯಂತ ಮುಖ್ಯವಾದ ಸಂಗತಿ. ಯೋಗೇಂದ್ರ ಯಾದವ್‌ರವರ ಸ್ವರಾಜ್ಯ ಸಂವಾದ ತನ್ನ ಪ್ರಾದೇಶಿಕ ನಿರ್ದಿಷ್ಟತೆಯ ಸೂಕ್ಷ್ಮಗಳಿಗೆ ಹಾಗೂ ವೈಶಿಷ್ಟ್ಯಗಳಿಗೆ ತೆರೆದುಕೊಳ್ಳದಿದ್ದಲ್ಲಿ ಕರ್ನಾಟಕದ ಆಮ್ ಆದ್ಮಿ ಪಕ್ಷದಂತೆ ಅದು ಒಂದು ಪರಕೀಯ ವಿದ್ಯಮಾನವಾಗಿ ಅಥವಾ ಕೇವಲ ಮಾಧ್ಯಮದ ಮೆರುಗಿನ ವಸ್ತುವಾಗಿ ಉಳಿದು ಬಿಡುತ್ತದೆ. ಅದು ಹಾಗಾಗದಿರಲೆನ್ನುವುದು ನಮ್ಮೆಲ್ಲರ ಬಯಕೆ.



**(ಲೇಖಕ ಡಾ. ರಾಜಾರಾಂ ತೋಳ್ಪಾಡಿ ಮಂಗಳೂರು ವಿಶ್ವವಿದ್ಯಾಲಯದ ರಾಜಕೀಯಶಾಸ್ತ್ರ ವಿಭಾಗದ ಮುಖ್ಯಸ್ಥರು. ಗಾಂಧಿ ಮತ್ತು ಲೋಹಿಯಾ ಕುರಿತು ವಿಶೇಷ ಅಧ್ಯಯನ ಕೈಗೊಂಡಿರುವ ಅವರು ನಮ್ಮ ನಡುವಿನ ಸೂಕ್ಷ್ಮ ರಾಜಕೀಯ ಚಿಂತಕರೂ ಹೌದು)**

---

# ಸಹಕಾರಿ ಒಕ್ಕೂಟ ತತ್ವವೆಂಬ ಬಲುದೂರದ ಗುರಿ

**–ಪ್ರೊ. ಬಲವೀರ್ ಅರೋರಾ**

**ಭಾರತ ಒಂದು ಏಕಾತ್ಮ ರಾಷ್ಟ್ರವೋ ಅಥವಾ ಒಕ್ಕೂಟವೋ ಎಂಬುದು ಸ್ಪಷ್ಟ ಉತ್ತರಗಳಿಲ್ಲದ ಬಹು ಹಳೆಯ ಪ್ರಶ್ನೆ. ಆದರೆ ಈಗ ಹೊಸ ಉತ್ಸಾಹ ಮತ್ತು ಭರವಸೆಗಳೊಂದಿಗೆ ಅಧಿಕಾರಕ್ಕೆ ಬಂದಿರುವ ನರೇಂದ್ರ ಮೋದಿಯವರು ಜನತೆಗೆ ಸಹಕಾರಿ ಒಕ್ಕೂಟ ವ್ಯವಸ್ಥೆಯ ಆಶ್ವಾಸನೆ ನೀಡಿದ್ದಾರೆ. ಹೆಚ್ಚೂ ಕಡಿಮೆ ಮೂರು ಅವಧಿಗೆ ರಾಜ್ಯವೊಂದರ ಮುಖ್ಯಮಂತ್ರಿ ಆಗಿದ್ದವರೊಬ್ಬರು ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡಿ ರಾಷ್ಟ್ರವನ್ನು ಒಂದು ಸಹಕಾರಿ ಒಕ್ಕೂಟವಾಗಿ ಪರಿವರ್ತಿಸುತ್ತೇನೆ ಎಂದಾಗ ಅದನ್ನು ನಂಬಲು ಆಧಾರಗಳು ಕಾಣುತ್ತವೆ.**

**ಒಕ್ಕೂಟ ತತ್ವ ಸ್ವರಾಜ್ಯ ಕಲ್ಪನೆಗೆ ಪೂರಕವಾದ ತತ್ವ. ಆದುದರಿಂದ ನಾವೆಲ್ಲರೂ ಮೋದಿಯವರ ಆಶ್ವಾಸನೆಯನ್ನು ಆಸೆಗಣ್ಣುಗಳಿಂದಲೇ ನೋಡುವುದು ಸಹಜ. ಆದರೆ ಅದು ಈಗ ಕಟ್ಟಿಕೊಳ್ಳಲಾಗಿರುವ ಸಂಕೀರ್ಣ ರಾಷ್ಟ್ರ ವ್ಯವಸ್ಥೆಯಲ್ಲಿ, ಆಡಿದಷ್ಟು ಸುಲಭದ ಮಾತಲ್ಲ. ಹಾಗಾಗಿ ಮೋದಿಯವರ ಈ ಮಾತು ಎಷ್ಟರಮಟ್ಟಿಗೆ ಜಾರಿಯಾಗುತ್ತಿದೆ ಮತ್ತು ಜಾರಿಯಾಗಬಲ್ಲುದು ಎಂಬುದರ ಪರಿಶೀಲನೆಯ ಪ್ರಯತ್ನವೊಂದನ್ನು ಈ ಲೇಖನದಲ್ಲಿ ಮಾಡಲಾಗಿದೆ–ಸಂ**



**ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮೋದಿ**

**ಕಾ**ಂಗ್ರೆಸ್ ಮುಕ್ತ ಭಾರತವನ್ನು ನೀಡುತ್ತೇವೆಂಬ ವಾಗ್ದಾನದ ಹೊರತಾಗಿ ಶ್ರೀಮಾನ್ ಮೋದಿಯವರ ಚುನಾವಣಾ ಪ್ರಚಾರದಲ್ಲಿ ಪದೇ ಪದೇ ಕೇಳಿ ಬಂದ ಪದ ಪುಂಜಗಳ ಸುವ್ವಾಲೆಯೆಂದರೆ, ಭಾರತದ ಒಕ್ಕೂಟ ವ್ಯವಸ್ಥೆಯನ್ನು ಹೊಸ ಯುಗಕ್ಕೆ ಕರೆದೊಯ್ಯಲಿದ್ದೇನೆ ಎಂಬುದಾಗಿತ್ತು. ರಾಜ್ಯ ಮಟ್ಟದ ನಾಯಕರ ತಳಹಂತದಿಂದ ಮೂಡುವ ಚಿಂತನೆ ಭಾರತೀಯ ಒಕ್ಕೂಟದ ರಾಜಕೀಯ ವ್ಯವಸ್ಥೆಯನ್ನು ಹೊಸ ನೆಲೆಗೆ ಒಯ್ಯಬಲ್ಲುದು ಮತ್ತು ಅದರ ಆಧಾರದ ಮೇಲೆ, ತೀರ ಕಣ್ಣು ಕೋರೈಸುವಂತಲ್ಲದಿದ್ದರೂ ಎದ್ದು ಕಾಣುವಂತಹ ಬದಲಾವಣೆಯನ್ನು ಆಡಳಿತದಲ್ಲಿ ತರಬಹುದು ಎಂಬ ತೀವ್ರ ಅಭೀಪ್ಸೆಯನ್ನು ವ್ಯಕ್ತಪಡಿಸಲಾಗಿತ್ತು. ಇತಿಹಾಸದತ್ತ ಒಂದು, ರಾಜಕಾರಣದತ್ತ ಇನ್ನೊಂದು ದೃಷ್ಟಿ ನೆಟ್ಟ, ನಾಟಕೀಯ ಹಾವಭಾವ, ಮಾತಿನ ಆಡಂಬರ ಈ ಆಡಳಿತ ರೀತಿಯ ವಿಶಿಷ್ಟ ಲಕ್ಷಣವಾಗಿಬಿಟ್ಟಿದೆ.

ವರ್ಷದ ಹಿಂದೆ ಅಧಿಕಾರ ಸ್ವೀಕರಿಸಿದ ನಂತರ ಶ್ರೀಮಾನ್ ಮೋದಿಯವರ ರುಮಾಲು ಕೆಂಪು ಕೋಟೆಯ ಹಿನ್ನಲೆಯಲ್ಲಿ ಪಟಪಟನೆ ಹಾರಾಡುವ ಸ್ಮರಣಾರ್ಹ ಚಿತ್ರಗಳನ್ನು ಹೊರತುಪಡಿಸಿದರೆ, ಅವರ ಬಹುತೇಕ ನಾಟಕೀಯ ಆರ್ಭಟಗಳು ಬಹುಪಾಲು ವಿದೇಶದಲ್ಲಿರುವ ಭಾರತೀಯರಿಗೆ ಮೀಸಲಾಗಿದೆ. ಅಲ್ಲಿ ಅವರು ಯೋಜನಾ ಆಯೋಗ ಎಂಬ ನೆಹರು ರಾಜಕಾರಣದ ಮಾದರಿ ಸಂಸ್ಥೆಯನ್ನು ವಿಸರ್ಜಿಸಿ ಹೊಸ ಪರ್ವವೊಂದರ ಆಗಮನವನ್ನು ಘೋಷಿಸಿದರು. ಒಂದೆಡೆ ವಿಷಾದ, ಇನ್ನೊಂದೆಡೆ ಕೊನೆಗೂ ಇದು ತೊಲಗಿತಲ್ಲ ಎಂಬ ನಿಟ್ಟುಸಿರಿನ ಮಿಶ್ರ ಭಾವನೆಗಳೊಂದಿಗೆ ಇದನ್ನು ಸ್ವಾಗತಿಸಿದರೂ, ಇದರ ಬದಲಿಯನ್ನು ರೂಪಿಸುವುದಕ್ಕೆ ಬರೋಬ್ಬರಿ ಆರು ತಿಂಗಳುಗಳು ಬೇಕಾಯಿತು.. ಈ ಹೊಸ ಸಂಸ್ಥೆಯ ರೂಪುರೇಷೆಗಳನ್ನು ನಿರ್ಧರಿಸುವಾಗ, ಇದ್ದ ಪ್ರಧಾನ ಕಾಳಜಿಯೆಂದರೆ, ಅದರಲ್ಲಿ ಯಾವುದೇ ತರಹದಲ್ಲೂ ತನ್ನ ಹಿಂದಿನ ಸಂಸ್ಥೆಯ ಕುರುಹುಗಳು ಲವಲೇಶವೂ ಇರಬಾರದು ಎಂಬುದಾಗಿತ್ತು. ಇದನ್ನು ಸಾಧಿಸುವುದು ಮಾತನಾಡಿದಷ್ಟು ಸುಲಭವಾಗಿರಲಿಲ್ಲ.

ಶ್ರೀಮಾನ್ ಮೋದಿಯವರು ತಾವು ಇತಿಹಾಸದ ತಪ್ಪುಗಳನ್ನು ಸರಿಪಡಿಸಿ, ತಮ್ಮ ದೇಶದ ಬಗ್ಗೆ ಈವರೆಗೆ ಇಲ್ಲದಿದ್ದೆಂದು ಅವರು ಭಾವಿಸಿರುವ ಹೆಮ್ಮೆಯನ್ನು ತಂದುಕೊಟ್ಟ ವ್ಯಕ್ತಿಯಾಗಿ ತಮ್ಮ ಸ್ಥಾನವನ್ನು ಚರಿತ್ರೆಯಲ್ಲಿ ಕಟೆದು ನಿಲ್ಲಿಸಲು

ಬಯಸಿದ್ದಾರೆ. ಭಾರತವನ್ನು ಗುರುತು ಹಿಡಿಯಲಾರದಷ್ಟು–ಎಷ್ಟು ಕಣ್ಣುಕುಕ್ಕುವಂತೆ ಎಂದರೆ ಈ ಹಿಂದಿನದೆಲ್ಲವೂ ಮಂಕಾಗಿ ಕ್ಷುಲ್ಲಕವಾಗುವಂತೆ– ಬದಲಾಯಿಸಿ, ಆ ಮೂಲಕ 'ಮೋದಿ ಮೊದಲು ಮತ್ತು ಆ ನಂತರ' ಎಂಬ ವಿಭಾಗೀಕರಣ ಚರಿತ್ರೆಯಲ್ಲಿ ಉಂಟಾಗಬೇಕೆಂಬ ಬಯಕೆಯೂ ಅವರಿಗಿದ್ದಂತಿದೆ. ಆದ್ದರಿಂದಲೇ, ಅವರ ರಾಷ್ಟ್ರ ಪರಿವರ್ತನೆಯ ಸಾಧನವಾಗಿಸಿಕೊಳ್ಳಬಯಸಿರುವ National Institute for Transforming India (NITI) Ayog ಎಂಬ ಸಂಸ್ಥೆಯು ತಾನು ಯಾವುದರ ಬದಲಾಗಿ ರೂಪುಗೊಳ್ಳಬೇಕಾಗಿದೆಯೋ ಅದರ ದುರ್ಬಲ ತದ್ರೂಪವಾಗಿ ಈಗ ನಿಧಾನವಾಗಿ ಅನಾವರಣಗೊಳ್ಳುತ್ತಿದೆ. ಹೊಸ ಸಹಕಾರಿ ಒಕ್ಕೂಟದ ತತ್ವದ ವಾಹಕವಾಗಿ ಕಲ್ಪಿಸಿಕೊಳ್ಳಲಾಗಿರುವ ಈ ಸಂಸ್ಥೆಯು ರಾಜ್ಯಗಳ ಮುಖ್ಯಮಂತ್ರಿಗಳನ್ನು ಸಿಟ್ಟಿಗೆಬ್ಬಿಸುತ್ತಿದ್ದ ಅನುದಾನ–ಅನುಮೋದನೆಗಳೆಂಬ ಯಾಜಮಾನಿಕೆಯ ವ್ಯವಹಾರಗಳನ್ನು ಬಿಟ್ಟುಕೊಡುವ ಒಂದು ಚಿಂತಕರ ಚಾವಡಿಯಾಗಿ ಬಿಂಬಿಸಲ್ಪಟ್ಟಿತ್ತು. ಇದರ ವಿಶಾಲ ಮತ್ತು ಸ್ಥೂಲ ಪ್ರಣಾಳಿಕೆಯನ್ನು ಗಮನಿಸಿದರೆ, ಅಂತಿಮವಾಗಿ ಸಹಕಾರಿ ಒಕ್ಕೂಟ ತತ್ವಕ್ಕೆ ಇದರ ಕಾಣಿಕೆಯೇನು ಎಂಬುದಕ್ಕೆ ಸ್ಪಷ್ಟ ಉತ್ತರಗಳೇನೂ ದೊರೆಯುವುದಿಲ್ಲ. ಇಲ್ಲಿಯೇ ಅದರ ಅಧ್ಯಕ್ಷರ ಪಾತ್ರದ ಮಹತ್ವವಿರುವುದು.

ಹಾಗಾದರೆ ಶ್ರೀಮಾನ್ ಮೋದಿಯವರ ಹೊಸ ಸಹಕಾರಿ ಒಕ್ಕೂಟದ ಚಿತ್ರಣವೇನು? ಒಂದು ಕಡೆ ದಯಾಮಯನಾದ ಕೇಂದ್ರದ ಅಧ್ಯಕ್ಷತೆಯಲ್ಲಿನ ಪಿತೃಪ್ರಧಾನ ಸಂಯುಕ್ತ ಕುಟುಂಬವೊಂದರ ಮಾದರಿಯನ್ನು ಪ್ರಸ್ತುತಪಡಿಸಲಾಗುತ್ತಿದ್ದರೆ, ಇನ್ನೊಂದೆಡೆ ಪರಸ್ಪರ ನಂಬಿಕೆ ಮತ್ತು ಸಹಕಾರವನ್ನು ಆಧರಿಸಿ ರಾಜ್ಯಗಳು ಉತ್ತಮ ಆಡಳಿತ ನೀಡಲು ಪೈಪೋಟಿ ನಡೆಸುವ ಮಾದರಿ ಇದೆ. ಆದರೂ ಆರ್ಥಿಕ ಶಿಸ್ತು ಪಾಲಿಸುವಂತೆ ಹಾಗೂ ಸರ್ಕಾರದ ಗಾತ್ರವನ್ನು, ಪಾತ್ರವನ್ನು ತಗ್ಗಿಸುವಂತೆ ಉಪದೇಶ ಮಾಡುವ ಕೇಂದ್ರ ಸ್ವತಃ ತಾನೇ ಹಾಗೆ ಮಾಡುತ್ತಿಲ್ಲ ಎಂದು ಯಾರಾದರೂ ದೂರಲು ಇಲ್ಲಿ ಅವಕಾಶ ಇದ್ದೇ ಇದೆ!

ತನ್ನ ಅಸ್ತಿತ್ವಕ್ಕೆ ಕಾರಣವಾದ ಯೋಜನ ಆಯೋಗದಂತೆಯೇ ತಾನೂ ಸಹಜ ಸಾವಿಗೊಳಗಾದಂತೆ ಕಾಣುವ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಹೋಲುವಂತಿರುವ ಮುಖ್ಯಮಂತ್ರಿಗಳ ಮಂಡಳಿಯನ್ನು ಹೊಸ ಆಯೋಗದ ಮೇಲೆ ಹೇರಲಾಗಿದೆ. ಸದ್ಯ (ಪಂಚ ವಾರ್ಷಿಕ)ಯೋಜನೆಯೊಂದು(೨೦೧೨–೧೭) ಅರ್ಧಾವಧಿಯ ಪರಿಶೀಲನೆಗೆ ಸಿದ್ಧವಾಗಿದ್ದು ಶ್ರೀಮಾನ್ ಮೋದಿಯವರ ಈ ಹೊಸ ಕಸರತ್ತಿನಲ್ಲಿ ಅದು ಬದುಕುಳಿದಿದ್ದೇ ಆದರೆ, ಬಾಕಿ ಇರುವ ವರ್ಷಗಳಲ್ಲಿ ಅದು ಪಡೆಯುವ ಸ್ವರೂಪ ಬಹುಶಃ ಈ ಹೊಸ ಸಹಕಾರಿ ಒಕ್ಕೂಟದ ಮಾದರಿ ಬಗೆಗಿನ ಸ್ಪಷ್ಟಚಿತ್ರ ನೀಡಲಿದೆ. ಮುಖ್ಯವಾಗಿ, ಕಡಿಮೆ ಸಂಖ್ಯೆಯ ಕೇಂದ್ರದ ಯೋಜನೆಗಳು ಹಾಗೂ ರಾಜ್ಯಗಳಿಗೆ ಹೆಚ್ಚಿನ ಸ್ವಾಯತ್ತತೆ ಇರುವ ಹಾಗೆ ಭಾರತವನ್ನು ಪರಿವರ್ತಿಸುವ ಕಾರ್ಯಕ್ರಮದ ನೀಲನಕ್ಷೆಯೊಂದನ್ನು ತಯಾರಿಸುವ ಕೆಲಸಗಳಲ್ಲಿ ಮುಖ್ಯಮಂತ್ರಿಗಳ ಗುಂಪುಗಳು ಈಗ ಮಗ್ನವಾಗಿವೆ.

**ನಿಜವಾದ ಅರ್ಥದಲ್ಲಿ ಅಧಿಕಾರದ ಹಂಚಿಕೆ:**

ಶ್ರೀಮಾನ್ ಮೋದಿಯವರು ಸಹಕಾರಿ ಒಕ್ಕೂಟತತ್ವದದ ಬಗ್ಗೆ ದೃಢವಾಗಿದ್ದಿದ್ದೇ ಆದರೆ, ಕೇಂದ್ರದ ಕಾರ್ಯಕ್ರಮಗಳ ಬೆನ್ನೇರಿ ಕೊಬ್ಬಿಹೋಗಿರುವ ಕೇಂದ್ರ ಸಚಿವಾಲಯಗಳ ಅಧಿಕಾರ ವ್ಯಾಪ್ತಿಗಳನ್ನು ಸವರಿ ಹಾಕಿ , ಅವುಗಳ ಗಾತ್ರವನ್ನು ಕುಗ್ಗಿಸುವ ರಾಷ್ಟ್ರಾಡಳಿತದ ಮಹತ್ವದ ತಿರುವೊಂದು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ರಾಜ್ಯಗಳ ಸಬಲೀಕರಣದ ವಿಷಯದಲ್ಲಿ ಅಡ್ಡಿಬರುವ ನವದೆಹಲಿಯ ಭವನಗಳ ಬಿಗಿ ಹಿಡಿತವನ್ನು ನಿವಾರಿಸುವ ದೂರದರ್ಶಿತ್ವ ಹಾಗೂ ರಾಜಕೀಯ ಇಚ್ಛಾಶಕ್ತಿಗಳೆರಡರ ಅಗತ್ಯವೂ ಇದೆ. ನಿಜ ಒಕ್ಕೂಟ ತತ್ವದ ಪರವಾಗಿರುವವರು ಮೊದಲಿಂದಲೂ, ರಾಜ್ಯಗಳ ಅಧಿಕಾರಪಟ್ಟಿಯಲ್ಲಿರುವ ವಿಷಯಗಳಲ್ಲಿಯೂ ಹಸ್ತಕ್ಷೇಪ ಮಾಡುವ ಕೇಂದ್ರ ಸಚಿವಾಲಯಗಳ ಪಾತ್ರವನ್ನು ಕಡಿಮೆ ಮಾಡುವಂತೆ ಅಥವಾ ಅವನ್ನು ಸಂಪೂರ್ಣ ಮುಚ್ಚುವಂತೆ ಆಗ್ರಹಿಸುತ್ತಾ ಬಂದಿದ್ದಾರೆ. ಅದು ಸಾಧ್ಯವಾದರೆ, ಸಹಕಾರಿ ಒಕ್ಕೂಟ ತತ್ವದ ಪ್ರಕಾರ ಕಡಿಮೆ ಸಂಖ್ಯೆಯ ಇಂತಹ ಯೋಜನೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಅದು ಯಾರ ಹಕ್ಕೋ ಅವರಿಗೇ–ಅಂದರೆ ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳಿಗೆ ವರ್ಗವಾಗಬೇಕಾಗುತ್ತದೆ.

ಮುಖ್ಯ ಸಂಗತಿ ಎಂದರೆ, ಈ ಹೊಸ ಒಕ್ಕೂಟ ವ್ಯವಸ್ಥೆಯ ವಿಚಾರವನ್ನು ಮುನ್ನಡೆಸಲು ಸೃಷ್ಟಿಸಲಾದ ಎರಡೂ ಸಂಸ್ಥೆಗಳ ಶಾಸನಾತ್ಮಕ ಮಾನ್ಯತೆ ಇರುವುದು ಪುನಃ ಕೇಂದ್ರ ಸಂಪುಟದ ನಿರ್ಧಾರದಲ್ಲೇ ವಿನಹ ಸಂವಿಧಾನದಲ್ಲಲ್ಲ. ಅಂದರೆ, ರಾಜ್ಯಗಳ ಮಧ್ಯದ ಸಮನ್ವಯವನ್ನು ನಿರ್ವಹಿಸುವ ಶಾಸನಾತ್ಮಕ ಅಧಿಕಾರ ಹೊಂದಿರುವ; ಆದರೆ ಬಹಳ ಕಡಿಮೆ ಬಳಸಲ್ಪಟ್ಟಿರುವ ಸಾಂವಿಧಾನಿಕ ಸಂಸ್ಥೆಯಾದ ಅಂತರರಾಜ್ಯ ಮಂಡಳಿಯನ್ನು ಇಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಇದು ಎತ್ತುವ ಪ್ರಶ್ನೆಯೆಂದರೆ ಈ ಹೊಸ ಸಹಕಾರಿ ಒಕ್ಕೂಟ ತತ್ವ ಸಮನ್ವಯದಾಚೆ ಬೇರಾವ ಹೊಸ ಅಂಶಗಳನ್ನು ನಿರೂಪಿಸುತ್ತದೆ ಎಂಬುದೇ ಆಗಿದೆ.

ಅಧಿಕಾರ ಮತ್ತು ಜವಾಬ್ದಾರಿಗಳನ್ನು ಸರ್ಕಾರದ ಮೂರು ಹಂತಗಳಲ್ಲಿ ಹಂಚಿಕೊಳ್ಳಬೇಕಾಗಿರುವುದೇ ಈ ಪರಿಕಲ್ಪನೆಯ ಮುಖ್ಯ ಅಂಶವಾಗಿದ್ದು, ನೀತಿ ನಿರೂಪಣೆಯಲ್ಲಿಯೂ ಪಾಲ್ಗೊಳ್ಳುವಿಕೆಯನ್ನೂ ಇದು ಒಳಗೊಂಡಿದೆ. ಇದು ನಿರ್ದಿಷ್ಟವಾಗಿ ಮುಖ್ಯವೆನಿಸುವುದು, ಸಹವರ್ತಿ ಜವಾಬ್ದಾರಿಗಳಿರುವ ವಲಯಗಳಲ್ಲಿ. ಕೇಂದ್ರವು ತಾನೂ ಆ ವಲಯಗಳಿಗೆ ಸಂಬಂಧಿಸಿದ ಶಾಸನಗಳನ್ನು ರೂಪಿಸುವ ದತ್ತ ಅಧಿಕಾರದ ಮೂಲಕ ರಾಜ್ಯಗಳ ಬೆನ್ನ ಮೇಲೆ ಸವಾರಿ ಮಾಡಲು ಸಾಧ್ಯವಿರುವ ಸಂದರ್ಭಗಳಲ್ಲಿ. ಹಾಗಾಗಿ ರಾಜ್ಯಗಳ ಹೆಚ್ಚಿನ ಸಬಲೀಕರಣದ ೭ನೇ ಪರಿಚ್ಛೇದದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ವ್ಯಾಪ್ತಿಗಳ ಪಟ್ಟಿಗಳ ಪರಿಷ್ಕರಣೆ ಮಾಡಬೇಕಾದ್ದು ಮತ್ತು ಹೆಚ್ಚಿನ ಹಣಕಾಸು ವರ್ಗಾವಣೆ ಸಹಕಾರಿ ಒಕ್ಕೂಟವಾದಕ್ಕೆ ಸಂಗತವಾಗಿರುತ್ತದೆ. ನೀತಿಯೊಂದನ್ನು ನಿರೂಪಿಸಲು ಮತ್ತು ಜಾರಿಗೊಳಿಸಲು ಸರಿಯಾದ ಆಡಳಿತ ಹಂತ ಯಾವುದೆಂಬುದನ್ನು ಗುರುತಿಸುವ ಕೆಲಸವೇ ಸಹಕಾರಿ ಒಕ್ಕೂಟವಾದದ ನಕಾಶೆಯ ನಿರ್ಣಾಯಕ ಅಂಶವಾಗಿದೆ.

ಶ್ರೀಮಾನ್ ಮೋದಿಯವರು ಪ್ರತಿಪಾದಿಸಿದ ಆರಂಭದ ಉದ್ದೇಶ–ಗುರಿಗಳ ಪಾಕಕ್ಕೆ ಸೇರಿಸಲ್ಪಟ್ಟ ಇನ್ನೊಂದು ವಿಚಾರವೆಂದರೆ, ಸ್ಪರ್ಧಾತ್ಮಕ ಒಕ್ಕೂಟ ತತ್ವ. ಅಂದರೆ, ರಾಜ್ಯಗಳು ಬಂಡವಾಳವನ್ನು ಆಕರ್ಷಿಸಲು ಪರಸ್ಪರ ಪೈಪೋಟಿ ನಡೆಸಿ, ಉತ್ತಮ ಸಾರ್ವಜನಿಕ ಸರಂಜಾಮುಗಳನ್ನು ಹಾಗೂ ಸೇವೆಗಳನ್ನು ಒದಗಿಸುವವೆಂಬುದು ಇದರ ಆಶಯ. ಆದರೆ ಈಗ ಹೆಚ್ಚುಹೆಚ್ಚಾಗಿ ಸ್ಪಷ್ಟವಾಗುತ್ತಿರುವ ಸಂಗತಿಯೇನೆಂದರೆ, ನ್ಯಾಯಯುತ ಸ್ಪರ್ಧೆಗಳಿಗಿಳಿಯಲು ರಾಜ್ಯಗಳರೀಗ ನಿಂತಿರುವುದು ಅಸಮಾನತೆ ಪಾತಳಿಯಲ್ಲಿ. ಮೂಲಭೂತ ಅವಶ್ಯಕತೆಗಳ ಹಾಗೂ ಸಾಮಾಜಿಕ ವಲಯಗಳ ಸೇವೆಯಲ್ಲಿ ಪ್ರಾದೇಶಿಕ ತಾರತಮ್ಯಗಳು ಅಗಾಧವಾಗಿವೆ. ಮೇಲಾಗಿ ರಾಜ್ಯಗಳ ಮಧ್ಯೆ ಆಡಳಿತದ ಸಾಮರ್ಥ್ಯದಲ್ಲಿ ಅಪಾರ ವ್ಯತ್ಯಾಸಗಳಿದ್ದು, ವಿಶೇಷ ಸ್ಥಾನ ಪಡೆದ ರಾಜ್ಯಗಳು, ಅವನ್ನು ಸೃಷ್ಟಿಸಿದ ಯೋಜನಾ ಆಯೋಗದೊಂದಿಗೇ ಒಣಗಿ ಮುರುಟಿ ಹೋಗಿರುವುದರಿಂದ ಅಸಮರೂಪಿ ಒಕ್ಕೂಟವಾದದ ಅಗತ್ಯ ಇಂದು ಇದೆ. ಹಣಕಾಸು ಆಯೋಗಕ್ಕೆ ಸಮಾನ ವಿತರಣೆಯ ನೀತಿಯನ್ನು ಪಾಲಿಸುವ ಆದೇಶವಿಲ್ಲವಾದರೂ, ಸಹಕಾರಿ ಒಕ್ಕೂಟ ತತ್ವವನ್ನು ಎತ್ತಿಹಿಡಿಯುವ ಯಾವುದೇ ಸರ್ಕಾರ ಈ ನೀತಿಯನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಹೆಚ್ಚಿನ ಹಣಕಾಸು ವಿತರಣೆಯ ನೀತಿ ಈ ಸಮಸ್ಯೆಯನ್ನು ಎದುರುಗೊಂಡೇ ಇಲ್ಲ. ಇದಕ್ಕೆ ಪರಿಹಾರವೆಂದರೆ ನಮ್ಮದೀಗ ಅಸಮಾನ ರಾಜ್ಯಗಳ ಒಕ್ಕೂಟವೆಂಬುದನ್ನು ಒಪ್ಪಿಕೊಂಡು ಅದರ ನಕ್ಷೆಯೊಂದನ್ನು ಸಿದ್ಧಪಡಿಸುವುದು.

NITI ಆಯೋಗ ಇನ್ನೂ ಕಾಲೂರುತ್ತಿರುವಾಗಲೇ, ಕೇಂದ್ರ ಸರ್ಕಾರ ತನ್ನ ಪೂರ್ಣ ಪ್ರಮಾಣದ ಮೊದಲ ಆಯವ್ಯಯವನ್ನು ಸಿದ್ಧಪಡಿಸುತ್ತಿತ್ತು. ಹಾಗೂ ೧೪ನೇ ಹಣಕಾಸು ಆಯೋಗ ಹೆಚ್ಚಿನ ಆರ್ಥಿಕ ಸಂಪನ್ಮೂಲಗಳನ್ನು ರಾಜ್ಯಗಳಿಗೆ ಒದಗಿಸಲು ಮುಂದಾಯಿತು. ಅದು ಜೊತೆಜೊತೆಗೆ, ಯೋಜನಾ ಆಯೋಗದ ರದ್ದತಿಯಿಂದಾಗಿ ಅನಾಥವಾದ 'ಸಂಪನ್ಮೂಲ–ವಿನಿಯೋಗ'ದ ಅಧಿಕಾರವನ್ನೂ ತಾನು ಆಕ್ರಮಿಸಿಕೊಂಡು, ನೇರವಾಗಿ ರಾಜ್ಯಗಳಿಗೆ ಗಮನಾರ್ಹ ಪ್ರಮಾಣದ ಆದಾಯದ ಪಾಲನ್ನು ವರ್ಗಾಯಿಸಿತು. ಇದು, ಕೇಂದ್ರ ಸರ್ಕಾರವು ಸಹಕಾರಿ ಒಕ್ಕೂಟದ ತತ್ವವನ್ನು ರೂಪಿಸುವ ದಿಕ್ಕನ್ನು ನಿರ್ದೇಶಿತು. ಆದರೂ ಕೇಂದ್ರ ಸರ್ಕಾರ ತನ್ನ ಸ್ವಂತ ವೆಚ್ಚಕ್ಕೆ ಕಡಿವಾಣ ಹಾಕದೇ, ತನ್ನಿಂದ ಪ್ರಾಯೋಜಿತವಾದ ಸಾಮಾಜಿಕ ವಲಯದ ಪ್ರಮುಖ ಕಾರ್ಯಕ್ರಮಗಳಿಗೆ ನೇರವಾದ ಕೊಡಲಿಯೇಟು ಹಾಕಿತು. ಜೊತೆಗೇ ಗಮನಿಸಬೇಕಾದ್ದೇನೆಂದರೆ, ತಮ್ಮೆಡೆಗೆ ಹರಿದು ಬಂದ ಅಧಿಕ ಸಂಪನ್ಮೂಲಗಳನ್ನು ಹೀರಿಕೊಂಡು ಪರಿಣಾಮಕಾರಿಯಾಗಿ ವೆಚ್ಚಮಾಡಲು ಅವಶ್ಯಕವಾದ ಆಡಳಿತಾತ್ಮಕ ಸಾಮರ್ಥ್ಯಗಳನ್ನು ಬಹುತೇಕ ರಾಜ್ಯಗಳು ಹೊಂದಿವೆಯೇ ಎಂಬುದು. ಹಾಗೇ, ಅವಶ್ಯಕ ಸೇವೆಗಳ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗಲು ಅವುಗಳಿಂದ ಸಾಧ್ಯವೇ ಎಂಬುದನ್ನು ಕಾದು ನೋಡಬೇಕಿದೆ.

**ಜನಾದೇಶವನ್ನು ಗೌರವಿಸುವುದು:**

ಸಹಕಾರಿ ಒಕ್ಕೂಟವನ್ನು ಸಲಹಿ ಕಾಪಾಡುವಲ್ಲಿನೊಂದು ಮಹತ್ವದ ಅಂಶವೆಂದರೆ, ಚುನಾಯಿತ ಸರ್ಕಾರಗಳು ಪಡೆದಿರುವ ಜನಾದೇಶವನ್ನು– ಅವು ವಿರೋಧ ಪಕ್ಷಗಳಿಂದ ನಿರ್ವಹಿಸಲ್ಪಡುತ್ತಿದ್ದರೂ ಸಹ– ಗೌರವಿಸುವುದು. ಪಕ್ಷ ವ್ಯವಸ್ಥೆಯು ಈಗ ಒಕ್ಕೂಟದ ಎಲ್ಲೆಗಳನುಸಾರವಾಗಿ ಒಡೆದುಹೋಗಿದ್ದರೂ ಒಕ್ಕೂಟ ಸರ್ಕಾರ ನಡೆಸುವಲ್ಲಿ ರಾಜ್ಯ ಮಟ್ಟದ ಪಕ್ಷಗಳನ್ನು ಒಳಗೊಳ್ಳುವುದು– ಅದರ ಅಗತ್ಯವಿಲ್ಲದಾಗಲೂ–ಇಂದಿನ ರಾಜಕಾರಣದ ಅಗತ್ಯವಾಗಿದೆ. ಮೈತ್ರಿ ಸರ್ಕಾರ ಜೊತೆಗಾರರನ್ನು ಯಾವ ರೀತಿ ನಡೆಸಿಕೊಳ್ಳುತ್ತದೆ ಎಂಬುದು ಕೂಡ ಸಹಕಾರಿ ಒಕ್ಕೂಟ ತತ್ವದ ಒರೆಗಲ್ಲು ಆಗಿರುತ್ತದೆ. ಸಂಸತ್ತಿನಲ್ಲಿ ಹೊಂದಿರುವ ಬಹುಮತ ಒಂದು ಬಗೆಯದಾದರೆ, ಒಕ್ಕೂಟದ ರಾಜಕಾರಣದ ಮೇಲಿರುವ ಪ್ರಾಬಲ್ಯದ ಸ್ವರೂಪ ಇನ್ನೊಂದು ಬಗೆಯದಾಗಿರಬೇಕಾಗುತ್ತದೆ.

೨೦೧೪ರ ರಾಜ್ಯ ಶಾಸನ ಸಭೆಗಳ ಚುನಾವಣೆ ತೋರಿಸಿದಂತೆ, ದೀರ್ಘಕಾಲದ ಮೈತ್ರಿಗಳು ಕೂಡ ಬಲಾತ್ಕಾರ ತಂತ್ರಗಳಿಗೆ ಬಲಿಯಾಗಬಲ್ಲವು. ಅವು ಈಗ ಕೇಂದ್ರದ ಬಹುಮತದ ಪ್ರಭುತ್ವದ ವಿಸ್ತರಣವಾದಿ ಹೆಬ್ಬಯಕೆಯನ್ನು ತಮ್ಮ ಅಸ್ತಿತ್ವಕ್ಕೇ ಒದಗಿರುವ ಕಂಟಕವಾಗಿ ಕಾಣುತ್ತವೆ. ಇಂತಹ ಸಂದರ್ಭಗಳಲ್ಲಿ ವಿರೋಧ ಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳೊಡನೆ ಸಹಕಾರಿ ಒಕ್ಕೂಟವೆಂಬುದು ಇನ್ನೂ ಕಡು ಕಷ್ಟದ ವಿದ್ಯಮಾನವಾಗಿ ಬಿಡುತ್ತದೆ. ಅದರಲ್ಲೂ ಕಾರ್ಯಶೀಲತೆಯ ಕನಿಷ್ಠ ಸಂಬಂಧಗಳೂ ನೆಟ್ಟಗಿಲ್ಲದಿದ್ದಾಗ. ಈ ದೃಷ್ಟಿಯಿಂದ, ಸಂಸತ್ತಿನಲ್ಲಿ ಅಧಿಕೃತ ವಿರೋಧಪಕ್ಷವೊಂದನ್ನು ಮಾನ್ಯ ಮಾಡಲು ನಿರಾಕರಿಸಿ ಆರಂಭದಲ್ಲೇ ತಪ್ಪುಹೆಜ್ಜೆಯನ್ನಿಡಲಾಗಿದೆ ಎಂದು ಹೇಳಬಹುದಾಗಿದೆ.

ತಾವು ಜಾರಿಮಾಡುವುದಾಗಿ ಪ್ರತಿಜ್ಞೆಗೈದಿರುವ ಸಹಕಾರಿ ಒಕ್ಕೂಟ ತತ್ವದ ಕಾರಣದ ಮೇಲೆ ಶ್ರೀಮಾನ್ ಮೋದಿಯವರು ನೆನಪಿನಲ್ಲಿ ಉಳಿಯುತ್ತಾರೆಯೇ? ಅವರ ಅಧಿಕಾರದ ಮೊದಲ ವರ್ಷದ ನಡಾವಳಿಯು, ಅಧಿಕಾರವನ್ನು ಪರಿಣಾಮಕಾರಿ ಹಂಚಿಕೆಯ ಮೂಲಕ ಸ್ವಾಯತ್ತ ಸ್ಥಳೀಯ ಸಂಸ್ಥೆಗಳವರೆಗೂ ಕೊಂಡೊಯ್ದು ಜನತೆಗೆ ನೀಡಬಲ್ಲ ಯಾವುದೇ ವ್ಯವಸ್ಥೆಯನ್ನು ಹುಟ್ಟು ಹಾಕುವ ಯಾವುದೇ ಭರವಸೆಯನ್ನೂ ಸೂಚಿಸುತ್ತಿಲ್ಲ. ಒಕ್ಕೂಟದ ತತ್ವಕ್ಕೆ ಅಧಿಕಾರ ಹಂಚಿಕೆಯ ಪ್ರಾಮಾಣಿಕ ಇಚ್ಛೆ ಬೇಕಾಗುತ್ತದೆ, ಇದರ ಸಣ್ಣ ಸುಳಿವೂ ಕೇಂದ್ರ ಮಟ್ಟದಲಿ ಕಾಣುತ್ತಿಲ್ಲ. 'ಪಾಲುದಾರಿಕೆ ಹಾಗೂ ಪಾಲ್ಗೊಳ್ಳುವಿಕೆ'ಯ ವಿಚಾರಗಳು ಇದರ ಯಶಸ್ಸಿಗೆ ಅತಿ ಮುಖ್ಯವಾಗಿದ್ದು, ಅಧಿಕಾರದ ಕೇಂದ್ರೀಕರಣ, ಒಕ್ಕೂಟದ ಆಶಯಕ್ಕೆ ವಿರುದ್ಧ ನೀತಿಯಾಗಿದೆ. ವಿರೋಧವನ್ನೇ ತಾಳಿಕೊಳ್ಳದ ಸರ್ಕಾರವೊಂದು ಒಕ್ಕೂಟದ ಸಾಮರಸ್ಯವನ್ನು ವರ್ಧಿಸುತ್ತದೆಯೆಂಬುದು ಬಹುತೇಕ ಅಸಾಧ್ಯವೇ ಸರಿ.

ಭಾರತೀಯ ಒಕ್ಕೂಟ ವ್ಯವಸ್ಥೆಯನ್ನು ಪುನಾರಚಿಸಲು ರಾಕ್ಷಸ ಸಂಸದೀಯ ಬಹುಮತದಾಚೆ ಸಾಗಿ ಹಲವು ಹಂತಗಳ 'ಸಹಕಾರ ಮತ್ತು ವಿರೋಧ'ದ ಹೊಸ ಮಾದರಿಗಳನ್ನು ಸಿದ್ಧಗೊಳಿಸಬೇಕು. ಇವೇ ಒಕ್ಕೂಟದ ಅಧಿಕಾರ ಹಂಚಿಕೆಯ ವಾಸ್ತು–ವಿನ್ಯಾಸವನ್ನು ನಿರ್ಧರಿಸುವುದು. ಶ್ರೀಮಾನ್ ಮೋದಿಯವರು ಈ ದಿಕ್ಕಿನತ್ತ ನಿರ್ಣಾಯಕ ಹೆಜ್ಜೆಗಳನ್ನಿಡುವ ಇಚ್ಛೆ ಅಥವಾ ಒಲವು ಹೊಂದಿದ್ದಾರೆಯೇ ಎಂಬುದಿನ್ನೂ ಅಸ್ಪಷ್ಟವಾಗಿಯೇ ಇದೆ. ಸರ್ವಾಧಿಕಾರಿ ವ್ಯಕ್ತಿತ್ವದಲ್ಲಿ ಯಾವಾಗಲೂ ಬಹುಮತವಾದಿ ದಾಹವೊಂದು ಅಂತರ್ಗತವಾಗಿರುತ್ತದೆ.ಭಾರತದ ಒಕ್ಕೂಟ ವ್ಯವಸ್ಥೆಗೆ ಅತಿ ಅಪಾಯಕಾರಿಯಾದದ್ದೆಂದರೆ, ಬಹುಮತವಾದಿಯಾದ ಪ್ರಜಾಪ್ರಭುತ್ವ.



**(ಲೇಖಕ ಪ್ರೊ. ಬಲವೀರ್ ಅರೋರಾ ಅವರು ದೆಹಲಿಯ ಜವಹರಲಾಲ್ ನೆಹ್ರೂ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾಗಿದ್ದು ಈಗ ಸಾಮಾಜಿಕ ವಿಜ್ಞಾನಗಳ ಸಂಸ್ಥೆಯ *ಬಹುಹಂತದ ಒಕ್ಕೂಟವಾದದ ಅಧ್ಯಯನ ಕೇಂದ್ರ*ದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ)**

(ಕನ್ನಡಕ್ಕೆ: **ಬಿ.ಎಸ್. ದಿವಾಕರ್**
ಕೃಪೆ: **ದ ಹಿಂದೂ,** ಮೇ ೨೨, ೨೦೧೫)

# ನಮ್ಮ ಗ್ರಾಮ ಪಂಚಾಯ್ತಿಗಳು ಎಷ್ಟು ಸಬಲ?

–ರವಿ ಕೃಷ್ಣಾ ರೆಡ್ಡಿ

**ಗ್ರಾಮ ಪಂಚಾಯ್ತಿಗಳು ಸ್ವರಾಜ್ಯದ ಮೂಲಘಟಕಗಳು. ಅವುಗಳ ಆಧಾರದ ಮೇಲೆ ಕಟ್ಟಬೇಕಾದದ್ದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು. ಆದರೆ ಈಗ ಎಲ್ಲ ತಲೆಕೆಳಗಾಗಿದೆ. ಈ ಅಸಂಬದ್ಧತೆಯನ್ನು ಚೂರುಪಾರು ಸರಪಡಿಸುವ ಪ್ರಯತ್ನವೊಂದು ಇತ್ತೀಚೆಗೆ ರಾಜ್ಯದಲ್ಲಿ ನಡೆಯಿತು. ಅದರ ಫಲಾಫಲಗಳ ಬಗ್ಗೆ ಈ ಲೇಖನ–ಸಂ.**



ಒಂದು ಗ್ರಾಮ ಸಭೆ

ಅಧಿಕಾರ ವಿಕೇಂದ್ರೀಕರಣ ಮತ್ತು ಸ್ವರಾಜ್ಯದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಎರಡು–ಮೂರು ದಶಕಗಳಿಂದ ನಡೆಯುತ್ತಿರುವ ಗ್ರಾಮ–ತಾಲ್ಲೂಕು–ಜಿಲ್ಲಾ ಪಂಚಾಯಿತಿ ಚುನಾವಣೆಗಳು ಕ್ರಾಂತಿಕಾರಕ ಮತ್ತು ಪ್ರಗತಿಶೀಲ ಹೆಜ್ಜೆಗಳು. ಪ್ರಜಾಪ್ರಭುತ್ವವನ್ನು ಸಶಕ್ತಗೊಳಿಸುವ ಮತ್ತು ಬೇರುಮಟ್ಟದಲ್ಲಿ ಬಲಪಡಿಸುವ ಈ ಪದ್ಧತಿ ಹಲವಾರು ಎಡರುತೊಡರುಗಳ ನಡುವೆ ಕರ್ನಾಟಕದಲ್ಲಿ ನಿರಂತರವಾಗಿ ನಡೆದು ಬರುತ್ತಿದೆ. ಅದಕ್ಕಾಗಿ ನಾವೆಲ್ಲ ಒಂದು ಮಟ್ಟದವರೆಗಾದರೂ ತೃಪ್ತಿ ಮತ್ತು ಸಂತೋಷ ಪಡಬೇಕಿದೆ.

ಆದರೆ, ಈಗಿರುವ ಪಂಚಾಯಿತಿ ವ್ಯವಸ್ಥೆ ಎಲ್ಲಾ ರೀತಿಯಿಂದಲೂ ಸರಿಯಾಗಿದೆಯೇ ಎಂದರೆ, ಎಲ್ಲವೂ ಸರಿಯಿಲ್ಲ ಎನ್ನುವುದೇ ಸರಿಯಾದ ಉತ್ತರ. ಸುಧಾರಣೆಗಳು ಆಗುತ್ತಲೇ ಇವೆ, ಆಗುತ್ತಲೇ ಇರಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸಣ್ಣಪುಟ್ಟ ಸುಧಾರಣೆಗಳಷ್ಟೇ ಅಲ್ಲದೆ ಮೂಲಭೂತ ಬದಲಾವಣೆಗಳೂ ಆಗಬೇಕಿವೆ. ನಮ್ಮ ದೇಶದ "First Past The Post" ಚುನಾವಣಾ ವ್ಯವಸ್ಥೆ ಸಮಾಜದ ಎಲ್ಲಾ ವರ್ಗದವರಿಗೂ ಸರಿಯಾದ ಪ್ರಾತಿನಿಧ್ಯ ಕೊಡುತ್ತಿಲ್ಲ ಮತ್ತು ಅದನ್ನು "Proportional Representation" ವ್ಯವಸ್ಥೆಗೆ ಬದಲಾಯಿಸಬೇಕು ಎಂಬ ಕೂಗು ಇತ್ತೀಚಿನ ದಿನಗಳಲ್ಲಿ ಬಲವಾಗುತ್ತಿದೆ. ಹಾಗೆಯೇ ಪ್ರಧಾನಮಂತ್ರಿ/ಮುಖ್ಯಮಂತ್ರಿಗಳ ಆಯ್ಕೆಗೆ ಈಗಿನ ಸಂಸದೀಯ ವ್ಯವಸ್ಥೆಯ ಬದಲಿಗೆ ನೇರ ಆಯ್ಕೆ ವ್ಯವಸ್ಥೆ ಮಾಡಿದರೆ ಹೇಗೆ ಎನ್ನುವ ಪ್ರಶ್ನೆಗಳೂ ಎದ್ದೇಳುತ್ತಿವೆ. ಇಂತಹುದೇ ಪ್ರಶ್ನೆಗಳು ನಮ್ಮ ಗ್ರಾಮ ಪಂಚಾಯಿತಿಯ ವಿಚಾರಕ್ಕೂ ಆಗುತ್ತಿದೆ.

ಇದೆಲ್ಲದರ ಜೊತೆಗೆ ಮೂರು ದಶಕಗಳಿಂದ ಈ ಪಂಚಾಯಿತಿ ವ್ಯವಸ್ಥೆಯಲ್ಲಿ ಇರುವ ಕೆಲವು ಮೂಲಭೂತ ನ್ಯೂನತೆಗಳು ಹಾಗೆಯೇ ಉಳಿದುಕೊಂಡು ಬಂದಿದ್ದವು. ಪ್ರತಿ ಐದು ವರ್ಷಕ್ಕೊಮ್ಮೆ ಸ್ಥಾನಗಳ ಮೀಸಲಾತಿ ಬದಲಾವಣೆ ಮಾಡುವುದರಿಂದ ಬಹುತೇಕ ಗೆದ್ದ ಅಭ್ಯರ್ಥಿಗಳಿಗೆ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಸಿಗುತ್ತಿರಲಿಲ್ಲ. ಹೀಗಾಗಿ ತನ್ನ ಊರು ಅಥವ ಕ್ಷೇತ್ರಕ್ಕಾಗಿ ಪ್ರಾಮಾಣಿಕವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡಲೇಬೇಕಾದ ಅಗತ್ಯ ಇರಲಿಲ್ಲ. ಹೇಗಿದ್ದರೂ ಮುಂದಿನ ಚುನಾವಣೆಗೆ ಅವಕಾಶ ಇಲ್ಲ, ಏನೇ ಅಯೋಗ್ಯ ಕೆಲಸ ಮಾಡಿದರೂ, ಭ್ರಷ್ಟಾಚಾರ ಮಾಡಿದರೂ ನಡೆಯುತ್ತದೆ, ಮೌಲ್ಯಮಾಪನ ಆಗುವುದಿಲ್ಲ ಎನ್ನುವ ಸಂದರ್ಭ ಇತ್ತು. ಮತ್ತೆ ಕೆಲವು ಕಡೆ ತಾಂತ್ರಿಕ ಕಾರಣಗಳ ಗೊಂದಲದಿಂದಾಗಿ ಮಹಿಳಾ ಸದಸ್ಯರ

ಸಂಖ್ಯೆ, ಅದರಲ್ಲೂ ಮೀಸಲು ಕ್ಷೇತ್ರಗಳಲ್ಲಿ ಶೇ.೭೫ ಮೀರಿದ ಉದಾಹರಣೆಗಳಿದ್ದವು. ಹಣದ ಹೊಳೆ, ಯಾವಾಗೆಂದರೆ ಆಗ ಅಧ್ಯಕ್ಷ/ಉಪಾಧ್ಯಕ್ಷರ ಬದಲಾವಣೆ, ಅವಧಿಯ ಅಧಿಕಾರ ಹಂಚಿಕೆ, ಅಧ್ಯಕ್ಷರೇ ಇಲ್ಲದೆ ಅಧಿಕಾರಿಗಳೇ ಆಡಳಿತ ನಿಭಾಯಿಸಬೇಕಿದ್ದ ಪರಿಸ್ಥಿತಿ, ಭ್ರಷ್ಟಾಚಾರ ಮತ್ತು ಅಕ್ರಮಗಳು; ಹೀಗೆ ಅನೇಕ ಗೊಂದಲ ಮತ್ತು ವಾಮಮಾರ್ಗಗಳಲ್ಲಿ ನಮ್ಮ ಪಂಚಾಯಿತಿಗಳು ಕಾರ್ಯನಿರ್ವಹಿಸುತ್ತಿದ್ದವು.

ಇದೆಲ್ಲವನ್ನೂ ಒಂದು ಒಳ್ಳೆಯ ಮಾರ್ಗಕ್ಕೆ ಬದಲಾಯಿಸಬೇಕು ಎಂದು ಈ ರಾಜ್ಯ ಸರ್ಕಾರ ತೀರ್ಮಾನಿಸಿದ್ದನ್ನು ನಾವು ಸ್ವಾಗತಿಸಬೇಕು. ಈಗಿನ ಗ್ರಾಮೀಣಾಭಿವೃದ್ಧಿ ಸಚಿವರಾಗಿರುವ ಹೆಚ್.ಕೆ.ಪಾಟೀಲರು ಗ್ರಾಮೀಣ ವಿಚಾರಗಳ ಬಗ್ಗೆ ಆಸಕ್ತರಾಗಿರುವವರಷ್ಟೇ ಅಲ್ಲ, ಒಟ್ಟಾರೆಯಾಗಿ ಜನಪರ ಕಾಳಜಿ ಇರುವವರು. ಹಾಗೆಯೇ ದು ಈ ವಿಚಾರಕ್ಕೆ ಪ್ರೋತ್ಸಾಹ ಸಿಕ್ಕಂತಾಯಿತು. ಹಾಗಾಗಿ ಸರ್ಕಾರ ಕಳೆದ ವರ್ಷ ಮಾಜಿ ಸ್ಪೀಕರ್ ರಮೇಶ್‌ಕುಮಾರರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ ಸುಧಾರಣಾ ಶಿಫಾರಸುಗಳನ್ನು ಕೊಡಲು ಕೇಳಿಕೊಂಡಿತು. ಅದರಲ್ಲಿ ಪಂಚಾಯಿತಿ ವ್ಯವಸ್ಥೆಯಲ್ಲಿಯ ನ್ಯೂನತೆಗಳು ಮತ್ತು ಸುಧಾರಣೆಗಳ ಬಗ್ಗೆ ಅಪಾರ ಅಧ್ಯಯನ ಮಾಡಿರುವ ಬೆಂಗಳೂರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ ಸಾಕಷ್ಟು ಕೆಲಸ ಮಾಡುವ ಮೂಲಕ ಹೆಸರು ಮಾಡಿ, ಸಂಸದರೂ ಆಗಿದ್ದ ಸಿ.ನಾರಾಯಣಸ್ವಾಮಿಯವರು ಕೋರ್‌ಕಮಿಟಿಯ ಸದಸ್ಯರಾಗಿದ್ದರು.

ಈ ಸಮಿತಿ ನವೆಂಬರ್ ೭, ೨೦೧೪ರಲ್ಲಿ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿತು. ಅದರಲ್ಲಿ ಒಟ್ಟು ಎಂಬತ್ತು ಶಿಫಾರಸುಗಳಿದ್ದವು. ಆದರೆ ಸರ್ಕಾರ ಇಲ್ಲಿಯವರೆಗೆ ಅದರಲ್ಲಿ ಕೇವಲ ಮೂರನ್ನು ತೆಗೆದುಕೊಂಡು, ಅದರ ಜೊತೆಗೆ ತನ್ನ ಕಡ್ಡಾಯ ಮತದಾನ ಶಿಫಾರಸನ್ನು ಸೇರಿಸಿ ಕಾಯ್ದೆ ತಿದ್ದುಪಡಿ ಮಾಡಿತು. ಸಮಿತಿ ವರದಿಯಲ್ಲಿ ಸರ್ಕಾರ ಸ್ವೀಕರಿಸಿದ ಅಂಶಗಳೆಂದರೆ; ೧) ಐದು ವರ್ಷಗಳ ಮೀಸಲು ಅವಧಿಯನ್ನು ಎರಡು ಅವಧಿಗೆ, ಅಂದರೆ ಹತ್ತು ವರ್ಷಕ್ಕೆ ಬದಲಾಯಿಸಿದ್ದು, ೨) ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷರ ಅವಧಿಯನ್ನು ಐದು ವರ್ಷಕ್ಕೆ ವಿಸ್ತರಿಸಿ, ೩೦ ತಿಂಗಳೊಳಗೆ ಅವಿಶ್ವಾಸ ನಿರ್ಣಯ ಮಂಡನೆಗೆ ಅವಕಾಶ ನೀಡದಿರುವುದು, ಮತ್ತು ೩) ಮಹಿಳಾ ಮೀಸಲಾತಿಗೆ ಸಂಬಂಧಿಸಿದ ನಿಯಮಗಳನ್ನು ವಿವೇಚನಾತ್ಮಕವಾಗಿ ನಿಗದಿ ಪಡಿಸಿ ಮೀಸಲು ಸ್ಥಾನಗಳಲ್ಲಿ ಪುರುಷರಿಗೂ ಅವಕಾಶ ಹೆಚ್ಚಾಗುವಂತೆ ಮಾಡಿರುವುದು. (ಮಹಿಳಾ ಮೀಸಲಾತಿಯ ಗೊಂದಲದಿಂದಾಗಿ ಕಳೆದ ಬಾರಿಯ ಗ್ರಾಮಪಂಚಾಯಿತಿಗಳಲ್ಲಿ ರಾಜ್ಯದ ಒಟ್ಟಾರೆ ಎಸ್.ಸಿ/ಎಸ್.ಟಿ ಗಳಿಗೆ ಮೀಸಲಿದ್ದ ಸುಮಾರು ೧೬,೦೦೦ ಸದಸ್ಯರಲ್ಲಿ ಸುಮಾರು ೧೩,೦೦೦ ಸದಸ್ಯರು ಮಹಿಳೆಯರೇ ಆಗಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಜಿಲ್ಲಾ ಪಂಚಾಯಿತಿಯ ಸ್ಥಾನವೊಂದು ಕಳೆದ ಎರಡು ದಶಕಗಳಿಂದಲೂ ಮಹಿಳಾ ಎಸ್.ಟಿ. ಅಭ್ಯರ್ಥಿಗೇ ಮೀಸಲಾಗಿತ್ತು. ಇಂತಹವು ಈ ಬಾರಿಯ ತಿದ್ದುಪಡಿಗಳಿಂದಾಗಿ ಬದಲಾಗಿವೆ.)

ಆದರೆ, ಚುನಾವಣೆಗೆ ಸಂಬಂಧಿಸಿದ ಇನ್ನೂ ಹಲವು ಶಿಫಾರಸುಗಳನ್ನು ಸರ್ಕಾರ ಈ ಬಾರಿಯ ಗ್ರಾಮ ಪಂಚಾಯಿತಿ ಚುನಾವಣೆಗೆ ಒಪ್ಪಿಕೊಂಡಿಲ್ಲ. ಚುನಾವಣೆಯಲ್ಲಿ ಹಣದ ಪ್ರಭಾವವನ್ನು ತಡೆಯಲು ಪಂಚಾಯಿತಿ ಚುನಾವಣಾ ಪ್ರಚಾರ ಸಭೆಗಳು ಮತ್ತು ಕರಪತ್ರಗಳ ವೆಚ್ಚವನ್ನು ಸರ್ಕಾರವೇ ಭರಿಸಿ, ಮದ್ಯ ಹಂಚಿ ಮತದಾರರಿಗೆ ಆಮಿಷ ಒಡ್ಡುವುದನ್ನು ತಡೆಯಲು ಚುನಾವಣೆ ಘೋಷಣೆಯಾದ ದಿನದಿಂದ ಮುಗಿಯುವವರೆಗೆ ಮದ್ಯದಂಗಡಿಗಳನ್ನು ಬಂದ್ ಮಾಡಬೇಕು, ಆ ಪ್ರದೇಶದ ಮದ್ಯದಂಗಡಿಗಳ ಕೀಲಿಯನ್ನು ಜಿಲ್ಲಾಧಿಕಾರಿಗಳ ವಶದಲ್ಲಿ ಇರಿಸಬೇಕು ಎಂಬ ಶಿಫಾರಸನ್ನು ಅದು ಕಾರ್ಯಸಾಧುವಲ್ಲ ಎಂದು ಕೈಬಿಟ್ಟಿದೆ. ಹಾಗೆಯೇ, ಗ್ರಾಮಪಂಚಾಯಿತಿಯಲ್ಲಿ ಏಕಸದಸ್ಯ ವಾರ್ಡಿನ ಶಿಫಾರಸು. ಇವತ್ತಿನ ಗ್ರಾಮ ಪಂಚಾಯಿತಿ ವ್ಯವಸ್ಥೆಯಲ್ಲಿ ಮೀಸಲಾತಿಯ ಕಾರಣಕ್ಕಾಗಿ ಬಹುತೇಕ ಎಲ್ಲಾ ಜನ ಮತ್ತು ಲಿಂಗ ವರ್ಗಗಳಿಗೆ ಪ್ರಾತಿನಿಧ್ಯ ದೊರಕುತ್ತಿದೆ. ಅಷ್ಟರಮಟ್ಟಿಗೆ ಅದು ಸರಿ. ಆದರೆ, ಇದು ಒಂದು ಜಾತ್ಯತೀತ ವ್ಯವಸ್ಥೆಯನ್ನು ಬಲಪಡಿಸುವ ಬದಲಿಗೆ ಕೆಲವು ಸಂದರ್ಭಗಳಲ್ಲಿ ಜಾತಿ ವೈಷಮ್ಯಗಳನ್ನು ಹುಟ್ಟುಹಾಕುತ್ತಿದೆ. ಯಾವುದೇ ಒಂದು ಮೀಸಲಾತಿ ವರ್ಗದ ಅಭ್ಯರ್ಥಿ ಸಾಮಾನ್ಯ ವರ್ಗದ ಅಭ್ಯರ್ಥಿಗಿಂತ ಹೆಚ್ಚಿನ ಮತಗಳನ್ನು ಪಡೆದರೆ, ಆತ/ಆಕೆಯನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸಿ ಮೀಸಲಾತಿ ವರ್ಗದಲ್ಲಿ ಇನ್ನೊಂದು ಹೆಚ್ಚಿನ ಅವಕಾಶ ಕೊಡುವಂತಹ ಕ್ರಮ ಇದೆ. ಇದರಿಂದ ರಾಜ್ಯದ ಹಲವಾರು ಕಡೆ ಮೇಲ್ಜಾತಿಗಳ ಜನ ಮೀಸಲು ಕ್ಷೇತ್ರದ ಅಭ್ಯರ್ಥಿಗಳಿಗೆ ಮತವನ್ನೇ ಹಾಕುತ್ತಿಲ್ಲ. ಒಂದು ಮತವನ್ನು ಮೀಸಲು ಮತ್ತು ಇನ್ನೊಂದು ಮತವನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಚಲಾಯಿಸಬೇಕಾದ ಸಂದರ್ಭದಲ್ಲಿ ತಮ್ಮ ಮತವನ್ನು ಕೇವಲ ಸಾಮಾನ್ಯ ಅಭ್ಯರ್ಥಿಗಳಿಗೆ ಮಾತ್ರ ನೀಡುತ್ತಿದ್ದಾರೆ. ಇದಕ್ಕೆ ಒಂದೇ ಮತಪತ್ರ ಇರುವುದೂ ಕಾರಣವಾಗುತ್ತಿದೆ. ಇವು ಕೇವಲ ಗೊಂದಲಗಳನ್ನಷ್ಟೇ ಅಲ್ಲ, ಇಡೀ ಊರಿಗೆ ಯಾವೊಬ್ಬ ಸಾಮಾನ್ಯ ವರ್ಗದ ಸದಸ್ಯನೂ ಇಲ್ಲದ ಪರಿಸ್ಥಿತಿ ನಿರ್ಮಿಸಿ ಮೇಲ್ಜಾತಿಗಳಲ್ಲಿ ಅತೃಪ್ತಿಯನ್ನೂ ಮೂಡಿಸುತ್ತಿದೆ. ಹಾಗೆಯೇ ಒಂದು ಊರಿನ ನಾಲ್ಕು ಜನ ಸದಸ್ಯರು ಆಯ್ಕೆಯಾದಾಗ, ಯಾರು ಯಾವ ವಾರ್ಡು/ಬೀದಿಯನ್ನು ಪ್ರತಿನಿಧಿಸುತ್ತಾರೆ ಎಂಬುದು ಸಾರ್ವಜನಿಕರಿಗೆ ಗೊತ್ತಾಗುವುದಿಲ್ಲ. ಗ್ರಾಮಸ್ಥರು ನಾಲ್ಕೂ ಜನ ಸದಸ್ಯರನ್ನು ಸಂಪರ್ಕಿಸಬೇಕಾಗುತ್ತದೆ ಮತ್ತು ಯಾರೂ ಹೊಣೆಗಾರಿಕೆ ತೆಗೆದುಕೊಳ್ಳದ ಸ್ಥಿತಿಯೂ ಸೃಷ್ಟಿಯಾಗುತ್ತದೆ. ಮೇಲಿನ ಎರಡೂ ನ್ಯೂನತೆಗಳನ್ನು ಏಕಸದಸ್ಯ ವಾರ್ಡಿನ ಶಿಫಾರಸನ್ನು ಒಪ್ಪಿಕೊಂಡಿದ್ದರೆ ಸರಿಪಡಿಸಲು ಸಾಧ್ಯವಿತ್ತು.

ಹಾಗಯೇ, ಗ್ರಾಮ ಪಂಚಾಯಿತಿಯ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಕ್ಕೆ ನೇರ ಚುನಾವಣೆ ಮಾಡಬೇಕು ಎನ್ನುವ ಶಿಫಾರಸನ್ನು ರಮೇಶ್‌ಕುಮಾರ್ ಸಮಿತಿ ಮಾಡಿರಲಿಲ್ಲ. ಆದರೆ ಇದರ ಬಗ್ಗೆ ಸಚಿವ ಹೆಚ್.ಕೆ.ಪಾಟೀಲರಿಗೆ ಬಹಳ ಆಸಕ್ತಿಯಿತ್ತು ಎಂದು ಹೇಳಲಾಗಿದೆ. ಆದರೆ ಆಗ ಕೇವಲ ಹಣ ಮತ್ತು ಪ್ರಭಾವ ಇರುವವರು ಮತ್ತವರ ಚೇಲಾಗಳೇ ಗೆದ್ದು ಬರುತ್ತಾರೆ ಎನ್ನುವ ಅಪಾಯ ಕಂಡಿದ್ದರಿಂದ ಅದನ್ನು ಅನುಷ್ಠಾನ ಮಾಡಲಿಲ್ಲ ಎನ್ನುವ ಮಾತು ಕೇಳಿಬಂದಿದೆ.

ಸರ್ಕಾರ ಇತ್ತೀಚಿನ ತಿದ್ದುಪಡಿಯ ಮೂಲಕ ಬದಲಾಯಿಸಿರುವುದು ಕೇವಲ ಚುನಾವಣೆಗೆ ಸಂಬಂಧಿಸಿದ ಕಾನೂನುಗಳನ್ನಷ್ಟೇ; ಅದೂ ಆಂಶಿಕವಾಗಿ. ಆದರೆ ಬರಲಿರುವ ಬೆಳಗಾವಿ ಅಧಿವೇಶನದಲ್ಲಿ ಆಡಳಿತ ಮತ್ತು ಹಣಕಾಸು ಯೋಜನೆಗಳಿಗೆ ಸಂಬಂಧಿಸಿದ ಶಿಫಾರಸುಗಳನ್ನು ಒಪ್ಪಿಕೊಳ್ಳಲಿದೆ ಮತ್ತು ತಿದ್ದುಪಡಿ ಮಾಡಲಿದೆ ಎನ್ನುವ ಮಾತು ಕೇಳಿಬರುತ್ತಿದೆ. ಇವೆಲ್ಲವೂ ಮುಂದಿನ ತಾಲ್ಲೂಕು ಮತ್ತು ಜಿಲ್ಲಾಪಂಚಾಯಿತಿ ವ್ಯವಸ್ಥೆಯ ಸುಧಾರಣೆಗೆ ಅನುಕೂಲವಾಗುತ್ತವೆ. ಆದರೆ, ಈಗಿನ ಗ್ರಾಮಪಂಚಾಯಿತಿಯ ಹಲವಾರು ಚುನಾವಣಾ ಸಂಬಂಧಿ ನ್ಯೂನತೆಗಳು ಇನ್ನು ಐದು ವರ್ಷಗಳ ಕಾಲ ಮುಂದುವರೆಯಲಿದೆ.

ಇದೆಲ್ಲದರ ನಡುವೆ, ಇಷ್ಟರಲ್ಲೇ ಗ್ರಾಮ ಪಂಚಾಯಿತಿಯ ಅಧ್ಯಕ್ಷ/ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಈಗಾಗಲೆ ಅನೇಕ ಅಭ್ಯರ್ಥಿಗಳು ತಮ್ಮತಮ್ಮ ಪಟಾಲಂಗಳಿಗೆ ತೀರ್ಥಯಾತ್ರೆ ಮಾಡಿಸುವುದು, ರೆಸಾರ್ಟ್ ರಾಜಕೀಯ, ಕಾರು-ಬೈಕುಗಳ ಉಡುಗೊರೆ, ಇತ್ಯಾದಿ ಘನ ಕಾರ್ಯಗಳಿಗೆ ಮುಂದಾಗಿದ್ದಾರೆ! ಮೊನ್ನೆಯ ಚುನಾವಣೆಗಳಲ್ಲಿ ತಮ್ಮ ಚಿಹ್ನೆ ಯಾವುದಿತ್ತೊ ಅದರ ನಿಜ ರೂಪಗಳನ್ನೇ ಸಾಧ್ಯವಾದಲ್ಲೆಲ್ಲ ಮತದಾರರಿಗೆ ಹಂಚಿದ್ದಾರೆ ಕೂಡ. ಕೆಲವು ಊರುಗಳಲ್ಲಿ ಕೋಟಿ ರೂಪಾಯಿಗಳನ್ನು ಕೇವಲ ೪೦೦-೫೦೦ ಮತಗಳಿಗೆ ಚೆಲ್ಲಿದ್ದಾರೆ. ಬಾಡೂಟ-ಹೆಂಡದ ಸರಬರಾಜಂತೂ ಅವ್ಯಾಹತವಾಗಿ ನಡೆದಿದೆ. ಕೆಲವು ಕಡೆ ಊರಿನ ದೊಡ್ಡ ಮನುಷ್ಯರು ಹರಾಜು ಹಾಕಿ ಸ್ಥಾನಗಳನ್ನು ಮಾರಿ ಪ್ರಜಾಪ್ರಭುತ್ವ ಮತ್ತು ಚುನಾವಣೆಯ ಆಶಯಗಳನ್ನು ಅಣಕಿಸಿದ್ದಾರೆ. ಇಂತಹ ಅಕ್ರಮ, ನಗೆಪಾಟಲುಗಳನ್ನು ನಿಲ್ಲಿಸಬೇಕೆಂದರೆ ಕೇವಲ ಕಾನೂನನ್ನು ಗಟ್ಟಿ ಮಾಡುವುದರಿಂದಷ್ಟೇ ಸಾಧ್ಯವಿಲ್ಲ. ಕೇವಲ ಜನಜಾಗೃತಿಯಿಂದಲೂ ಸಾಧ್ಯವಿಲ್ಲ. ಇವೆರಡೂ ಒಟ್ಟೊಟ್ಟಿಗೆ ಕಾಲಪ್ರವಾಹದಲ್ಲಿ ಸಾಗಬೇಕಿದೆ. ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲದಂತೆ ಮಾಡುವುದು, ಅಧಿಕಾರ ದುರುಪಯೋಗಕ್ಕೆ ಕಡಿವಾಣ, ಅಕ್ರಮ ಎಸಗಿದವರಿಗೆ ಶೀಘ್ರ ಮತ್ತು ಕಠಿಣ ಶಿಕ್ಷೆಯ ಭಯ, ಸ್ಪರ್ಧೆಗೆ ಅನರ್ಹತೆ, ಮುಂತಾದ ಕ್ರಮಗಳ ಜೊತೆಜೊತೆಗೆ ಜನರೂ ಸಹ ತಮ್ಮ ಸ್ಥಳೀಯ ಆಡಳಿತದಲ್ಲಿ ಆಸಕ್ತಿ ಮತ್ತು ಪಾಲುದಾರಿಕೆ ಹೆಚ್ಚಿಸಿಕೊಳ್ಳುವುದರಿಂದ ಸಾಧ್ಯವಾಗುತ್ತದೆ.

ಇಷ್ಟೆಲ್ಲ ನ್ಯೂನತೆ ಮತ್ತು ಅಕ್ರಮ, ಅನೈತಿಕತೆಗಳ ನಡುವೆಯೂ, ಮತ್ತೊಂದಿಷ್ಟು ಸುಧಾರಣೆಗಳು ಮತ್ತು ಅಧಿಕಾರ ವಿಕೇಂದ್ರೀಕರಣದ ಈ ಪ್ರಕ್ರಿಯೆಗೆ ಹೊಂದಿಕೊಳ್ಳುವ ಮತ್ತು ವಿಕಾಸಗೊಳ್ಳುವ ಸಮಯವನ್ನು ನಮ್ಮ ಸಮಾಜಕ್ಕೆ ಕೊಟ್ಟರೆ, ಬಹುಶಃ ಮುಂದಿನ ಒಂದೆರಡು ದಶಕಗಳಲ್ಲಿ ಈ ವ್ಯವಸ್ಥೆ ತನ್ನ ಬಹುತೇಕ ಋಣಾತ್ಮಕ ಅಂಶಗಳನ್ನು ಕಳೆದುಕೊಂಡು ಉತ್ತಮ ವ್ಯವಸ್ಥೆಯಾಗುತ್ತದೆ ಎನ್ನುವ ವಿಶ್ವಾಸ ನನಗಿದೆ.



**(ವೃತ್ತಿಯಿಂದ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ರವಿಕೃಷ್ಣಾರೆಡ್ಡಿಯವರಿಗೆ ರಾಜಕಾರಣದಲ್ಲೂ ಆಸಕ್ತಿಯಿದ್ದು, ಸದ್ಯ ಕರ್ನಾಟಕದ ಆಂ ಆದ್ಮಿ ಪಕ್ಷದ ಮುಖಂಡರಲ್ಲೊಬ್ಬರಾಗಿದ್ದಾರೆ)**

**ಸಂಗೀತ, ನೃತ್ಯ ನಾಟಕ ಇತ್ಯಾದಿ**

# ಶೋಧನೆಯ ಸುಳಿವಿಲ್ಲದ 'ಸತ್ಯಶೋಧಕ'



**ಸತ್ಯಶೋಧಕ ನಾಟಕದ ಒಂದು ದೃಶ್ಯ**

**ಪ್ರೊ.** ಜಿ.ಪಿ. ದೇಶಪಾಂಡೆ ವಿರಚಿತ ಮರಾಠಿ ನಾಟಕ 'ಸತ್ಯಶೋಧಕ' ಬಹು ಪ್ರಸಿದ್ಧ ಮತ್ತು ಚರ್ಚಿತವಾದ ನಾಟಕ. ಅದು ಜ್ಯೋತಿಬಾ ಫುಲೆ ದಂಪತಿಗಳ ಚಿಂತನೆ ಮತ್ತು ಹೋರಾಟಗಳನ್ನು ಆಧರಿಸಿದ 'ಕ್ರಾಂತಿಕಾರಿ' ನಾಟಕ. ಇದರ ಕನ್ನಡ ಆವೃತ್ತಿಯನ್ನು ಹೆಗ್ಗೋಡಿನ 'ಜನಮನದಾಟ'ದ ತಂಡ ಇತ್ತೀಚೆಗೆ ಹೆಗ್ಗೋಡಿನ ನೀನಾಸಂ ಸಭಾಂಗಣದಲ್ಲಿ ಪ್ರದರ್ಶಿಸಿತು. ಇದೇ ಪ್ರದರ್ಶನ ರಾಜ್ಯಾದ್ಯಂತ ನಡೆಯಲೂ ಏರ್ಪಾಟಾಗಿದ್ದು ಅದು ಈಗಾಗಲೇ ಹಲವು ಕಡೆ ನಡೆದಿದೆ ಕೂಡ.

'ಸತ್ಯ ಶೋಧಕ' ನಾಟಕದ ಈ ಕನ್ನಡ ಆವೃತ್ತಿಯನ್ನು ನಿರ್ದೇಶಿಸಿರುವವರು ಮೂಲ ಮರಾಠಿ ನಾಟಕವನ್ನು ನಿರ್ದೇಶಿಸಿರುವ ಅತುಲ್ ಪೇಠೆಯವರೇ. ಹಾಗಾಗಿಯೇ ಈ ಕನ್ನಡ ಆವೃತ್ತಿಯಲ್ಲಿ ಮರಾಠಿಯ ಗಮಲು ದಟ್ಟವಾಗಿಯೇ ಇದೆ. ಗಮಲು ಎಂದರೆ ಜನಪ್ರಿಯ ಮರಾಠಿ ರಂಗಸಂಗೀತ ಮತ್ತು ನೃತ್ಯಗಳ ವಿಜೃಂಭಣೆ. ಹಾಗೆ ನೋಡಿದರೆ ಇದೇ ಈ ನಾಟಕದ ನಿಜ ಆಕರ್ಷಣೆಯೂ ಆಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ, ಇದನ್ನು ನಾಟಕವೆಂದು ಕರೆಯಲಾಗಿದ್ದರೂ, ಇದರಲ್ಲಿ ಭರ್ಜರಿ ಎನಿಸುವ ಈ ಹಾಡು–ಕುಣಿತಗಳ ಹೊರತಾಗಿ ನಿಜವಾದ ನಾಟಕವೆನ್ನುವುದು ಹೆಚ್ಚೇನೂ ಇಲ್ಲ.

೧೯ನೇ ಶತಮಾನದಲ್ಲೇ ಜಾತಿ ತಾರತಮ್ಯ, ಸ್ತ್ರೀ ಶೋಷಣೆ ಮತ್ತು ಮೂಢ ನಂಬಿಕೆಗಳ ವಿರುದ್ಧ ಹಾಗೂ ಶೂದ್ರಾತಿಶೂದ್ರರ ಮತ್ತು ಸಕಲ ಜಾತಿ–ಧರ್ಮಗಳ ಸ್ತ್ರೀಯರ ಶಿಕ್ಷಣಕ್ಕಾಗಿ ತೀವ್ರ ಪ್ರತಿಕೂಲ ವಾತಾವರಣದಲ್ಲಿಯೂ ದೊಡ್ಡ ಹೋರಾಟವನ್ನೇ ಆರಂಭಿಸಿದ ಮತ್ತು ಗೆದ್ದ ಫುಲೆ ದಂಪತಿಗಳ ಬದುಕು ಎಲ್ಲ ಅರ್ಥದಲ್ಲೂ ಕ್ರಾಂತಿಕಾರಿಯಾದದ್ದೇ. ಆದರೆ ಅದು ಇಲ್ಲಿ ತುಣುಕು ತುಣುಕುಗಳಲ್ಲಿ, ತೀರಾ ವಾಚ್ಯವಾಗಿ ಮತ್ತು ಅತಿ ಅಬ್ಬರದೊಂದಿಗೆ ಪ್ರಚಾರಾತ್ಮಕ ಸಾಕ್ಷ್ಯಚಿತ್ರದಂತೆ ಪ್ರಸ್ತುತಗೊಂಡಿದೆ. ಅಂದರೆ, ಇಲ್ಲಿ 'ಒಳ'ನಾಟಕ ಕಡಿಮೆ. 'ಹೊರ'ನಾಟಕವೇ ಜಾಸ್ತಿ. ಫುಲೆ ಶೂದ್ರಾತಿಶೂದ್ರರ ಬದುಕಿನ ಸಕಲ ಸ್ತರಗಳ ಏಳಿಗೆಗಾಗಿ ಎಲ್ಲ ರೀತಿಯ ಸವಾಲುಗಳನ್ನೂ ಎದುರಿಸಿ ಅಖಂಡ ನಿಸ್ಪೃಹತೆಯಿಂದ ಹೋರಾಟ ನಡೆಸಿದರೂ, ಒಂದು ಘಟ್ಟದಲ್ಲಿ ಆ ಶೂದ್ರಾತಿಶೂದ್ರರೇ ಅವರ ವಿರುದ್ಧ ತಿರುಗಿಬಿದ್ದಾಗ ಅವರು ಕೈಗೊಂಡ ಒಂದು 'ಒಳ ಪ್ರಯಾಣ'ದ ದೃಶ್ಯದ ಹೊರತಾಗಿ ಇಡೀ ನಾಟಕ ಮೇಲ್ಮೈಯಲ್ಲೇ ಚಲಿಸಿ ನಮ್ಮನ್ನು ಕಾಡದೇ ಉಳಿದುಬಿಡುತ್ತದೆ. ಅನೇಕ ಬಾರಿ, ಸಿದ್ಧರಾಮಯ್ಯನವರ ಪ್ರಸಕ್ತ 'ಅಹಿಂದ' ರಾಜಕಾರಣಕ್ಕೆ ಪಕ್ಕವಾದ್ಯವಾಗಿ ಈ ಕನ್ನಡ ಆವೃತ್ತಿಯನ್ನು ತಯಾರಿಸಲಾಗಿದೆಯೇನೋ ಎಂಬ ಅನುಮನವೂ ಉಂಟಾಗುತ್ತದೆ!

ಅದೇನೇ ಇರಲಿ, ಈ ಎಲ್ಲ ಹೊರ ನಾಟಕದ ಸ್ಥೂಲತೆಯನ್ನು ಮೀರಿ ಇಡೀ ನಾಟಕವನ್ನು ಕೂತು ನೋಡುವಂತೆ ಜೀವಂತವಾಗಿಡುವುದು ಫುಲೆ ದಂಪತಿಗಳ ಪಾತ್ರ ವಹಿಸಿರುವ ಶಕೀಲ್ ಅಹಮದ್ ಮತ್ತು ಸಂಧ್ಯಾ ಅರಕೆರೆಯವರ ಸಂಯಮದ ಮನೋಜ್ಞ ಅಭಿನಯ. ಹಾಗೇ, ನಾಟಕದ ಸೂತ್ರಧಾರರ ಪಾತ್ರ ವಹಿಸಿದ ಡಿಂಗ್ರಿ ನರೇಶ್ ಮತ್ತು ಬಿ.ಸವಿತಾ ಅವರ ವಾಚನಾಭಿನಯವೂ ಉಲ್ಲೇಖಾರ್ಹ. ಜೊತೆಗೇ ಉಲ್ಲೇಖಿಸಬಹುದಾದ ಇನ್ನೊಂದು ಸಂಗತಿ ಎಂದರೆ, ನಾಟಕದ ಒಳಕೊರತೆಗಳನ್ನು, ತಮ್ಮ ಪರಿಣಾಮಕಾರಿ ಸಂಗೀತ ಸಂಯೋಜನೆ ಮತ್ತು ಪತ್ರಿಕಾ ವರದಿಯ ಭಾಷೆಯಲ್ಲಿ ರಚಿತವಾಗಿರುವ ಇಲ್ಲಿನ ಹಾಡುಗಳನ್ನು ಮಧುಮಧುರವಾಗಿ ಕೇಳಿಸುವಂತೆ ಮಾಡುವ ಸೃಜನಶೀಲ ಹಾಡುಗಾರಿಕೆಯ ಮೂಲಕ ಹೊರಗಿನಿಂದ ಆದಷ್ಟೂ ತುಂಬಲು ಯತ್ನಿಸಿರುವ ಪುರುಷೋತ್ತಮ ಬಳ್ಳಾರಿಯವರ ಪ್ರಯತ್ನ.



**ನಿರ್ದೇಶಕ ಅತುಲ್ ಪೇಠೆ**

ಡಿ.ಎಸ್. ಚೌಗುಲೆ ಅವರ ಅನುವಾದ ಸಂವಹನಶೀಲವಾಗಿದೆಯಾದರೂ, ಹಾಡುಗಳ ಸಾಹಿತ್ಯಗುಣ ಸುಧಾರಿಸಬಹುದಿತ್ತು ಮತ್ತು ಫುಲೆ ದಂಪತಿಗಳು ಸುಧಾರಣೆಗಳ ಬಗ್ಗೆ ಮಾತಾಡುವಾಗ ಅವರ ಬಾಯಲ್ಲಿ ಇಂದಿನ ಎಡಪಂಥೀಯ ಪಾರಿಭಾಷಿಕ ನುಡಿಗಟ್ಟುಗಳಿಂದ ಕೂಡಿದ ಭಾಷೆಗೆ ಬದಲಾಗಿ ಸರಳ ಆಡುಮಾತುಗಳ ಭಾಷೆಯನ್ನಾಡಿಸಿದ್ದರೆ ಚೆನ್ನಿತ್ತು ಎನ್ನಿಸದಿರದು. ಅತುಲ್ ಪೇಠೆಯವರ ನಿರ್ದೇಶನದ ಬಗ್ಗೆ ಹೇಳುವುದಾದರೆ, ಅದು ಸಮಕಾಲೀನ ಮರಾಠಿ ರಂಗಭೂಮಿಯ ಸಾಮಾಜಿಕತೆಯ ಬೆಡಗನ್ನು ಮಾತ್ರ ಪರಿಚಯಿಸಿದಂತಿತ್ತು.

******

ಈ ನಾಟಕದ ನಿರ್ಮಾಣವನ್ನು ಪ್ರಾಯೋಜಿಸಿರುವ ಜನಮನದಾಟದ ಹಿಂದಿನ ಶಕ್ತಿ ಡಾ. ಎಂ. ಗಣೇಶ ನೀನಾಸಂ ರಂಗಶಿಕ್ಷಣ ಕೇಂದ್ರದಲ್ಲಿ ಅಧ್ಯಾಪಕರು. ಪ್ರತಿಭಾವಂತ ರಂಗನಿರ್ದೇಶಕರು. ಕಡಿಮೆ ಖರ್ಚಿನಲ್ಲಿ ಹೆಚ್ಚು ಪರಿಣಾಮಕಾರಿ ನಾಟಕಗಳನ್ನು ತಯಾರು ಮಾಡುವ ಅಪರೂಪದ ನಿರ್ದೇಶಕರೆಂದೇ ಹೆಸರಾದವರು. ಅವರ *ಉಚಲ್ಯ, ಊರುಕೇರಿ, ಗಾಂಧಿ ವರ್ಸಸ್ ಗಾಂಧಿ, ಬದುಕು ಬಯಲು* ಮುಂತಾದವು ಇದಕ್ಕೆ ಉದಾಹರಣೆಗಳು. ಅವರು ಈ 'ಸತ್ಯಶೋಧ' ನಾಟಕದ ತಯ್ಯಾರಿ ನಡೆದಿದ್ದಾಗ ನನಗೊಂದು ಕರೆ ಮಾಡಿ ಈ ನಾಟಕ ನಿರ್ಮಾಣಕ್ಕೆ ಒಂದೂವರೆ ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ ಎಂದಾಗ ನಾನು ನನ್ನ ಅಸಮಧಾನ ಸೂಚಿಸಿದೆ. ಇಂತಹ ಪ್ರಯೋಗಗಳಿಂದ ನಿಮ್ಮ ಪ್ರತಿಭಾ ವಿಶೇಷತೆಯನ್ನು ಕಳೆದುಕೊಳ್ಳುವಿರಿ ಎಂದು ಎಚ್ಚರಿಸಿದೆ ಕೂಡ.

ಆದರೆ ಗಣೇಶ ಅವರು ಮುಂಬೈನಿಂದ ಬಂದ ನಿರ್ದೇಶಕರು ಮತ್ತು ಅವರ ತಂಡದ ನಿರ್ವಹಣೆಯ ಖರ್ಚಿನ ಅನಿವಾರ್ಯತೆಯನ್ನು ವಿವರಿಸಿದಾಗ, ಸ್ವಲ್ಪ ಸಹಾನುಭೂತಿ ಉಂಟಾಗಿ 'ಹೊಸ ಮನುಷ್ಯ' ಪತ್ರಿಕೆಯ ಪರವಾಗಿ ಗೆಳೆಯರಿಂದ ಒಂದಿಷ್ಟು ಹಣ ಸಂಗ್ರಹಿಸಿ, ಅದಕ್ಕೆ ನಾನೂ ಒಂದಷ್ಟು ಸೇರಿಸಿ ಒಟ್ಟು ಹದಿನೈದು ಸಾವಿರ ರೂಪಾಯಿಗಳನ್ನು ನೀಡಿದೆ. ಈ ನನ್ನ ಸಹಾನೂಭೂತಿಯ ಪ್ರಯತ್ನಕ್ಕೆ ಕೈಜೋಡಿಸಿ ತಮ್ಮ ಶಕ್ತ್ಯಾನುಸಾರ ಹಣ ನೀಡಿದ ಟಿ.ಎಲ್. ರೇಖಾಂಬ, ಟಿ.ಅವಿನಾಶ್, ಬಿ.ಎಸ್. ದಿವಾಕರ್, ಎಂ.ರಾಜು, ಶೇಖರ್ ಗೌಳೇರ್, ಎಂ. ಚಂದ್ರಶೇಖರಯ್ಯ, ನಿಸಾರ್ ಅಹಮದ್, ಮಲ್ಲಿಕಾರ್ಜುನ ಮೇಟಿ, ಸಬಿತಾ ಬನ್ನಾಡಿ, ದಿವಾಕರ ಹೆಗ್ಡೆ, ಸಿರಾಜ್ ಅಹಮದ್ ಮತ್ತು ಎಂ.ರಾಘವೇಂದ್ರ ಅವರಿಗೆ ಪತ್ರಿಕೆಯ ಪರವಾಗಿ ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ.

**–ಡಿಎಸ್. ನಾಗಭೂಷಣ**

**ಪ್ರಿಯ ಓದುಗರೇ,**

**ಪತ್ರಿಕೆಯಲ್ಲಿನ ಲೇಖನಗಳ ಬಗ್ಗೆ ತಮ್ಮ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಕಳಿಸಬಯಸುವವರು ಆದಷ್ಟೂ ಸಂಕ್ಷಿಪ್ತವಾಗಿ–ಹೆಚ್ಚೆಂದರೆ ೨೦೦ ಶಬ್ದಗಳಲ್ಲಿ– ಆಯಾ ಸಂಚಿಕೆಯ ತಿಂಗಳ ೨೦ರೊಳಗೆ ಬರೆದು ಕಳಿಸಬಹುದು ಅಥವಾ ಮೇಲ್ ಮಾಡಬಹುದು.**

**ಪತ್ರಿಕೆಯ ಬಹಳಷ್ಟು ಲೇಖನಗಳು ಆಹ್ವಾನಿತವಾಗಿರುವದರಿಂದ, ಸ್ವಯಂಪ್ರೇರಣೆಯಿಂದ ಲೇಖನಗಳನ್ನು ಕಳಿಸಬಯಸುವವರು ಮೊದಲು ಸಂಪಾದಕರೊಂದಿಗೆ ದೂರವಾಣಿ ಮೂಲಕ ಸಮಾಲೋಚಿಸಿದ ನಂತರ ತಮ್ಮ ಲೇಖನಗಳನ್ನು ಕಳಿಸಲು ಕೋರುತ್ತೇವೆ–ಸಂಪಾದಕ**

## ಪುಸ್ತಕಾವಲೋಕನ

ಪು: **ಗಾಂಧಿ ಪ್ರಣೀತ ಧರ್ಮದರ್ಶಿತ್ವ** ಲೇ. **ಪ. ಮಲ್ಲೇಶ್** ಪ್ರ:**ಅನನ್ಯ ಪ್ರಕಾಶನ**, ಮೈಸೂರು ಪು: ೧೬೮ ಬೆಲೆ: **ರೂ ೧೬೦/-**

# ಉಲ್ಲೇಖ-ಉವಾಚಗಳ ಗೊಂಡಾರಣ್ಯ




**ಲೇ**ಖಕ ಪ. ಮಲ್ಲೇಶ್ ಹಿರಿಯ ಸಮಾಜವಾದಿಗಳು. ಮೂಲ ಸಮಾಜವಾದಿ ಪಕ್ಷದ ಸದಸ್ಯರಾಗಿದ್ದವರು. ಸಮಾಜವಾದಿ ಪಕ್ಷದ ಲೇಖಕ-ಬುದ್ಧಿಜೀವಿ ಗುಂಪು ೭೦-೮೦ರ ದಶಕಗಳಲ್ಲಿ ಕೈಗೊಂಡ ಜಾತಿವಿನಾಶ ಸಮ್ಮೇಳನ, ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ, 'ಮಾನವ' ಪತ್ರಿಕೆಯ ಪ್ರಕಾಶನ, ನವನಿರ್ಮಾಣ ಸಮಿತಿ ಹಾಗೂ ಜೆಪಿಯವರ ಸಂಪೂರ್ಣ ಕ್ರಾಂತಿ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಸಮಾಜವಾದಿ ಪಕ್ಷ ಜನತಾಪಕ್ಷದಲ್ಲಿ ಲೀನಾವಾದ ನಂತರ ಆ ಪಕ್ಷದ ಅಧಿಕೃತ ಸದಸ್ಯರಾಗಿ ಅದರ ರಾಜಕಾರಣದಲ್ಲೂ ಭಾಗಿಯಾಗಿ ಒಮ್ಮೆ ಚುನಾವಣೆಗೆ ನಿಂತೂ ಅದರ 'ಸವಿ' ಅನುಭವಿಸಿದವರು. ಬಹಳಷ್ಟು ಸಮಾಜವಾದಿಗಳಂತೆ ಗಾಂಧಿ ವಿಚಾರಗಳ ಬಗ್ಗೆ ಒಲವುಳ್ಳವರಾಗಿ ಹಲವು ಗಾಂಧಿವಾದಿ ಸಂಘ-ಸಂಸ್ಥೆಗಳೊಂದಿಗೂ ಸಂಪರ್ಕವಿರಿಸಿಕೊಂಡವರು. ಅವರನ್ನು ನಾನು ಮುವ್ವತ್ತೈದು ವರ್ಷಗಳಿಂದ ಬಲ್ಲೆ. ಎಪ್ಪತ್ತರ ಹರೆಯದಲ್ಲೂ ಹದಿವಯಸ್ಸಿನವರ ಉತ್ಸಾಹದೊಂದಿಗೆ ಅವರು ಗಾಂದಿವಾಧಿ-ಸಮಾಜವಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವವರು.

ಮಲ್ಲೇಶ್ ಅವರ ಬರವಣಿಗೆಯ ಹವ್ಯಾಸದ ಹೆಚ್ಚು ಪರಿಚಯವಿಲ್ಲದ ನಾನು ಅವರ ಈ ಪುಸ್ತಕವನ್ನು ಸಾಕಷ್ಟು ಕುತೂಹಲದಿಂದಲೇ ಓದಿದೆ. ಪುಸ್ತಕವನ್ನು ಮಲ್ಲೇಶ್, ಗಾಂಧಿವಾದದ ವಿವಿಧ ಪರಿಕಲ್ಪನೆಗಳನ್ನು-ಸತ್ಯ, ಅಹಿಂಸೆ, ಸತ್ಯಾಗ್ರಹ, ಅಪರಿಗ್ರಹ, ಸರ್ವೋದಯ ಇತ್ಯಾದಿ-ಎಂಟು ಅಧ್ಯಾಯಗಳಲ್ಲಿ ವಿಂಗಡಿಸಿ ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ಕೊನೆಯ ಒಂಬತ್ತನೇ ಅಧ್ಯಾಯದಲ್ಲಿ ಲೋಹಿಯಾ ಅವರು ಗಾಂಧಿಯ ಧರ್ಮದರ್ಶಿತ್ವದ ಪರಿಕಲ್ಪನೆಗೆ ಒಂದು ವಾಸ್ತವ ಆಕಾರ ಕೊಡಲು ತಮ್ಮ ಜೀವನದ ಕೊನೆಯ ದಿನಗಳಲ್ಲಿ ಲೋಕಸಭೆಯಲ್ಲಿ ಮಂಡಿಸಲೆತ್ನಿಸಿದ *ಭಾರತೀಯ ಧರ್ಮದರ್ಶಿತ್ವ ೧೯೬೭ರ* ಕರಡು ಮಸೂದೆಯ ಕನ್ನಡಾನುವಾದವನ್ನು ನೀಡಿದ್ದಾರೆ.

ಈ ಪುಸ್ತಕವನ್ನು ಬರೆಯಲು ಲೇಖಕರು ಸಾಕಷ್ಟು ಪರಿಶ್ರಮಿಸಿದ್ದಾರೆ. ಗಾಂಧಿ ಸಾಹಿತ್ಯ ಮತ್ತು ಗಾಂಧಿ ಕುರಿತ ಸಾಹಿತ್ಯದ ವ್ಯಾಪಕ ಅಧ್ಯಯನದ ಸಾಕ್ಷಿಗಳು ಈ ಪುಸ್ತಕದ ತುಂಬಾ ಉಲ್ಲೇಖಗಳ ಮೇಲೆ ಉಲ್ಲೇಖಗಳ ರೂಪದಲ್ಲಿ ಕಾಣಸಿಗುತ್ತವೆ. ಆದರೆ ತೊಂದರೆ ಎಂದರೆ, ಲೇಖಕರು ಆ ಉಲ್ಲೇಖಗಳ ರಾಶಿಯಲ್ಲೇ ಮುಳುಗಿಹೋಗಿ ದಾರಿಗಾಣದೆ ಆ ರಾಶಿಯ ಸುತ್ತಲೇ ಗಿರಕಿ ಹೊಡೆಯುತ್ತಾ ತಾವು ಹೇಳಬೇಕಾದ್ದನ್ನು ಸ್ಪಷ್ಟವಾಗಿ ಹೇಳಲಾಗದೆ ಭಾರಿ ಭಾರಿ ಶಬ್ದಗಳ ಹೆಣಿಗೆಯ ಉರುಳಲ್ಲಿ ತಾವೇ ಸಿಕ್ಕಿಹಾಕಿಕೊಳ್ಳುತ್ತಾರೆ. ಈ ಕೆಲವು ಉದಾಹರಣೆಗಳನ್ನು ನೋಡಿ:

'ಅಧ್ಯಾತ್ಮ ಮತ್ತು ನೈತಿಕೆಯ ಪ್ರಭಾವವಲಯದಲ್ಲಿ ಗಾಂಧಿ ಆರ್ಥಿಕ ಸುಳಿವುಗಳನ್ನು ಧ್ವನಿತವಾಗಿ ಪರಿಭ್ರಮಿಸಿದರು. ವ್ಯಕ್ತಿಗಳ ಜೀವನದಲ್ಲಿ ಧರ್ಮ ಪವಾಡ ಸದೃಶ ಕ್ರಿಯೆಯಲ್ಲಿ ತೊಡಗುವುದಲ್ಲದೆ ಮಾದರಿ ಬದುಕಿನ ಪ್ರಮುಖ ಅಂಗವಾಗಿ ಕೈಂಕರ್ಯ ಪಡೆಯುತ್ತದೆ' (ಪು೧೯)

'ಸಾಮ್ರಾಜ್ಯಶಾಹೀ, ವಸಾಹತುಶಾಹೀ ಮತ್ತು ಬಂಡವಾಳಶಾಹಿಗಳ ಬಿಗಿಮುಷ್ಠಿಯಲ್ಲಿ ಭಾರತದ ಅಸ್ತವ್ಯಸ್ತವಾದ ಚರಿತ್ರೆ ಹಸಿರಾಗಿರುವಾಗಲೇ ಜಾಗತಿಕ ಕೈಗಳಲ್ಲಿ ಸಂಪತ್ತು ಕೇಂದ್ರೀಕೃತಗೊಂಡು ಸಾರ್ವತ್ರಿಕ ಬದುಕು ಪಕ್ವಾತೀತವಾಗಿ ಚದುರಿಹೋಗಿವೆ' (ಪು: ೪೬)

'ಕ್ರಿಯಾಶೀಲತೆ, ಧೈರ್ಯಗಳಲ್ಲಿ ಮೂಲಭೂತ ಬದಲಾವಣೆ ಅಗತ್ಯ ಇಲ್ಲದೇ ಹೋದಲ್ಲಿ ಅನಾಸಕ್ತಿ ಹೇಡಿತನ ತಲೆ ಹಾಕುತ್ತದೆ. ಜತೆಗೆ ನಿರ್ಬಂಧ ಬಂಧದಲ್ಲಿ ಹಿಂಸೆ ಇಣುಕಬಾರದು ಹಾಗೂ ಪ್ರಗಲ್ಭರು ಕಟ್ಟಿಕೊಳ್ಳುವ ಸ್ವಾರ್ಥಪರ ಕೋಟೆಗಳಲ್ಲಿ ಕ್ರಿಯಾಶೀಲತೆಯನ್ನು ದೂರವಿಡಬೇಕು'. (ಪು: ೬೧)

'ಈ ವಿಶಿಷ್ಟವಾದ, ನಿಯತವಾದ, ಕರಾರುವಾಕ್ಕಾದ ಹಂಚಿಕೆಯಲ್ಲಿ ಅಹಿಂಸೆ ಜೀವತಂತುವಾಗಿ ಲುಬ್ಧವಾಗಿರುತ್ತದೆ ಮತ್ತು ಧರ್ಮದರ್ಶಿತ್ವಕ್ಕೆ ಶ್ರೀರಕ್ಷೆಯಾಗಿ ನಿಲ್ಲುತ್ತದೆ' (ಪು: ೭೩)

'ಅವರ ನಿರೀಕ್ಷೆ ವ್ಯಕ್ತಿಯ ಸಮಷ್ಟಿಯ ಪ್ರಾಪಂಚಿಕ ಜೀವನದಲ್ಲಿ ಅವಿನಾಭಾವ ಸಂಬಂಧಗಳನ್ನು ಗುರುತಿಸುವ, ತಮ್ಮೊಳಗೇ ಅಂತರ್ಗತವಾಗಿ ನೆಲೆ ನಿಂತಿರುವ ಜವಾಬ್ದಾರಿ ತ್ಯಾಗಗಳ ಸಮನ್ವಯ ಕ್ರಿಯೆಯಯನ್ನು'. (ಪು: ೧೧೨)

'ಒಟ್ಟಾರೆ ಸಮಾಜದ ಆರೋಗ್ಯದ ಹಿತದೃಷ್ಟಿಯುಳ್ಳ ಸಮಂಜಸ ಪ್ರತಿಕ್ರಿಯೆಯ ಬದ್ಧತೆಯಿಂದ ವ್ಯವಹರಿಸಬೇಕು' (ಪು: ೧೪೫)

ಲೇಖಕರು ತಮ್ಮ ಪರಿಚಯದಲ್ಲಿ, ತಾವು ಡಿಎಲ್‌ಎನ್ ಮತ್ತು ತೀನಂಶ್ರೀಯವರಿಂದ ಕನ್ನಡ ಕಲಿತದ್ದು ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆದರೆ ಈ ಕನ್ನಡವನ್ನು ಏನೆಂದು ಓದಿ ಅರ್ಥ ಮಾಡಿಕೊಳ್ಳುವುದು? ಪುಸ್ತಕದ ಮೊದಲಿಂದ ಕೊನೆವರೆಗೆ ಆವರಿಸಿರುವ ಅರ್ಥಸಂದಿಗ್ಧತೆಗಳನ್ನು ಹೊತ್ತ ಭಾರಿ ಶಬ್ದಗಳ ಹೆಬ್ಬಂಡೆಗಳ ಮಧ್ಯೆ ದಾರಿ ಮಾಡಿಕೊಂಡು, ಕಾಲು ಕಾಲಿಗೆ ತೊಡರಿಕೊಳ್ಳುವ ಗಾಂಧಿ ಮತ್ತು ಗಾಂಧಿ ವಿದ್ವಾಂಸರ ಉವಾಚಗಳ ಹೆಬ್ಬಳ್ಳಿಗಳನ್ನು ನಿವಾರಿಸಿಕೊಂಡು ಪುಸ್ತಕವನ್ನು ಅಂತೂ ಓದಿ ಮುಗಿಸಿದಾಗ ಸ್ಥೂಲವಾಗಿ ನಮಗೆ ಗೊತ್ತಾಗುವುದು, ಇವರು ಹೇಳುತ್ತಿರುವುದು ಸಮಾಜವಾದಿಗಳು, ವಿಶೇಷವಾಗಿ ಸರ್ವೋದಯ ಸಮಾಜವಾದಿಗಳು ಪುರಾತನ ಕಾಲದಿಂದಲೂ ಹೇಳುತ್ತಿರುವ ರಾಜಕೀಯ ಕಥೆಯನ್ನೇ ಎಂದು. ಅದೆಂದರೆ, ನೆಹ್ರೂ, ಅವರು ಗಾಂಧಿ ಅರ್ಥಶಾಸ್ತ್ರದ ಸೂತ್ರಗಳನ್ನು ಪಾಲಿಸಲು ನಿರಾಕರಿಸಿದ ಪರಿಣಾಮವಾಗಿ ದೇಶ ಸಂಕಷ್ಟಕ್ಕೆ ಸಿಲುಕಿ, ಇಂದಿನ ಜಾಗತೀಕರಣಕ್ಕೆ ಕಾರಣವಾಗಿದ್ದು, ಗ್ರಾಮ ಸ್ವರಾಜ್ಯ ಸ್ಥಾಪನೆಯ ಮೂಲಕ ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದು. ಮಲ್ಲೇಶ್ ಅವರ ಮಾತುಗಳಲ್ಲೇ ಹೇಳುವುದಾದರೆ: 'ಗಾಂಧೀಜಿಯ ಗ್ರಾಮ ಸ್ವರಾಜ್ಯವನ್ನು ನಿಷ್ಠೆಯಿಂದ ಪರಿಪಾಲಿಸಿದ್ದೇ ಆದರೆ ಗ್ರಾಮೀಣ ಭಾರತ ಕಾಯಕದಲ್ಲಿ ತಲ್ಲೀನನಾಗಿ ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತದೆ' (ಪು: ೧೨೦)

ನಲವತ್ತು-ಐವತ್ತು ವರ್ಷಗಳ ಕಾಲ ಸಮಾಜವಾದಿ ರಾಜಕಾರಣ ಮಾಡಿರುವ ಮಲ್ಲೇಶ್ ಅವರಿಗೆ ಇಂತಹ ಗ್ರಾಮ ಸ್ವರಾಜ್ಯದ ಕನಸು ಇನ್ನೂ ಬೀಳುತ್ತಿದೆ ಎಂಬುದು ಸಂತೋಷದ ವಿಚಾರವೇ ಆದರೂ, ಅವರ ಈ ರಾಜಕಾರಣ, ಅದನ್ನಿನ್ನೂ ಕನಸಾಗಿ ಮಾತ್ರ ಏಕೆ ಕಾಣುವಂತಾಗಿದೆ ಎಂದು ಕೇಳಿಕೊಳ್ಳುವಂತೆ ಮಾಡಿದ್ದರೆ, ಅವರು ಇಂತಹ ಪುರಾಣ ಪುಸ್ತಕವನ್ನು ಬರೆಯುತ್ತಿರಲಿಲ್ಲ. ಬದಲಿಗೆ ಈ ಜಾಗತೀಕರಣದ ಪರಿಣಾಮಗಳ ಮಧ್ಯೆ ಗಾಂಧಿ ಇದ್ದರೆ ಅವರ ಗ್ರಾಮ ಸ್ವರಾಜ್ಯದ ಮತ್ತು ಅದಕ್ಕೆ ಬೆನ್ನೆಲುಬಾಗಿರಬಹುದಾದ ಧರ್ಮದರ್ಶಿತ್ವ ಪರಿಕಲ್ಪನೆ ಹೇಗಿರುತ್ತಿತ್ತು ಎಂಬುದರ ಹೊಳಹುಗಳನ್ನು ಕುರಿತ ಪುಸ್ತಕವನ್ನು ಬರೆಯಬಹುದಿತ್ತೇನೋ. ಅದೇನೇ ಇರಲಿ, ಈ ಉವಾಚ-ಉಲ್ಲೇಖಗಳ ಗೊಂಡಾರಣ್ಯದ ನಡುವೆಯೂ ಇಂತಹ ಸುಲಭ ಸುಂದರ ಕನಸು ಕಾಣುವಂತಹ ಲೇಖಕರ ಭೋಳೆತನದಿಂದಾಗಿಯೋ ಏನೋ ಇಲ್ಲಿ 'ಚರ್ಚಿತ'ವಾಗಿರುವ ಸತ್ಯ, ಅಹಿಂಸೆ, ಸತ್ಯಾಗ್ರಹ, ಅಪರಿಗ್ರಹ, ಸರ್ವೋದಯ, ಗ್ರಾಮ ಸ್ವರಾಜ್ಯ, ಧರ್ಮದರ್ಶಿತ್ವ ಇತ್ಯಾದಿಗಳು ಹೇಗೆ ಒಂದಕ್ಕೊಂದು ಸಾವಯವವಾಗಿ ಸಂಬಂಧಿಸಿಕೊಂಡು ಒಂದು ಬದಲಿ ಬದುಕಿನ ಕ್ರಮದ ದರ್ಶನವನ್ನು ನೀಡುತ್ತವೆ ಎಂಬುದರ ಹೊಳಹನ್ನೂ ಈ ಪುಸ್ತಕ ನೀಡದಾಗಿದೆ. ಹಾಗಾಗಿಯೇ ಇವರು ಕೊನೆಯಲ್ಲಿ ಅನುವಾದ ಮಾಡಿಕೊಟ್ಟಿರುವ ಲೋಹಿಯಾ ಅವರ ಧರ್ಮದರ್ಶಿತ್ವ ಕರಡು ಮಸೂದೆಯ ತಲೆಬುಡವಾವುದೂ ಅರ್ಥವಾಗದಂತಿದೆ.

ಆದರೆ ಈ ಪುಸ್ತಕವನ್ನೋದಿದ್ದರಿಂದ ಒಂದು ಪ್ರಯೋಜನವಂತೂ ನನಗಾಗಿದೆ. ಇಲ್ಲಿನ ಕೆಲವು ಅಪರೂಪದ ಉವಾಚ-ಉಲ್ಲೇಖಗಳು ಗಾಂಧಿಯನ್ನು ಕುರಿತ ನನ್ನ ಆಸಕ್ತಿಯನ್ನು ಹೆಚ್ಚಿಸಿವೆ ಮತ್ತು ವಿಸ್ತರಿಸಿವೆ. ಹಾಗೆ ನೋಡಿದರೆ ಮಲ್ಲೇಶ್ ಈ ಪುಸ್ತಕವನ್ನು ಬರೆಯುವುದರ ಬದಲಾಗಿ ಇಲ್ಲಿನ ಉಲ್ಲೇಖ-ಉವಾಚಗಳನ್ನೇ ವ್ಯವಸ್ಥಿತವಾಗಿ ಜೋಡಿಸಿ ಪ್ರಕಟಿಸಿದ್ದರೆ ಗಾಂಧಿ ಅಧ್ಯಯನಕ್ಕೆ ಹೆಚ್ಚು ಪ್ರಯೋಜನವಾಗುತ್ತಿತ್ತು.

**-ಡಿ.ಎಸ್. ನಾಗಭೂಷಣ**

‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು!



–ಪ್ರೊ.ಜಿ.ಕೆ. ಗೋವಿಂದ ರಾವ್
ಮತ್ತು ಕುಟುಂಬ
ಬೆಂಗಳೂರು

‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು!



–ಡಾ. ಕೆ. ಮರುಳಸಿದ್ಧಪ್ಪ
ಮತ್ತು ಕುಟುಂಬ
ಬೆಂಗಳೂರು

**'ಹೊಸ ಮನುಷ್ಯ'ದ ಓದುಗರೆಲ್ಲರಿಗೂ ಹಾರ್ದಿಕ ಶುಭಾಶಯಗಳು!**



**–ರಾಜೇಂದ್ರ ಚೆನ್ನಿ**
ಮತ್ತು **ಕುಟುಂಬ**
**ಶಿವಮೊಗ್ಗ**

**ತಿಂಗಳ ಸಾಲುಗಳು...**



ಲೋಭ ಮನದ ಸೂತಕ
ಸುಳ್ಳು ನಾಲಗೆಯ ಸೂತಕ
ಪರಸ್ತ್ರೀ ರೂಪ ಕಣ್ಣಿನ ಸೂತಕ
ನಿಂದೆ ಮತ್ತು ಚಾಡಿ ಕಿವಿಯ ಸೂತಕ
ಈ ಸೂತಕಗಳ ಹೊರತಾಗಿ ಇನ್ನೆಲ್ಲ ಸೂತಕಗಳೂ ಬರೀ ಭ್ರಮೆ

–ಗುರು ನಾನಕ್

**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204 (Karnataka)